ಐಕ್ಯರಂಗ

ಸಂಪುಟ 15
ಸಂಚಿಕೆ 14

ರೂ. 2.00
11-4-1993

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ



ಪುಟ 4-5
ಕಯ್ಯೂರ ವೀರರ ಬಲಿದಾನಕ್ಕೆ ಐವತ್ತು ವರುಷ



ಪುಟ 2-3
ಇದೇಕೆ ಹೀಗೆ ಎಂದು ಯೋಚಿಸಬೇಡವೇ?
ಬಿಜೆಪಿ ಸಹಿ ಸಂಗ್ರಹದ ಈ ಪರಿ
ಕಯ್ಯೂರು ವೀರರು ನೀಡಿದ ಎಚ್ಚರಿಕೆ
ಭಗತ್‌ಸಿಂಗ್‌ರ ಕನಸೇನೆಂದು
'ಸಂಘ ಪರಿವಾರ'ಕ್ಕೆ ಗೊತ್ತಿದೆಯೇ?



ಪುಟ-5-6
ಬಡವರ ಕೂಳೂ ರಫ್ತು
ಎಕ್ಸಿಟ್ ನೀತಿಯೋ ಉದ್ಯೋಗ ನೀತಿ!
ವಿಮಾ ಕಂಪನಿಗಳಲ್ಲಿರುವ
ಜನತೆಯ ಹಣ ಯಾರಿಗಾಗಿ?

ಬದನವಾಳು ದಲಿತರ ಕಗ್ಗೊಲೆ

ಕಾಂಗ್ರೆಸ್ ರಾಜಕೀಯದ ದುಷ್ಟ ಫಲ

ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಬದನವಾಳು ಗ್ರಾಮದಲ್ಲಿ ಮಾರ್ಚ್. 26 ರಂದು ಮೂರುಜನ ಹರಿಜನರ ಕಗ್ಗೊಲೆ. ಹರಿಜನರ ಉದ್ಧಾರಕ್ಕಾಗಿ ಮಡಿವಂತ ಗಾಂಧಿಜಿಯವರೇ ಭೇಟಿ ನೀಡಿದ್ದ ಬದನವಾಳು ಗ್ರಾಮದಲ್ಲಿ ಹರಿಜನ ಉಪಾಧ್ಯಾಯರು ಅವರ ವಿದ್ಯಾರ್ಥಿಗಳಾಗಿದ್ದವರಿಂದಲೇ ಕೊಲೆಗೀಡಾದರು. ಅವರ ಜೊತೆಯಲ್ಲಿ ಅವರ ಮಗ, ಶಾಲೆಯ ಗುಮಾಸ್ತರ ಪ್ರಾಣ ಹರಣ. ಈ ರಾಕ್ಷಸ ಕೃತ್ಯಕ್ಕೆ ಹರಿಜನರಿಗೆ ದೇವಾಲಯದ ಪ್ರವೇಶದ ಹಕ್ಕನ್ನು ನಿರಾಕರಿಸಿದ್ದೇ ಪ್ರಮುಖ ಕಾರಣ. ಊರಿನ ಹಳೆಯ ಸಿದ್ಧೇಶ್ವರ ದೇವಾಲಯವನ್ನು ಜೀರ್ಣೋದ್ಧಾರ ಮಾಡಿಸಲು ಊರಿನವರೆಲ್ಲರಿಂದ ಹಣಸಂಗ್ರಹ. ಆಊರಿನ ಸರಿ ಸುಮಾರು ಅರ್ಧಭಾಗವೇ ಆಗಿದ್ದ ಹರಿಜನರ ಮನೆಯಿಂದಲೂ ಹಣಸಂಗ್ರಹಣೆಯ ಕಾಲಕ್ಕೆ ಹರಿಜನರ ಪ್ರಶ್ನೆ. ನಮ್ಮಿಂದ ಹಣಸಂಗ್ರಹಿಸುತ್ತಿರುವ ಈ ದೇವಾಲಯದಲ್ಲಿ ನಮಗೂ ಪೂಜೆಮಾಡಲು ಬಿಡುತ್ತೀರಾ? ಈ ಅವಕಾಶ ನೀಡಲಾಗುವುದೆಂದು ಆಶ್ವಾಸನೆಕೊಟ್ಟು ಅವರಿಂದ 15,000ಹೆಚ್ಚು ಹಣ ಹಾಗೂ ಶ್ರಮದಾನ ಪಡೆದ ಮೇಲೆ ದೊಡ್ಡ ದೊಡ್ಡ ಮಠಗಳು, ರಾಜಕಾರಣಿಗಳು ಭಾಗವಹಿಸಿದ ಉದ್ಘಾಟನಾ ಸಮಾರಂಭಕ್ಕೆ ಹರಿಜನರಿಗೆ ಆಹ್ವಾನವಿಲ್ಲ. ಅದು ಮಂತ್ರವಲ್ಲ ಹರಿಜನರಿಗೆ ದೇವಾಲಯ ಪ್ರವೇಶ ಮಾಡಲು ಬಿಡಬಾರದೆಂಬ ಮಾತುಗಳು ಶಾಸಕರು, ಎಂ.ಪಿ.ಗಳ ಹಾಜರಿಯಲ್ಲಿ.

ಈ ಮೋಸ ಹಾಗೂ ಪ್ರಜಾಸತ್ತಾತ್ಮಕ ಹಕ್ಕಿನ ವಂಚನೆಯಿಂದ ಕೃದ್ಧರಾದ ಹರಿಜನರ ಜಿಲ್ಲಾ ಮಟ್ಟದ ಸರ್ಕಾರೀ ಅಧಿಕಾರಿಗಳ ನೆರವಿನಿಂದ ದೇವಾಲಯ ಪ್ರವೇಶವನ್ನು ನಡೆಸಿಯೇ ಬಿಟ್ಟಿದ್ದಕ್ಕೆ ಪ್ರತಿಕಾರ ಈ ಕೊಲೆ. ಹೀಗೆ ಎರಡು ತಿಂಗಳ ಕಾಲ ಊರೇ ಹತ್ತಿ ದೇಯುತ್ತಿದ್ದರೂ ಮೇಲ್ಜಾತಿಗೆ ಸೇರಿದ ಪೋಲೀಸ್ ಅಧಿಕಾರಿಯಿಂದ ಅಲಕ್ಷ್ಯ. ಮೇಲ್ಜಾತಿಯವರಿಗೆ ಕುಮ್ಮಕ್ಕು ಒಟ್ಟು ಫಲ ಹರಿಜನರ ಕಗ್ಗೊಲೆ. ಅದರಲ್ಲಿಯೂ ಬದನವಾಳಿನ ಗ್ರಾಮ ಕಾಂಗ್ರೆಸ್ ಪಕ್ಷದ ಬಲವಾದ ಕೇಂದ್ರವಂತೆ. ಲಿಂಗಾಯತರೂ ಕಾಂಗ್ರೆಸ್ಸಿಗರು ಹರಿಜನರೂ ಕಾಂಗ್ರೆಸ್ಸಿಗರು. ಆದರೆ ವ್ಯತ್ಯಾಸವಿಷ್ಟೆ ಹರಿಜನರು ಅಲ್ಲಿಯ ಹರಿಜನ ಎಂ.ಪಿ. ಶ್ರೀನಿವಾಸ ಪ್ರಸಾದನ ಹಿಂಬಾಲಕರು, ಲಿಂಗಾಯಿತರು ಶಾಸಕ ಮಹಾದೇವನ ಶಿಷ್ಯರು. ಇವರ ನಡುವಿನ ರಾಜಕೀಯ ಭಿನ್ನಭಿಪ್ರಾಯವೂ ದೌರ್ಜನ್ಯದ ಹಿಂದಿದೆ.

ಇದು ಇತ್ತೀಚಿನ ದಿನಗಳಲ್ಲಿ ಇದು ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಮೂರನೇ ದುರ್ಘಟನೆ. ಇತ್ತೀಚಿನ ದಿನಗಳಲ್ಲಿ ನಮ್ಮ ರಾಜ್ಯದಲ್ಲಿ ಮೈಸೂರು ಜಿಲ್ಲೆಯಲ್ಲಿ, ಗುಲ್ಬರ್ಗಾ ರಾಯಚೂರು ಜಿಲ್ಲೆಗಳಲ್ಲಿ ಒಂದಾದ ಮೇಲೊಂದರಂತೆ ಹರಿಜನರ ಕಗ್ಗೊಲೆಗಳು, ಮೇಲ್ಜಾತಿಗಳು ಮತ್ತು ಹರಿಜನರ ನಡುವೆ ದ್ವೇಷದ ಕಿಚ್ಚು.

ಸರಗೂರಿನ ಕೊಲೆಗಳ ಹಿನ್ನೆಲೆಯಲ್ಲಂತೂ ಮೈಸೂರಿನಲ್ಲಿ ಮೇಲ್ಜಾತಿಯವರೆಲ್ಲಾ ಸೇರಿ ಹರಿಜನರ, ಕೆಳಜಾತಿಗಳ ವಿರುದ್ಧ ಒಂದು ಸಂಘವನ್ನು ಸ್ಥಾಪಿಸಿಕೊಂಡು ಸಮರವನ್ನೇ ಸಾರಿದ್ದಾರೆ. ನಿರಂತರವಾಗಿ ಅವರ ಸಭೆಗಳು, ಸಮಾಲೋಚನೆಗಳು, ದೆವರಿಕೆಗಳು ಸಾಗುತ್ತಿವೆ.

ಹೀಗೆ ಪ್ರತಿಗಾಮಿ ಪಟ್ಟಭದ್ರಶಕ್ತಿಗಳ ಬಲ ಹೆಚ್ಚುತ್ತಿರುವ ಪ್ರಕ್ರಿಯೆ ಒಂದೆಡೆ ಸಾಗುತ್ತಿದ್ದರೆ ಬದನವಾಳು ಪ್ರಕರಣಕ್ಕಾಗಲಿ ಹರಿಜನರ ಮೇಲಿನ ಕೊಲೆಯ ಸರಣಿಗಳಿಗೆ ಕರ್ನಾಟಕ ಸರ್ಕಾರದ ಪ್ರತಿಕ್ರಿಯೆ ಏನು?

ಘಟನೆ ಬೆಳಕಿಗೆ ಬಂದ ಕೂಡಲೇ ಮುಖ್ಯಮಂತ್ರಿಗಳು ಭೇಟಿ ಕೊಟ್ಟಿದ್ದಾರೆ. ಹಾಗೂ ಅಲ್ಲಿಯ ಹರಿಜನರು ಒತ್ತಾಯಿಸಿದಂತೆ ಸಿ.ಬಿ.ಐ. ತನಿಖೆಗೂ ಆಜ್ಞೆ ಮಾಡಿದ್ದಾರೆ. ಹಣದ ಪರಿಹಾರ ನೀಡಿದ್ದಾರೆ. ವಿಧಾನಸಭೆಯೂ ಚರ್ಚೆಮಾಡಿದೆ. ಈ ಸಮಸ್ಯೆಗೆ ಆದರೆ ಪರಿಹಾರವೇನು?

ಇದು ಸರ್ಕಾರದ ಉವಾಚ

ಕೊಲೆಯಾದ ಮಾಸ್ತರರ ಪ್ರತಿಮೆಯನ್ನು ಶಾಲೆಯ ಮುಂದೆ ನಿಲ್ಲಿಸುತ್ತೇವೆ ದೇವಸ್ಥಾನಕ್ಕೆ ಸರ್ಕಾರದ ಧನ ಸಹಾಯವನ್ನು ಹಿಂತೆಗೆದುಕೊಳ್ಳುತ್ತೇವೆ. ಹರಿಜನರಿಗೆ ಪ್ರವೇಶ ನೀಡದ ದೇವಸ್ಥಾನಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುತ್ತೇವೆ ಇತ್ಯಾದಿ.

ಇದೆಂತಹ ಹಾಸ್ಯಾಸ್ಪದ ಮಾತುಗಳು. ಇಡೀ ಸಮಸ್ಯೆಯ ಬಗ್ಗೆ ಸರ್ಕಾರದ ಬೇಜವಾಬ್ದಾರಿಯ ವರ್ತನೆಯನ್ನು ಇದು ಸಾಬೀತುಪಡಿಸುತ್ತದೆ. ಈ ಪ್ರತಿಮೆಸ್ಥಾಪನೆಯಾಗಲಿ, ದೇವಸ್ಥಾನಗಳನ್ನು ಸರ್ಕಾರದವಶಕ್ಕೆ ತೆಗೆದು ಕೊಂಡರಾಗಲಿ ಹರಿಜನರ ಮೇಲಿನ ದೌರ್ಜನ್ಯಗಳಿಗೆ ಪರಿಹಾರವೇ? ಈ ಸಮಸ್ಯೆಯ ಮೂಲಕ್ಕೆ ಹೋಗುವ ಪ್ರಯತ್ನವೇ ಇಲ್ಲ.

60 ವರ್ಷಗಳಿಂದ ಹರಿಜನೋದ್ಧಾರದ ಜಪವನ್ನು ಮಾಡಿಕೊಂಡು ಬಂದ ಈ ನಾಡಿನಲ್ಲಿ, ಮೈಸೂರು ಸಂಸ್ಥಾನದ ಹರಿಜನೋದ್ಧಾರದ ಬಗ್ಗೆ ಗಾಂಧೀಜಿಯವರೇ ಸರ್ಟೀಫಿಕೆಟ್ ನೀಡಿದ ಹಳ್ಳಿಯಲ್ಲಿಯೇ ಈ ಹರಿಜನರ ಮೇಲಿನ ಕಗ್ಗೊಲೆಗಳು ಏಕೆ? ಈ ಪ್ರಕರಣದ ಬಗ್ಗೆ ಸರ್ಕಾರದ ಕ್ರಮ ಏನು? ಮುಂದೆ ಕರ್ನಾಟಕದಲ್ಲೆಲ್ಲೂ ದೌರ್ಜನ್ಯಗಳು ಮರುಕಳಿಸದಂತೆ ಮಾಡುವ ಯೋಚನೆ ಗಾಂಧೀಜಿಯವರ ಏಕಮಾತ್ರ ವಾರಸುದಾರರೆಂದು ಸಾರುವ ಕಾಂಗ್ರೆಸ್ ಪಕ್ಷದಲ್ಲಿದೆಯೇ?

ಪುಟ 2 ನೋಡಿ

ಸಿಪಿಐ(ಎಂ) ರಾಜ್ಯ ಸಮಿತಿ ಖಂಡನೆ

ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಬದನವಾಳುವಿನಲ್ಲಿ ನಡೆದಿರುವ ಒಬ್ಬರು ಮುಖ್ಯೋಪಾಧ್ಯರು ಸೇರಿದಂತೆ ಮೂವರು ಕೊಲೆ ಮತ್ತು ದೌರ್ಜನ್ಯಗಳನ್ನು ಸಿ.ಪಿ.ಐ(ಎಂ) ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿ ಉಗ್ರವಾಗಿ ಖಂಡಿಸಿದೆ.

ಈ ಘಟನೆಯ ಕುರಿತು ನ್ಯಾಯಾಂಗ ವಿಚಾರಣೆಯನ್ನು ನಡೆಸಬೇಕೆಂದು, ಮುಂದೆ ದಲಿತರ ಮೇಲೆ ದೌರ್ಜನ್ಯ ನಡೆಯದಂತೆ ಎಚ್ಚರದ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ಆಗ್ರಹ ಪಡಿಸಿದೆ.

ಬ್ಯಾಂಕ್, ವಿಮಾ ನೌಕರರ ಮುಷ್ಕರಕ್ಕೆ ಅದ್ಭುತ ಯಶಸ್ಸು

ಬ್ಯಾಂಕ್, ವಿಮಾ ನೌಕರರು ಈಗಲೂ ದೇಶದ ಕಾರ್ಮಿಕ ಆಂದೋಲನದಲ್ಲಿ ಅಗ್ರಪಾತ್ರವಹಿಸುತ್ತಿದ್ದಾರೆ.

ಕಾಂ. ಸೂರಿ

ಮಾರ್ಚ್ 29,1993 ರಂದು ದೇಶದ ಆರ್ಥಿಕದ ನಾಡಿಯಂತಿರುವ ಸಾರ್ವಜನಿಕ ವಲಯದ ಬ್ಯಾಂಕುಗಳು, ಎಲ್.ಐ.ಸಿ., ಜಿ.ಐ.ಸಿ. ಹಾಗೂ ಇತರ ಹಣಕಾಸು ಸಂಸ್ಥೆಗಳ 12 ಲಕ್ಷ ನೌಕರರು ಮತ್ತು ಅಧಿಕಾರಿಗಳು ನಡೆಸಿದ ಒಂದು ದಿನದ ಸಾಂಕೇತಿಕ ಮುಷ್ಕರ ಇಡೀ ದೇಶದ ಹಣಕಾಸು ವ್ಯವಹಾರಗಳನ್ನು ಸ್ತಬ್ಧಗೊಳಿಸಿದೆ ಎಂದು ಎಲ್ಲಾ ಪತ್ರಿಕೆಗಳೂ ವರದಿಮಾಡಿವೆ. ಹಣಕಾಸು ಸಂಸ್ಥೆಗಳನ್ನು ಐ.ಎಂ.ಎಫ್. ಒತ್ತಡಕ್ಕೆ ತಲೆಬಾಗಿ ಖಾಸಗೀಕರಿಸುವುದನ್ನು ವಿರೋಧಿಸಿ, ಪೆನ್ಶನ್ ಮೂರನೇ ನಿವೃತ್ತಿವೇತನವಾಗಿ ದೊರೆಯಬೇಕು, ಈಗಾಗಲೇ ಅವಧಿ ಮುಗಿದಿರುವ ವೇತನ ಬೇಡಿಕೆಗಳ ಬಗ್ಗೆ ವಿಳಂಬ ತಂತ್ರವನ್ನು ಕೈಬಿಟ್ಟು ಮಾತುಕತೆ ಆರಂಭಿಸಬೇಕು ಹಾಗೂ ಎಲ್ಲರಿಗೂ ದೊನಸ್ ನೀಡಬೇಕು ಎಂದು ಒತ್ತಾಯಿಸಿ ಐಕ್ಯಹೋರಾಟ ಆರಂಭಿಸಿರುವ ಬ್ಯಾಂಕ್ ಹಾಗೂ ಇತರ ಹಣಕಾಸು ಸಂಸ್ಥೆಗಳ ನೌಕರರು ಈ ದೇಶವ್ಯಾಪಿ ಮುಷ್ಕರ ನಡೆಸಿದರು. ಬ್ಯಾಂಕ್ ನೌಕರರ ಒಂದು ದೊಡ್ಡ ಸಂಘ ಇದರಲ್ಲಿ ಭಾಗವಹಿಸದಿದ್ದರೂ, ಈ ಸಂಘ ತಾನು ಹೋರಾಡುತ್ತೇನೆ ಎಂದು ನೌಕರರನ್ನು ನಂಬಿಸಲು ಮಾರ್ಚ್ 18 ರಂದು ಮುಷ್ಕರ ನಡೆಸಿದ್ದರೂ ಮಾರ್ಚ್ 29 ರ ಮುಷ್ಕರ ಸಂಪೂರ್ಣ ಯಶಸ್ವಿಗೊಳಿಸುವುದನ್ನು ತಡೆಯಲು ಅದಕ್ಕಾಗಲಿಲ್ಲ ಎಂದೂ ತಿಳಿದುಬಂದಿದೆ.

ಮುಷ್ಕರದ ದಿನ ಬ್ಯಾಂಕ್, ವಿಮಾ ನೌಕರರು ದೇಶದೆಲ್ಲೆಡೆ ರ್‍ಯಾಲಿಗಳನ್ನು ಮತ ಪ್ರದರ್ಶನಗಳನ್ನು ನಡೆಸಿದರು. ಬೆಂಗಳೂರಿನಲ್ಲಿ ಮೈಸೂರು ಬ್ಯಾಂಕ್ ಮುಂದೆ ನಡೆದ ಬೃಹತ್ ರ್‍ಯಾಲಿಯಲ್ಲಿ ನೂರಾರು ನೌಕರರು, ಅಧಿಕಾರಿಗಳು ಉತ್ಸಾಹದಿಂದ ಪಾಲ್ಗೊಂಡಿದ್ದರು. ಬ್ಯಾಂಕ್, ವಿಮಾ ನೌಕರರು ಈಗಲೂ ದೇಶದ ಕಾರ್ಮಿಕ ಆಂದೋಲನದಲ್ಲಿ ತಮ್ಮ ಅಗ್ರ ಪಾತ್ರವನ್ನು ವಹಿಸುತ್ತಿದ್ದಾರೆ. ಎಲ್ಲಾ ಕಾರ್ಮಿಕ ಸಂಘಗಳ ಐಕ್ಯ ಆಂದೋಲನದ ಪ್ರಯತ್ನ ಸಾಗಿರುವಾಗ ಬ್ಯಾಂಕ್, ವಿಮಾ ನೌಕರರು ಈ ದಿಕ್ಕಿನಲ್ಲಿ ಆಗಲೇ ಹೆಜ್ಜೆಯಿಟ್ಟಿದ್ದಾರೆ. ನೌಕರರ, ಅಧಿಕಾರಿಗಳ, ಐಕ್ಯತೆ ಸಾಧಿಸುತ್ತಿದ್ದಾರೆ ಎಂದು ಹಣಕಾಸು ವಲಯದ ನೌಕರರ, ಅಧಿಕಾರಿಗಳ ಈ ಐಕ್ಯ ಹೋರಾಟವನ್ನು ಬೆಂಬಲಿಸುತ್ತಾ ಸಿ.ಐ.ಟಿ.ಯು ರಾಜ್ಯ ಅಧ್ಯಕ್ಷ ಸೂರ್ಯನಾರಾಯಣ ರಾವ್ ಅಭಿನಂದಿಸಿದರು. ಐದು ವರ್ಷಗಳ ಹಿಂದೆ ಬ್ಯಾಂಕ್ ಅಧಿಕಾರಿಗಳೂ ಈ ರೀತಿಯ ಮುಷ್ಕರಗಳಲ್ಲಿ ಭಾಗವಹಿಸಿ, ಪಿಕೆಟಿಂಗ್ ನಡೆಸುತ್ತಾರೆ ಎಂದು ಊಹಿಸಲು ಸಾಧ್ಯವಿರಲಿಲ್ಲ ಎಂದರು. ಕಾರ್ಮಿಕವರ್ಗದ ಐಕ್ಯತೆಯನ್ನು ಮುರಿಯುವ ಕೋಮುವಾದಿಗಳ ಪ್ರಯತ್ನಗಳನ್ನು ವಿಫಲಗೊಳಿಸಿ ಸರ್ಕಾರದ ಮಡಿಯುವ ಜನ- ವಿರೋಧಿ ನೀತಿಗಳ ವಿರುದ್ಧ ಬೃಹತ್ ಹೋರಾಟ ನಡೆಸಬೇಕು ಎಂದು ಕರೆ ನೀಡಿದರು. ಇನ್ನೊಂದು ಅಖಿಲ ಭಾರತ ಕಾರ್ಮಿಕ ಸಂಘಟನೆ ಹೆಚ್.ಎಂ.ಕೆ.ಪಿ.ಯ ಮುಖಂಡ ಮೈಕೆಲ್ ಫರ್ನಾಂಡೀಸ್‌ರವರೂ ಮುಷ್ಕರ ನಿರತ ನೌಕರರನ್ನು ಅಧಿಕಾರಿಗಳನ್ನು ಅಭಿನಂದಿಸಿ ತಮ್ಮ ಸಂಘಟನೆಯ ಸಂಪೂರ್ಣ ಬೆಂಬಲ ಸೂಚಿಸಿದರು.

ಈ ರ್‍ಯಾಲಿಯನ್ನುದ್ದೇಶಿಸಿ ಬ್ಯಾಂಕ್ ಅಧಿಕಾರಿಗಳ ಮುಖಂಡ ಆರ್.ಎಸ್. ಗೋಡ್‌ಬೋಳೆ, ಬ್ಯಾಂಕ್ ನೌಕರರ ಮುಖಂಡರಾದ ಎಸ್. ರೇವಣ್ಣ, ವೆಂಕಟನರಸಯ್ಯ, ವಿಮಾ ನೌಕರರ ಮುಖಂಡರಾದ ಕೆ.ವಿ. ಶ್ರೀನಿವಾಸ್, ಅಮಾನುಲ್ಲಾ ಖಾನ್ ಮಾತನಾಡಿ ದೇಶದ ಈಗಿನ ಆರ್ಥಿಕ ಹಿನ್ನೆಲೆಯಲ್ಲಿ ಈ ಹೋರಾಟದ ಮಹತ್ವನ್ನು ವಿವರಿಸಿದರು.

ಎಂದಿನಂತೆ ಬ್ಯಾಂಕ್, ವಿಮಾ ನೌಕರರು ಶ್ರೀಮಂತ ನೌಕರರು, ದೇಶವನ್ನು

ಪುಟ 6ಕ್ಕೆ

ವಾರದ ನುಡಿ

ಕಾರ್ಮಿಕರನ್ನು ಬೀದಿಗೆಸೆಯುವ ಎಕ್ಸಿಟ್ ನೀತಿಯೂ ಬೇಡ, ಮುಲಾಮು ಹಚ್ಚುವ 'ರಾಷ್ಟ್ರೀಯ ನವೀಕರಣ ನಿಧಿ'ಯೂ ಬೇಡ, ಒಂದು ಉದ್ಯೋಗ ನೀತಿ ರೂಪಿಸಿ ಎಂಬ ಕಾರ್ಮಿಕ ಸಂಘಗಳ ಒಕ್ಕೊರಲಿನ ಬೇಡಿಕೆಯನ್ನು ನಿರ್ಲಕ್ಷಿಸಿ ಕಾರ್ಮಿಕ ಮಂತ್ರಿಗಳು 'ಎಕ್ಸಿಟ್ ನೀತಿಯೇ' 'ಉದ್ಯೋಗ ನೀತಿ' ಎಂದು ಮಾಲಕರ ಸಭೆಯಲ್ಲಿ ಘೋಷಿಸುತ್ತಾ ದೇಶದ ಕೋಟ್ಯಾಂತರ ನಿರುದ್ಯೋಗಿಗಳನ್ನು ಗೇಲಿ ಮಾಡಿದ್ದಾರೆ.

ಕಾಂಗ್ರೈನ ಹೇಸಿಗೆ ರಾಜಕೀಯ ಸಿಪಿಐ(ಎಂ) ಮಾಫಿಯ ದೊರೆಗಳ ಸಂಬಂಧದ ಆಪಾದನೆ

ಈ ನಡುವೆ ಕಾಂಗ್ರೆಸ್(ಐ)ನ ನೀತಿಗೆಟ್ಟ ಮುಖಂಡರು ಮತ್ತು ಕಲ್ಕತ್ತೆಯ ದೊಡ್ಡ ಪತ್ರಿಕೆಗಳಲ್ಲಿರುವ ಅವರ ಬಾಲಬುಡುಕರು ಸಿ.ಪಿ.ಐ(ಎಂ) ಮುಖಂಡರಿಗೂ ರಶೀದ್‌ಖಾನ್‌ಗೂ ಗಳಸ್ಯ ಕಂಠಸ್ಯ ಎಂಬ ವ್ಯಾಪಕ ಅಪಪ್ರಚಾರ ನಡೆಸಿದ್ದಾರೆ. ಇಂತಹ ಒಂದು ಆಪಾದನೆ ಮಾಡಿದ ಪಶ್ಚಿಮಬಂಗಾಳದ ಅತ್ಯಂತ ಕುಖ್ಯಾತ ಕಾಂಗ್ರೈ ಮುಖಂಡ ಸುಬ್ರತ ಮುಖರ್ಜೀಗೆ ಈ ಆಪಾದನೆಯನ್ನು ಸಾಬೀತು ಪಡಿಸೆಂದು ವಿಧಾನಸಭೆಯಲ್ಲಿ ಸವಾಲು ಹಾಕಿದಾಗ ಹಿಂದೇಟು ಹಾಕಿದರು ಸ್ಫೋಟ ನಡೆದ ದೋಬಝಾರ್ ಕ್ಷೇತ್ರದಲ್ಲಿ ಮಾಫಿಯಾ ತಂಡಗಳೊಡನೆ ಕಾಂಗ್ರೈ ನಂಟು ಸರ್ವವಿದಿತ. ಈ ಕ್ಷೇತ್ರದಲ್ಲಿ ಕಾಂಗ್ರೆಸ್(ಐ) ಗೆದ್ದಿರುವುದು ಗಮನಾರ್ಹವಲ್ಲವೇ?

ಎಡರಂಗದ ವಿರುದ್ಧ ದಿನದಿನವೂ ಪ್ರಚಾರದಲ್ಲಿತೊಡಗಿರುವ 'ಆನಂದ್ ಬಝಾರ್ ಪತ್ರಿಕಾ' ವಿರುದ್ಧ ಮುಖ್ಯಮಂತ್ರಿ ಜ್ಯೋತಿಬಸು ಪರವಾಗಿ ಅವರ ಖಾಸಗೀ ಕಾರ್ಯದರ್ಶಿ ಪ್ರದೀಪ್ತಸೇನ್ ಮಾನನಷ್ಟ ಮೊಕದ್ದಮೆ ಹಾಕಿದ್ದಾರೆ. ಜ್ಯೋತಿಬಸು ಹಾಗೂ ರಶೀದ್‌ಖಾನ್ ನಡುವೆ 'ನಿಕಟ ಸಂಪರ್ಕವಿದೆ' ಎಂದು ಈ ಪತ್ರಿಕೆ ಆಪಾದಿಸಿತ್ತು. ಈ ಪತ್ರಿಕೆಯ ಸುದ್ದಿ ಪ್ರಕಾರ ಜುಲೈ 1989 ರಲ್ಲಿ ಜ್ಯೋತಿಬಸು ಲಂಡನ್ನಿಗೆ ಪ್ರಯಾಣಿಸಿದಾಗ ಅವರ ಜತೆ ರಶೀದ್ ಖಾನ್ ಕೂಡಾ ಇದ್ದ, ಆತನೇ ಜ್ಯೋತಿಬಸುರವರ ಈ ವಿದೇಶಿ ಪ್ರವಾಸ ಖರ್ಚು-ವೆಚ್ಚ ನೋಡಿಕೊಂಡ. ಅವರೊಂದಿಗೆ ಕಲ್ಕತ್ತೆಗೆ ವಾಪಾಸು ಬಂದ ಎಂದಿತ್ತು. ಈ ಸುದ್ದಿ ಸಂಪೂರ್ಣ ಸುಳ್ಳು ಮಾಹಿತಿಗಳಿಂದ ಕೂಡಿದೆ ಎಂದು ಮಾನನಷ್ಟ ಮೊಕದ್ದಮೆಯ ಅರ್ಜಿಯಲ್ಲಿ ತಿಳಿಸಲಾಗಿದೆ. ಬಸುರವರು ಲಂಡನ್ನಿಗೆ ಹೋದದ್ದು ಜುಲೈನಲ್ಲಲ್ಲ. ಜೂನ್ 1989 ರಲ್ಲಿ. ಅವರು ನೇರವಾಗಿ ಲಂಡನ್‌ನಿಂದ ಕಲ್ಕತ್ತೆಗೆ ಹಿಂದಿರುಗಲಿಲ್ಲ. ಲಂಡನ್‌ನಿಂದ ಝ್ಯೂರಿಚ್‌ಗೆ ಹೋದರು. ರಶೀದ್ ಖಾನ್ ಈ ಯಾವ ವಿಮಾನ ಪ್ರಯಾಣದಲ್ಲೂ ಇರಲಿಲ್ಲ. ಜ್ಯೋತಿ ಬಸು ವಿದೇಶದಲ್ಲಿದ್ದಾಗ ಎಂದೂ ಅವರು ರಶೀದ್‌ಖಾನ್‌ನನ್ನು ಭೇಟಿಯಾಗಿಲ್ಲ.

'ಆನಂದ್ ಬಝಾರ್‌ಪತ್ರಿಕಾ'ದ ಈ ಸುದ್ದಿಯ ಪ್ರತಿಯೊಂದು ವಾಕ್ಯವೂ ಉದ್ದೇಶಪೂರ್ವಕವಾಗಿ ಜ್ಯೋತಿಬಸು ಹಾಗೂ ಎಡರಂಗದ ಪ್ರತಿಷ್ಠೆಗೆ ಕಳಂಕ ಹಚ್ಚುವ ದುಷ್ಟ ಪ್ರಯತ್ನ ಎಂದು ಮೊಕದ್ದಮೆಯ ಅರ್ಜಿಯಲ್ಲಿ ಹೇಳಲಾಗಿದೆ. ಕಲ್ಕತ್ತೆಯ ಇತರ ಪತ್ರಿಕೆಗಳಲ್ಲೂ ಪ್ರಕಟವಾಗುತ್ತಿರುವ ಇಂತಹ ಬುಡವಿಲ್ಲದ ಸುದ್ದಿಗಳ ವಿರುದ್ಧ ಇನ್ನೂ ಹಲವು ಮಾನನಷ್ಟ ಮೊಕದ್ದಮೆಗಳು ದಾಖಲಾಗಿವೆ ಎಂದು ಐ.ಎಸ್.ಎಸ್.ಗೆ ತಿಳಿದುಬಂದಿದೆ.

(ಕಲ್ಕತ್ತಾ "ಸ್ಫೋಟಗಳು: ವಿಷಸಂಗತಿ ಪುಟ 8 ನೋಡಿ")

ಖು ।ನಿವ

ನಮ್ಮ ಸ್ವಾತಂತ್ರೋತ್ತರ ಭಾರತದ ಸಾಮಾಜಿಕ ಪರಿಸ್ಥಿತಿಯಲ್ಲಿಯೇ ಪ್ರಮುಖ ವಾದ ಬೆಳವಣಿಗೆಯೊಂದು ನಮ್ಮ ಕಣ್ಣೆ ದುರಿಗೆ ಜರುಗಿದೆ. ಇತ್ತೀಚಿನ ದಶಕಗಳಲ್ಲಿ ಕಾಂಗ್ರೆಸ್ ಜನರಿಂದ ದೂರವಾಗಿ, ಅತ್ಯಂತ ಪ್ರಭಾವಯುತರಾದ ಜನನಾಯಕರು, ತಮ್ಮ ಪ್ರಭಾವದಿಂದಲೇ ಜನರ ಮತಗಳನ್ನು ಗಳಿಸಬಲ್ಲನಾಯಕರು ಇಲ್ಲವಾಗುತ್ತಿದ್ದಂತೆ ಈ ಬೆಳವಣಿಗೆ ಅತ್ಯಂತ ಸ್ಪಷ್ಟವಾಗಿ ನಮ್ಮೆದುರು ಪ್ರಕಟವಾಗಿದೆ. ಈ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜಕೀಯ ನಿರ್ಣಯಗಳು (1978ರ ಜಲಂಧರ್, 82 ವಿಜಯವಾಡ, ಕಲ್ಕತ್ತ,ತ್ರಿವೇಂದ್ರಂ) ತಿಳುವಳಿಕೆ ನೀಡುತ್ತವೆ. ಕಾಂ. ಬಿ.ಟಿ. ಆರ್.ರವರ ಮುಖ್ಯ ಲೇಖನಗಳಲ್ಲೊಂದಾದ "ಸ್ವಾತಂತ್ರ ಭಾರತದ ನಲವತ್ತು ವರ್ಷಗಳು" ಇದರಲ್ಲಿ ವಿವರಿಸಲಾಗಿದೆ.

ಕಾಂಗ್ರೆಸ್‌ನ, ಅದರ ನಾಯಕರ ಹೆಸರು ಕೇಳಿದರೆ ಸಾಕು, ಆ ಪಕ್ಷಕ್ಕೆ ಮತವೊತ್ತುತ್ತುಪ್ಪು ಮೂಲಕ ಕಾಂಗ್ರೆಸ್ ಸೈದ್ಧಾಂತಿಕ ಪ್ರಭಾವ ಜನರ ಮೇಲಿರುವವರೆಗೂ ಅದು ತನ್ನ ಸ್ಥಳೀಯ ನಾಯಕರುಗಳ ಮೇಲೆ ಅವಲಂಬಿತವಾಗಬೇಕಾಗಿರಲಿಲ್ಲ. ಇದರ ಪರಿಣಾಮವಾಗಿ ಹಳ್ಳಿಗಳ ಶ್ರೀಮಂತ ಭೂಮಾಲಕರು ಪಕ್ಷದ ಹದ್ದುಬಸ್ತಿನಲ್ಲಿಯೇ ತಮ್ಮ ಆಟ ನಡೆಸಬೇಕಾಗುತ್ತಿತ್ತು. ಆದರೆ ಯಾವಾಗ ಆ ಪ್ರಭಾವ ಇಲ್ಲವಾಗುತ್ತಾ ಬಂತೋ ಆಗ ಹಳ್ಳಿಹಳ್ಳಿಗಳ ಜಾತಿಜಾತಿಗಳ ಇಂತಹ ನಾಯಕರ ಪ್ರಭಾವ ಹಿಡಿತ ಹೆಚ್ಚಿಸಿಕೊಂಡಿತು. ಕಾಂಗ್ರೆಸ್ ತನ್ನ ಗೆಲುವಿಗೆ ಇವರ ಮೇಲೆಯೇ ಅವಲಂಬಿಸಬೇಕಾಯಿತು. ಈ ಪ್ರಕ್ರಿಯೆಯಲ್ಲಿ ಅವರ ಆಟಾಟೋಪ ಹೆಚ್ಚಾಯಿತು.

ಇದರ ಜೊತೆಯಲ್ಲಿ ಕಾಂಗ್ರೆಸ್ ತಂದ ವಿಕೃತ ಭೂಸುಧಾರಣೆಗಳ ಫಲವಾಗಿ ಭೂಮಿ ಹಳ್ಳಿಗಳಲ್ಲಿ ವಾಸವಿಲ್ಲದ ಭೂಮಾಲಕರು ಮತ್ತು ಬಡವರ ಕೈಯಿಂದ ಜಾರಿ, ಶ್ರೀಮಂತ ಗೇಣಿದಾರರ, ರೈತರ, ಸ್ಥಳೀಯ ಭೂಮಾಲಕರ ಕೈಸೇರಿತು. ಈ ವರ್ಗಕ್ಕೆ ಹಸಿರು ಕ್ರಾಂತಿ, ಸಾಲ ಸರ್ಕಾರದ ಸಬ್ಸಿಡಿ ಇತ್ಯಾದಿಗಳ ಫಲವೂ ಸಿಕ್ಕಿ ಕೊಬ್ಬಿ ಬೆಳೆಯಿತು. ರಾಜ್ಯ ಸರ್ಕಾರಗಳ ಮಟ್ಟದಲ್ಲಿ ಈ ಭೂಮಾಲಕ ಹಿತಾಸಕ್ತಿಗಳ ಪರಿಣಾಮ ತೀವ್ರ. ಇದರಿಂದಾಗಿಯೇ, ಜಾತಿವಾದವೂ ಹೆಚ್ಚು ಪ್ರಭಾವಯುತವಾಗಿದೆ. ಗ್ರಾಮೀಣ ಜನತೆಯ ಮುಖ್ಯ ಶೋಷಕರಾದ ಈ ವರ್ಗಕ್ಕೆ ಇಂದು ದಲಿತರು ಪಡೆಯುತ್ತಿರುವ ಅಲ್ಪಸ್ವಲ್ಪ ವಿದ್ಯಾಭ್ಯಾಸ, ನೌಕರಿಗಳು, ಸರ್ಕಾರದಿಂದ ಬಡವರಿಗೆಂದಿರುವ ಕಾರ್ಯಕ್ರಮಗಳ ಬಗ್ಗೆ ತೀವ್ರ ಅಸಹನೆಯುಂಟುಬಾಗಿದೆ.

ಸರ್ಕಾರಗಳ ಇಂತಹ ಕಾರ್ಯಕ್ರಮಗಳು ಗ್ರಾಮೀಣ ಜನ ಸಮುದಾಯವನ್ನು ತಲುಪುವುದನ್ನು ತಡೆಗಟ್ಟುತ್ತವೆ. ತಾವೇ ಅವುಗಳನ್ನು ಕಬಳಿಸಲು ಅಥವಾ ತಮ್ಮ ಮುಷ್ಟಿಯೊಳಗಿನ ಬಡಜನ ವಿಭಾಗಕ್ಕೆ ಮಾತ್ರ ಉಣಿಸಲು ಬಯಸುತ್ತವೆ.

ಈ ಪ್ರಕ್ರಿಯೆಯ ಜೊತೆ ಜೊತೆಯಲ್ಲಿಯೇ ಕಾಂಗ್ರೆಸ್ ಸರ್ಕಾರಗಳು ತನ್ನ ಪಕ್ಷದ ಮೇಲೆ ಅವಲಂಬಿಸುವುದನ್ನು ಕೈ ಬಿಟ್ಟು ಅಧಿಕಾರಿಗಳ ಮೇಲೆ, ನೌಕರಶಾಹಿಯ ಮೇಲೆ ಅವಲಂಬಿತವಾಗುತ್ತಿದೆ. ಇದರಿಂದ ನೌಕರಶಾಹಿ ಹೆಚ್ಚು ಕ್ರೂರವಾಗುತ್ತಿದೆ. ಇದರ ಜೊತೆ ಜೊತೆಗೆ ಗ್ರಾಮೀಣ ಶ್ರೀಮಂತ ಭೂಮಾಲಕರು "ಸಂಬಂಧ" ಮತ್ತು "ಜಾತಿ" ಬಾಂಧವ್ಯದ ಕೊಂಡಿಗಳಿಂದ ಬಿಗಿಯಲ್ಪಟ್ಟ ಸಾಮಾಜಿಕ ಪರಿಸ್ಥಿತಿಯಲ್ಲಿ ಸೈನ್ಯ, ಪೋಲೀಸ್, ನ್ಯಾಯಾಂಗ ಮತ್ತಿತರ ಪ್ರಭುತ್ವದ ಅಂಗಗಳನ್ನು ಆಕ್ರಮಿಸಿಕೊಂಡಿದ್ದಾರೆ.

ಈ ಪ್ರಕ್ರಿಯೆಗಳು ಒಂದೆಡೆ ನಡೆಯುತ್ತಿದ್ದರೆ, ಗ್ರಾಮೀಣ ಬಡಜನತೆ ಭೂಮಿಯ ನಿರಾಕರಣೆಯಿಂದಾಗಿ ತನ್ನ ಜೀವನಾಧಾರವನ್ನೇ ಕಳೆದುಕೊಳ್ಳುತ್ತಿದೆ. ಸಾಂಪ್ರದಾಯಿಕ ಕೈಗಾರಿಕೆ ಮತ್ತು ಕಸುಬುಗಳು ನಾಶವಾಗುತ್ತಿರುವುದು ಈ ಸಮಸ್ಯೆಯನ್ನು ತೀವ್ರಗೊಳಿಸಿದೆ. ಅವರಲ್ಲಿ ಇಂತಹ ಪರಿಸ್ಥಿತಿಯಲ್ಲಿ ಗ್ರಾಮೀಣ ಬಡಜನರಗಳಾಗಿ ಸಂಘಟಿತರಾಗಲು ಪ್ರಯತ್ನಿಸಿದರೆ ಸಾಕು ಈ ಗ್ರಾಮೀಣ ಪ್ರತಿಗಾಮಿ ಶಕ್ತಿಗಳು ಹದ್ದಿನಂತೆ ಮೇಲೆರಗಲು ಯತ್ನಿಸುತ್ತಿವೆ. ಇದೇ ಗ್ರಾಮೀಣ ಮೇಲ್ವರ್ಗದ- ಅಧಿಕಾರಿಶಾಹಿ, ಸ್ಥಳೀಯ ರಾಜಕಾರಣದ ಬಿಗಿಯಾದ ಸಂಬಂದ ಪರಿಣಾಮವನ್ನು ಬದನವಾಳು ಕಗ್ಗೊಲೆಗಳಲ್ಲಿ ಕಾಣಬಹದು.

ಹೀಗೆ ಗಾಂಧೀಜಿಯವರೇ ಭೂಮಾಲಕರನ್ನು ಬೆಂಬಲಿಸುತ್ತಾ ಅವರಿಗೆ ಗೇಣಿ ತಪ್ಪದೆ ಕೊಡಬೇಕು ಎಂದು ಹೇಳುತ್ತಾ, ವರ್ಣಾಶ್ರಮ ವ್ಯವಸ್ಥೆಯನ್ನು ಪ್ರತಿಪಾದಿಸುತ್ತಾ ಹರಿಜನೋದ್ಧಾರದ ಮಾತನ್ನಾಡುತ್ತಾ ಸಾಗಿದ್ದು ಇಂದು ದಲಿತರ ಮೇಲಿನ ದೌರ್ಜನ್ಯಗಳು ಹೆಚ್ಚಾಗಲು ಕಾರಣವಾಗಿದೆ.

ಕಾಂಗ್ರೆಸ್ ಅದೇ ದಾರಿಯಲ್ಲಿ ಸಾಗಿ ಭೂಮಿಯನ್ನು ಭೂಮಾಲಕರಿಂದ ಕಿತ್ತು ಗ್ರಾಮೀಣ ಬದುಕಿನ ಮೇಲೆ ಅವರಿಗಿರುವ ಬಿಗಿಮುಷ್ಟಿಯ ಹಿಡಿತಕ್ಕೆ ಪೆಟ್ಟುಹಾಕದೆ ಅವರನ್ನು ಪೋಷಿಸಿ ಬೆಳೆಸಿ ಹರಿಜನರಿಗೆ, ಇತರ ಬಡವರಿಗೆ ಕಲ್ಯಾಣ ಕಾರ್ಯಕ್ರಮಗಳ ಮಾತನ್ನಾಡುತ್ತಾ, ಈ ಬಡಜನರನ್ನು ತಮ್ಮ ಹಿಡಿತದಲ್ಲಿರಿಸಿಕೊಳ್ಳಲು ಮೀಸಲಾತಿಯನ್ನು ಒಂದು ಸಾಧನವಾಗಿ ಮಾಡಿಕೊಂಡಿರುವುದು, ಅದನ್ನು ಪ್ರಾಮಾಣಿಕವಾಗಿ ಜಾರಿಗೇ ತರದಿರುವುದು, ಗ್ರಾಮೀಣ ವರ್ಗ ಸಂಘರ್ಷ ತೀವ್ರವಾಗಲು ಅವಕಾಶ ಮಾಡಿಕೊಟ್ಟಿದೆ. ಇದೇ ಜಾತಿಗಳ ನಡುವೆ ಮೇಲ್ಜಾತಿಗಳ ಶ್ರೀಮಂತರ ಹಾಗೂ ದಲಿತರ ನಡುವಿನ ಸಂಘರ್ಷವಾಗಿ ಕಾಣಿಸಿಕೊಳ್ಳುತ್ತಿದೆ.

ಒಟ್ಟಿನಲ್ಲಿ ಕಾಂಗ್ರೆಸ್ ತುಳಿದ ಹಾದಿಯ ಭೀಕರ ಪರಿಣಾಮ ಈ ಬದನವಾಳು ಕೊಲೆ, ಸರಗೂರಿನ ಕೊಲೆಗಳು, ಹೂಡಿಯ ಬಡಜನರ ಮೇಲಿನ ಧಾಳಿಗಳ ಮೂಲವೂ ಇದೇ.

ಈಗಲೂ ನಮ್ಮ ರಾಜ್ಯ ಸರ್ಕಾರ ಇಂತಹುದೇ, ಪ್ರತಿಮೆ ನಿರ್ಮಾಣದಂತಹ ತೋರಿಕೆಯ ನಾಟಕಗಳ ಮಾತನ್ನಾಡಿದರೆ ಅದು ಸಮಸ್ಯೆಯ ಮೂಲಕ್ಕೆ ಕೈ ಹಾಕಿದಂತಾಗುತ್ತದೆಯೇ.

ಈಗ ಸದ್ಯಕ್ಕೇ ಆಗಬೇಕಾದದ್ದು ದಲಿತರ ಸಾಮಾಜಿಕ, ಪ್ರಜಾಸತ್ತಾತ್ಮಕ ಹಕ್ಕುಗಳ ಬಗ್ಗೆ, ಸಮಾಜಧಾರಣೆಯ ಬಗ್ಗೆ ಒಂದು ದೊಡ್ಡ ಆಂದೋಲನ. ಜೊತೆ ಜೊತೆಗೆ ದಲಿತರ ಭೂಮಿ ಹಂಚಿಕೆ. ಇದನ್ನು ಮಾಡುವ ಧೈರ್ಯ ಕಾಂಗ್ರೆಸ್ಸಿಗಿದೆಯೇ?

ಡಿ.ವೈ.ಎಫ್.ಐ. ಖಂಡನೆ

ಬದನವಾಳ ಗ್ರಾಮದಲ್ಲಿ ನಡೆದ ದಲಿತರ ಮೇಲಿನ ಹಲ್ಲೆಯನ್ನು ಡಿ.ವೈ.ಎಫ್.ಐ. ರಾಜ್ಯ ಮತ್ತು ಜಿಲ್ಲಾ ಸಮಿತಿಗಳು ತೀವ್ರವಾಗಿ ಖಂಡಿಸಿವೆ.

ಕರ್ನಾಟಕ ರಾಜ್ಯದಲ್ಲಿ ಎಲ್ಲಡೆಯಲ್ಲಿ ಇತ್ತೀಚಿನ ದಿನಗಳಲ್ಲಿ ದಲಿತರ ಮೇಲಿನ ದಾಳಿಗಳು ಹೆಚ್ಚುತ್ತಿರುವುದು ವಿಷಾದನೀಯ. ಶರಣವ್ವಳ ಕೊಲೆ ಪ್ರಕರಣ, ಹೂಡಿ ಗ್ರಾಮಸ್ಥರ ಮೇಲಿನ ದೌರ್ಜನ್ಯ ಮುಂತಾದ ಪ್ರಕರಣಗಳನ್ನು ಪ್ರತಿಭಟಿಸಿ ಎಲ್ಲಡೆ ಪ್ರತಿಭಟನಾ ಸಭೆ, ಧರಣಿ, ಪಿಕೆಂಟಿಂಗ್ ನಡೆಸಬೇಕೆಂದು ರಾಜ್ಯ ಸಮಿತಿ ಎಲ್ಲಾ ಘಟಕಗಳಿಗೆ ಕರೆ ನೀಡಿದೆ.

ಇದರ ಬಗ್ಗೆ ಸಮಗ್ರ ತನಿಖೆ ನಡೆಸಿ ದಲಿತರಿಗೆ ಸಾಮಾಜಿಕ ಅನ್ಯಾಯ ಒದಗಿಸಿಕೊಡಬೇಕೆಂದು ಜಿಲ್ಲಾ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ಭಗತ್‌ಸಿಂಗರ ಸಾಮಾಜಿಕ ಕ್ರಾಂತಿ ಕನಸು ಸಂಘ ಪರಿವಾರಕ್ಕೆ ಗೊತ್ತಿದೆಯೆ?

ಭಾರತೀಯ ಸಂಸ್ಕೃತಿಯ ಗುತ್ತೇಗೆದಾರರು ನಾವು ಎನ್ನುವ 'ಸಂಘಪರಿವಾರ'ದ ಜನ ಭಾರತೀಯ ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿ ಪರೋಕ್ಷವಾಗಿ ಬ್ರಿಟಿಷರಿಗೆ ನೆರವಾಗಿದ್ದರೂ ನಾವೇ ಏಕಮಾತ್ರ ದೇಶ ಭಕ್ತರು ಎಂದು ಹೋಗುಹಾಕುವುದನ್ನು ನೋಡಿದ್ದೇವೆ. ಈಗ ಮನುಸ್ಮೃತಿಯ ಮೇಲು ಕೀಳಿನ ಸಮಾಜವನ್ನು ಎತ್ತಿ ಹಿಡಿಯುವ ಈ ಮಂದಿ ಈ ಅಸಮಾನತೆಗಳನ್ನೆಲ್ಲಾ ತೊಡೆದು ಹಾಕಿರುವ ವರ್ಗ ರಹಿತ ಸಮಾಜದ ಕನಸು ಕಂಡ ಹುತಾತ್ಮ ಭಗತ್‌ಸಿಂಗ್‌ರ ಹೆಸರನ್ನು ಅಪಹರಿಸಲು ಹೊರಟಿದ್ದಾರೆ. ಇಂತಹ ಕಳ್ಳತನವನ್ನು ಖಂಡಿಸಬೇಕು ಎನ್ನುತ್ತಾರೆ. ಪ್ರಖ್ಯಾತ ಇತಿಹಾಸಕಾರ ಪ್ರೊ ಇರ್ಫಾನ್ ಹಬೀಬ್. ಭಗತ್‌ಸಿಂಗ್ ಹುತಾತ್ಮರಾದ ದಿನ ಮಾರ್ಚ್ 23 ರಂದು 'ಟೈಮ್ಸ್ ಆಫ್ ಇಂಡಿಯಾ' ದಲ್ಲಿ ಪ್ರಕಟವಾದ ಲೇಖನದ ಅಂಶಗಳು.

ಭಗತ್‌ಸಿಂಗ್ ಕೋಟ್ಯಾಂತರ ಭಾರತೀಯರ ಹೃದಯದಲ್ಲಿ ಒಂದು ವಿಶಿಷ್ಟ ಸ್ಥಾನ ಪಡೆದವರು. ಅವರ ಹೆಸರೇ ಸ್ಫೂರ್ತಿಯ ಸೆಲೆ. ಆದ್ದರಿಂದ ಅವರ ಹೆಸರನ್ನು ಬಳಸಲು ಹಿಂದೆ ಹಲವರು ಪ್ರಯತ್ನಿಸಿದ್ದಾರೆ. ಇತ್ತೀಚೆಗೆ ಈ ಪ್ರಯತ್ನ ನಡೆಸಿರುವವರೆಂದರೆ 'ಸಂಘ ಪರಿವಾರ'ದ ಮಂದಿ ಈ ಯುವ ಕ್ರಾಂತಿಕಾರಿಯ ಜೀವನ-ಸಿದ್ಧಾಂತ ಈ 'ಸಂಘ ಪರಿವಾರ'ದ ಉಪದೇಶಗಳಿಗೆ ತದ್ವಿರುದ್ಧವಾಗಿದ್ದರೂ ಅದನ್ನು ಮರೆಮಾಚಿ ಈ ಮಹಾನ್ ಕ್ರಾಂತಿಕಾರಿಯನ್ನು ಅಪಹರಿಸುವ 'ಪರಿವಾರ'ದ ಪ್ರಯತ್ನಗಳನ್ನು ಖಂಡಿಸಬೇಕು.

ಎಷ್ಟೊಂದು ನಾಯಕಮಣಿಗಳು, ಹೀರೋಗಳನ್ನು ಹೊಂದಿರುವ ಜನಗಳಲ್ಲಿ 'ಭಗತ್‌ಸಿಂಗ್' ಎಂಬ ಹೆಸರು ಇಷ್ಟೊಂದು ಅಸೀಮಿತ ಅಭಿಮಾನ ಉಕ್ಕಿಸುತ್ತದೆ ಏಕೆ? ಇದಕ್ಕೆ ಉತ್ತರ ಸೂಕ್ಷ್ಮವಾದದ್ದು. ನಮ್ಮ ಬಹುಪಾಲು ಮುಖಂಡರಿಗೆ ಸ್ವಾತಂತ್ರ್ಯದಾಚೆ ಯೋಚಿಸುವ ಶಕ್ತಿಯಿಲ್ಲದಿದ್ದಾಗ ಭಗತ್‌ಸಿಂಗ್ ಸ್ವತಂತ್ರ ಭಾರತದ ಬಗ್ಗೆಯಷ್ಟೇ ಅಲ್ಲ, ವರ್ಗರಹಿತ ಸಮಾಜದ ಕನಸೂ ಕಂಡವರು.


ಭಗತ್‌ಸಿಂಗ್ ಮತ್ತು ಹಿಂದುಸ್ತಾನ್ ಸೋಶಲಿಸ್ಟ್ ರಿಪಬ್ಲಿಕನ್ ಅಸೋಸಿಯೇಶನ್‌ನ ಇತರ ಸಂಗಾತಿಗಳಿಗೆ ಒಂದು ಸಮಾನತೆಯ, ಸಮಾಜವಾದಿ, ಜಾತ್ಯತೀತ ಸಮಾಜದಲ್ಲಿ ಅಚಲ ನಂಬಿಕೆಯಿತ್ತು. ಈ ನಂಬಿಕೆ ಕೇವಲ ಯೌವ್ವನದ ಉದ್ರೇಕದಿಂದ ಬಂದ್ದಲ್ಲ. ಆಳವಾದ ಅಧ್ಯಯನ, ವ್ಯಾಪಕ ಪ್ರಯೋಗಗಳಿಂದ ಬೆಳೆಸಿಕೊಂಡ ನಂಬಿಕೆ. ರಷ್ಯಾ, ಇಟಲಿ, ಐರ್ಲೆಂಡ್ ಕ್ರಾಂತಿಗಳ ಬಗ್ಗೆ ಏನೇನು ಸಿಕ್ಕಿತ್ತೋ ಅವನೆಲ್ಲಾ ಇಡಿಯಾಗಿ ನುಂಗಿದರು. ಅರಗಿಸಿಕೊಂಡರು ತಮ್ಮ ಮುಂದೆ ಬಂದ ಪ್ರಶ್ನೆಗಳನ್ನೆಲ್ಲಾ ಎಳೆಎಳೆಯಾಗಿ ಚರ್ಚಿಸಿದರು, ತಮ್ಮ ಅಧ್ಯಯನ ವೃತ್ತಗಳಲ್ಲಿ(ಸ್ಟಡಿ ಸರ್ಕಲ್‌ಗಳಲ್ಲಿ). ಭಗತ್‌ಸಿಂಗ್ ವಿಪರೀತ ಅಧ್ಯಯನ ಮಾಡಿದ ವ್ಯಕ್ತಿ, ಸಮಾಜವಾದ ಅವರ ವಿಶೇಷ ಅಧ್ಯಯನ ವಿಷಯವಾಗಿತ್ತು ಎಂದಿದ್ದಾರೆ ಅವರೊಡನೆ ಆಪಾದಿತನಾದ ಜೆ.ಎನ್. ಸನ್ಯಾಲ್ 1924 ರಲ್ಲಿ ಲಾಲಾ ಲಜಪತ್‌ರಾಯ್ ಭಗತ್‌ಸಿಂಗ್ ರಶ್ಯದ ಏಜೆಂಟ್, ನನ್ನು ಲೆನಿನ್ ಮಾಡಲು ಯತ್ನ ನಡೆಸಿದ್ದಾನೆ ಎಂದಿದ್ದರಂತೆ. ಆಗ ಭಗತ್‌ಸಿಂಗ್‌ಗೆ 17 ವರ್ಷ.

ಅವರ ಅಧ್ಯಯನ, ಬೆಳವಣಿಗೆ ಜೈಲು ವಾಸದ ಅವಧಿಯಲ್ಲಿ ಹೆಚ್ಚಿದಂತೆ ಭಗತ್‌ಸಿಂಗ್ ವಿಚಾರಗಳು ಸ್ಪಷ್ಟಗೊಳ್ಳಲಾರಂಭಿಸಿದವು. ಜೂನ್ 6,1929 ರಂದು ನ್ಯಾಯಾಲಯದಲ್ಲಿ ಸಮಾಜವಾದದ ವಿಚಾರವನ್ನು ಸ್ಪಷ್ಟವಾಗಿ ವಿವರಿಸುತ್ತಾ "..... ತೀವ್ರ ಬದಲಾವಣೆ ಅತೀ ಅಗತ್ಯ. ಇದನ್ನು ಸಾಧಿಸಬೇಕೆಂದಿರುವವರು ನಮ್ಮ ಸಮಾಜವನ್ನು ಒಂದು ಸಮಾಜವಾದೀ ಮಾದರಿಯಲ್ಲಿ ಮರು ಸಂಘಟಿಸಬೇಕು" ಎಂದಿದ್ದರು. ಮಾರ್ಚ್ 3,1931 ರಲ್ಲಿ ನೀಡಿದ ಸಂದೇಶವೊಂದರಲ್ಲಿ "ಕೆಲವೇ ಶೋಷಕರು ಜನಸಾಮಾನ್ಯರ ಶ್ರಮದ ಶೋಷಣೆ ನಡೆಸುತ್ತಿರುವವರಿಗೆ ಭಾರತದಲ್ಲಿ ಹೋರಾಟ ಮುಂದುವರೆಯುತ್ತದೆ. ಶೋಷಕರು ಬ್ರಿಟಿಷ್ ಬಂಡವಾಳಶಾಹಿಗಳಾಗಬಹುದು, ಬ್ರಿಟಿಷ್ ಮತ್ತು ಭಾರತೀಯ ಬಂಡವಾಳಶಾಹಿಗಳು ಜತೆಯಾಗಿರಬಹುದು ಅಥವಾ ಶುದ್ಧ ಭಾರತೀಯರೇ ಇರಬಹುದು. ಹೋರಾಟ ಮುಂದುವರಿಯುತ್ತದೆ" ಎಂದಿದ್ದರು. ಇದಕ್ಕೆ 'ಸಂಘ ಪರಿವಾರ'ದ ಮಂದಿ ಏನೆನ್ನುತ್ತಾರೋ? ಈಗ ಕೆಲವರು ಸಮಾಜವಾದವೆಂದರೆ ಮೂಗು ಮುರಿಯಬಹುದು. ಆದರೆ ಆಗ ಭಾರತದಂತಹ ವಸಾಹತುಶಾಹೀ ದೇಶಗಳ ಸ್ವಾತಂತ್ರ್ಯ ಹೋರಾಟಗಾರರಿಗೆ ಸ್ಫೂರ್ತಿ ತುಂಬಿದ್ದ ವಿಚಾರಧಾರೆಯಾಗಿತ್ತು ಎಂಬುದರಲ್ಲಂತೂ ಸಂಶಯವಿಲ್ಲ.

ಒಂದೆಡೆ ಭಗತ್‌ಸಿಂಗ್‌ರ ನಾಮದ ಜಪಮಾಡುತ್ತಾ ಇನ್ನೊಂದೆಡೆ ಮೇಲು ಕೀಳು ಸಮಾಜವನ್ನು ಎತ್ತಿಹಿಡಿಯುವವರಿಗೆ ಭಗತ್‌ಸಿಂಗ್ ಒಂದು ಸಾಮಾಜಿಕ ಕ್ರಾಂತಿ ಬಯಸಿದ್ದರು. ಎಲ್ಲಾ ಸಮಾಜಿಕ, ಆರ್ಥಿಕ ಅಸಮಾನತೆಗಳು ಕರಗಿ ಹೋಗಿರುವ ಸಮಾಜದ ಕನಸುಕಂಡಿದ್ದರು ಎಂಬುದು ಗೊತ್ತಿದೆಯೇ? ಅವರ ಬಯಕೆ, ಕನಸು ಕೋಮು ಉದ್ರೇಕದ ಧೂಳೆಬ್ಬಿಸುತ್ತಾ ದೊಬ್ಬಿಡುತ್ತಿರುವ ಈ ದಿನಗಳಲ್ಲಿ ಬಹಳ ದೂರದ ಆದರ್ಶವಾಗಿಬಿಟ್ಟಿದೆ. 1920 ರ ವೇಳೆಗೆ ಕೂಡಾ ಕೋಮುವಾದದ ಅಪಾಯಗಳನ್ನು ಭಗತ್‌ಸಿಂಗ್ ಹಾಗೂ ಅವರ ಸಂಗಾತಿಗಳು ಮನಗಂಡಿದ್ದರು. ಅವರ ಒಬ್ಬ ಸಂಗಾತಿ ಅಷ್ಪಾಕುಲ್ಲಾ ಖಾನ್ ಡಿಸೆಂಬರ್ 19,1927 ರಲ್ಲಿ ಒಂದು ಬಹಿರಂಗ ಪತ್ರ ಬರೆದು ಮತಾಂತರದ ಆಂದೋಲನಗಳು 'ಶುದ್ಧಿ' ಮತ್ತು 'ತಬ್ಲೀಕ್' ಸ್ವಾತಂತ್ರ್ಯ ಆಂದೋಲನವನ್ನು ದುರ್ಬಲಗೊಳಿಸುತ್ತವೆ. ಏಕೆಂದರೆ ಅವು ಶವನ್ನು ಹಿಂದೂ, ಮುಸ್ಲಿಂ ಎಂದು ಒಡೆಯುತ್ತವೆ ಎಂದು ಎಚ್ಚರಿಸಿದ್ದರು.

1925 ರಲ್ಲಿ ನಾಗಪುರದಲ್ಲಿ ಆರ್.ಎಸ್.ಎಸ್ ಸಂಘಟನೆಯಾಗುತ್ತಿದ್ದಾಗ ಲಾಹೋರ್‌ನಲ್ಲಿ ಭಗತ್‌ಸಿಂಗ್ ಮತ್ತು ಅವರ ಸಂಗಾತಿಗಳು 1926 ರಲ್ಲಿ ನೌಜವಾನ್ ಭಾರತ್ ಸಭಾ ಸಂಘಟಿಸುವಲ್ಲಿ ಮಗ್ನರಾಗಿದ್ದರು. ಜಾತ್ಯತೀತ, ವರ್ಗರಹಿತ ಸಮಾಜಕ್ಕೆ ಬದ್ಧತೆ ಈ ಸಭಾದ ಆದರ್ಶವಾಗಿತ್ತು. ಇದಕ್ಕಾಗಿ ಈ ಯುವಜನರನ್ನು ವಿದ್ಯಾರ್ಥಿಗಳನ್ನು, ಕಾರ್ಮಿಕರನ್ನು, ರೈತರನ್ನು ಅಣಿನೆರೆಸುವ ಗುರಿಹಾಕಿಕೊಂಡಿತ್ತು. ಸಾಮಾಜಿಕ ಮೇಲು-ಕೀಳನ್ನು ತೊಡೆದುಹಾಕುವ ಉತ್ಸಾಹದಲ್ಲಿ ಸಭಾ ಸಹಭೋಜನಗಳನ್ನು ಕೂಡಾ ಏರ್ಪಡಿಸುತ್ತಿತ್ತು. ಇದರಲ್ಲಿ ಎಲ್ಲರಿಗೂ 'ಖಿಚಡಿ' ಯಂತಹ ಸರಳ ಭೋಜನ ನೀಡಲಾಗುತ್ತಿತ್ತು. ಹಲಾಲ್‌ಂತಹ ಮಾಂಸದ ಅಡಿಗೆಗಳನ್ನು ಒಟ್ಟಿಗೆ ಮಾಡಿ ಬಡಿಸಲಾಗುತಿತ್ತು. ಎಲ್ಲರೂ ಹಿಂದೂಗಳು, ಮುಸಲ್ಮಾನರು, ಸಿಖ್ಖರು ಒಟ್ಟಾಗಿ ತಿನ್ನುತ್ತಿದ್ದರು.

ಭಗತ್‌ಸಿಂಗ್‌ರ ಸ್ವತಂತ್ರ ಭಾರತದ ಕನಸೇನೋ ನನಸಾಯಿತು. ಆದರೆ ಅವರ ವರ್ಗರಹಿತ ಸಮಾಜದ ಕನಸು ಇನ್ನೂ ದೂರವೇ ಇದೆ. ಅದರ ಬದಲು ನಾವಿಂದು ಕೊಳೆತುನಾರುವ ಕೆಸರಲ್ಲಿ ಸಿಲುಕಿಕೊಂಡಿದ್ದೇವೆ. ಅದರಿಂದ ಹೊರಬರಲು ಒದ್ದಾಡುತ್ತಿದ್ದೇವೆ. ●



ಕೃಪೆ : ಟೈಂಸ್ ಆಫ್ ಇಂಡಿಯಾ

ಅಯೋಧ್ಯಾ ಕಾಂಡ



ಏಕೆ ಹೀಗೆ ಎಂದು ಯೋಚಿಸಬೇಡವೇ ಅರ್ಜುನ್‌ಸಿಂಗ್?

ಒಂದು ವರ್ಷದ ಹಿಂದೆ ತಿರುಪತಿಯಲ್ಲಿ ಕೋಮುಪಿಡುಗನ್ನು ಎದುರಿಸುವ ನಿರ್ಣಯ ಕೈಗೊಂಡಿದ್ದರೂ ಇಂದೂ ಕೂಡಾ ಅದೇ ಅಪಾಯ ಎದುರಿಸುತ್ತಿದ್ದೇವೆ. ಏಕೆ ಹೀಗೆ ಎಂದು ಯೋಚಿಸದೇಡವೇ? ಬಿಜೆಪಿ-ವಿ.ಹೆಚ್.ಪಿ. ಹಾಕಿರುವ ಸವಾಲಿನ ಸ್ವರೂಪವನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಈ ಶಕ್ತಿಗಳು ಅಧಿಕಾರಕ್ಕೆ ಬರಲು ಪ್ರಜಾಪ್ರಭುತ್ವದ ಸೌಲಭ್ಯಗಳನ್ನು ಬಳಸಿಕೊಳ್ಳುತ್ತವೆ. ಅಂತಿಮವಾಗಿ ಜನಗಳ ಮೇಲೆ ಫ್ಯಾಸಿಸ್ಟ್ ಆಳ್ವಿಕೆ ಹೇರುತ್ತವೆ. ಕೋಮುವಾದಿ ಶಕ್ತಿಗಳು ಹಾಗೂ ಸ್ವಾರ್ಥಿ ವ್ಯಕ್ತಿಗಳ ಒಂದು ಕೂಟವನ್ನೂ ಏರ್ಪಡಿಸಿಕೊಂಡಿದ್ದಾರೆ. ಇವರ ಮೇಲೆ ಪ್ರಹಾರ ಮಾಡಬೇಕಾಗಿದೆ.

ಇದು ಸೂರಜ್‌ಕುಂಡ್‌ನಲ್ಲಿ ಮಾನವ ಸಂಪನ್ಮೂಲ ಮಂತ್ರಿ ಹಾಗೂ ಬಿಜೆಪಿ ನೇತೃತ್ವದ ಕೋಮುವಾದಿ ಶಕ್ತಿಗಳ ವಿರುದ್ಧ ಹೋರಾಟದಲ್ಲಿ ಹೆಜ್ಜೆಹೆಜ್ಜೆಗೂ ಹಿಂಜರಿಕೆ ತೋರುತ್ತಿರುವುದರಿಂದ ಕಾಂಗ್ರೆಸ ಭವಿಷ್ಯದ ಬಗ್ಗೆ ಚಿಂತಿತರಾಗಿರುವ ಅರ್ಜುನ್ ಸಿಂಗ್ ಎ.ಐ.ಸಿ.ಸಿ ಅಧಿವೇಶನದಲ್ಲಿ ಹೇಳಿದ ಮಾತು. ಆದರೆ ಅಧಿವೇಶನ ಅಂಗೀಕರಿಸಿದ ನಿರ್ಣಯ ಕಾಂಗ್ರೆ ಸರಕಾರದ ಶ್ವೇತಪತ್ರಕ್ಕಿಂತ ಏನೇನೂ ಭಿನ್ನವಾಗಿಲ್ಲ. ತನ್ನ ಪಾತ್ರದ ಬಗ್ಗೆ ಈ ಆಳುವ ಪಕ್ಷಕ್ಕೆ ಇನ್ನೂ ಸ್ವವಿಮರ್ಶೆ ಮಾಡಿಕೊಳ್ಳುವ ಧೈರ್ಯಬಂದಿಲ್ಲ. ತಿರುಪತಿಯಲ್ಲಿ ಕೋಮುವಾದಿಗಳ ವಿರುದ್ಧ ಅಬ್ಬರಿಸಿದ ಪಕ್ಷದ ಸರಕಾರ ಮುಖಂಡರು ಡಿಸೆಂಬರ್ 6ರಂದು ಅಯೋಧ್ಯೆಯಲ್ಲಿ ಕೋಮುವಾದಿಗಳು ಬಾಬ್ರಿಮಸೀದಿ ಒಡೆಯುತ್ತಿದ್ದ ಆರು ಗಂಟೆಗಳ ಕಾಲ ಏನು ಮಾಡಿದರು ಎಂಬುದರ ಪ್ರಸ್ತಾಪವೇ ಇಲ್ಲ. ಅರ್ಜುನ್‌ಸಿಂಗ್ ನೇತೃತ್ವದ ಭಿನ್ನಮತೀಯರ ಬಾಯಿ ಮುಚ್ಚಿಸಲು ತಿರುಪತಿಯಂತೆ ಇಲ್ಲಿಯೂ ಕೋಮುವಾದದ ವಿರುದ್ಧ ಅಬ್ಬರದ ಮಾತುಗಳಿವೆಯೇ ವಿನಃ ಕಾರ್ಯಾಚರಣೆಯ ಸೂಚನೆ ಸೊನ್ನೆ. ಕೇಂದ್ರದ ಕಾಂಗ್ರೆ ಮುಖಂಡ ಎ.ಕೆ ಅಂಟೋನಿಯವರು ಮಂಡಿಸಿದ ಆ ನಿರ್ಣಯದಲ್ಲಿ ಸಭೆಗಳ, ಗೋಷ್ಠಿಗಳ ಸೂಚನೆಯಿತ್ತಂತೆ. ಈ ಬಗ್ಗೆ ಗೇಲಿ ಮಾಡುತ್ತಾ ಅರ್ಜುನ್‌ಸಿಂಗ್ "ಖಂಡಿತಾ ಇವೇ ಎಲ್ಲವೂ ಅಲ್ಲ" ಎಂದರಂತೆ.

ಆದರೂ ಸೂರಜ್‌ಕುಂಡ್‌ನ ವಿಶೇಷ ಅಧಿವೇಶನ ಕಾಂಗ್ರೆ 'ಸಂಸ್ಕೃತಿ'ಗೆ ಅನುಗುಣವಾಗಿ ಏನನ್ನೂ ಸಾಧಿಸದೆ ಮುಗಿದಿದೆ. ಒಬ್ಬ ಪತ್ರಕರ್ತರು ಗಮನಿಸಿದಂತೆ ಸೂರಜ್‌ಕುಂಡ್ ನಿರ್ಣಯ ಕಂಡು ಅಡ್ವಾಣಿಯವರಿಗೆ ತೃಪ್ತಿಯಾಗಿರಬೇಕು. ಶರದ್‌ಪವಾರ್ ಐ.ಎಸ್.ಐ.ನ್ನು ಕೇಳಿ ಆನಂದವಾಗಿರಬೇಕು. ಮಸೀದಿ ಎಲ್ಲಿ ಕಟ್ಟಲಾಗುವುದು ಎಂಬ ಬಗ್ಗೆ ನರಸಿಂಹರಾಯರ ಉದ್ದೇಶಪೂರ್ಣ ಅಸ್ಪಷ್ಟತೆ ಕಂಡು 'ಸಂಘಪರಿವಾರ' ಸಂತುಷ್ಟವಾಗಿರಬೇಕು. ಆದರೆ ಕೋಮುವಾದಿಗಳ ಸವಾಲಿನಂತೆ ಪಕ್ಷದ ಬಗ್ಗೆ ದೇಶದ ಬಗ್ಗೆ ಚಿಂತಿತರಾಗಿರುವ ಕಾಂಗ್ರೆಸ್ಸಿಗರು?

ಬಿಜೆಪಿ ಸಹಿ ಸಂಗ್ರಹದ ಈ ಪರಿ

ಅಯೋಧ್ಯೆಯ ರಾಮಮಂದಿರನಿರ್ಮಾಣದ ಪರವಾಗಿ ಕರ್ನಾಟಕದಲ್ಲಿ 60 ಲಕ್ಷ ಮಂದಿ ಸಹಿಹಾಕಿದ್ದಾರೆ ಎಂದು ಬಿಜೆಪಿ ಡಂಗೂರ ನೀಡುತ್ತಿದೆ. ಈ ಸಹಿಗಳಲ್ಲಿ 19,620 ಮಂದಿ ಮುಸ್ಲಿಮರೇ ಸಹಿ ಹಾಕಿದ್ದಾರೆ ಎಂದು ಮೀಸೆ ತಿರುವುತ್ತಿದೆ.

ಬಿಜೆಪಿ ಕೂಟ ಸಹಿಸಂಗ್ರಹಿಸಿರುವ ರೀತಿ ಯಾವುದು? ಎಂಬುದಕ್ಕೆ ಇಬ್ಬರು ಓದುಗರ ಪತ್ರ ಇಲ್ಲಿದೆ:

ಬಲವಂತದ ಸಹಿ ಸಂಗ್ರಹ ಬಹುಮತಕ್ಕೆ ಸಾಕ್ಷ್ಯವಾದೀತೆ?

ಬಾಬ್ರಿ ಮಸೀದಿ ಕೆಡವಿದಲ್ಲೇ ರಾಮ ಮಂದಿರ ಆಗಬೇಕೆಂದು ದಕ್ಷಿಣ ಕನ್ನಡದಲ್ಲಿ ಸಹಿ ಸಂಗ್ರಹ ಮಾಡಿದ 'ಪುಣ್ಯಪುರುಷ' ರು ನಮ್ಮ ಶಾಂತಿಪ್ರಿಯ ಜನರ ಸಹಿ ಸಂಗ್ರಹ ಪಡೆದದ್ದಾರೂ ಹೇಗೆ?

ಹಿಂದೂತ್ವದ ಉಗ್ರವಾದಿಗಳಿಗೆ ತೀರ ವಿರುದ್ಧವಿದ್ದವರೂ ಕೂಡ, ಈ ಸಹಿ ಸಂಗ್ರಹ ಬ್ರಿಗೇಡಿನ ಆಕ್ರಮಣಕಾರಿ ಪ್ರವೃತ್ತಿಗೆ ಹೆದರಿ ಸ್ವಂತ ಊರಿನಲ್ಲಿ ಈ ಮಂದಿಯನ್ನು ಎದುರುಹಾಕಿಕೊಂಡು ಇವರು ಕೊಡುವ ಉಪಟಳದಿಂದ ದೈನಂದಿನ ಜೀವನ ನರಕ ಮಾಡಿಕೊಳ್ಳುವುದು ಏಕೆ ಎಂದು ಸಹಿ ಹಾಕಿದ್ದಾರೆ.

ವೋಟರ್ಸ್ ಪಟ್ಟಿ ಹಿಡಿದುಕೊಂಡು, ಮನೆಮನೆಗೆ 7-8 ಜನ ದಾಳಿ ಮಾಡಿ, ಜನರನ್ನು ಮಾನಸಿಕ ಒತ್ತಡಕ್ಕೆ ಬಲಿ ಮಾಡಿ ಈ ಮಂದಿ ಸಹಿ ಸಂಗ್ರಹಿಸಿದ್ದಾರೆ. ತಮ್ಮ ವಿರೋಧಿಗಳ ಮನೆಗಳನ್ನು ಪತ್ತೆ ಹಚ್ಚುವುದೇ ಈ ಮಂದಿಯ ಸ್ಪಷ್ಟ ಉದ್ದೇಶ. ಇಂಥವರ ವಿರೋಧ ಕಟ್ಟಿಕೊಳ್ಳುವುದು ಹೇಗೆ?

ಸಹಿ ಸಂಗ್ರಹ ಒಂದು ಪ್ರಜಾತಂತ್ರ ವಿಧಾನವಾದರೂ ಅದಕ್ಕೆ ಬಳಸಿದ ತಂತ್ರ 'ಫ್ಯಾಸಿಸ್ಟ್'ಆದ್ದರಿಂದ ಈ ಸಹಿಗಳನ್ನು ಹಿಡಿದುಕೊಂಡು ರಾಮಮಂದಿರ ಕಟ್ಟಲು ತಮಗೆ ಬಹುಮತದ ಬೆಂಬಲವಿದೆ ಎಂದು ಹೇಳಿಕೊಳ್ಳುವುದು ಎಷ್ಟು ಸಮಂಜಸ?

-- ಕೇಶವರಾವ್, ಮಂಗಳೂರು
ಉದಯವಾಣಿ

27.3.93 ಕನ್ನಡ ಪ್ರಭದಲ್ಲಿ ರಾಮ ಜನ್ಮಭೂಮಿಯಲ್ಲೇ ರಾಮಮಂದಿರ ಕಟ್ಟಬೇಕೆಂಬ ರಾಜ್ಯದ 60 ಲಕ್ಷ ಜನರ ಸಹಿ ಸಂಗ್ರಹಣೆ ಎಂಬ ವರದಿ ಹಾಗೂ ಓದುಗರಾದ ಕೇಶವರಾವ್ ಮಂಗಳೂರು ಇವರ ಪತ್ರವನ್ನು ಓದಿದೆ. ಇದು ನನ್ನ ಅನುಭವವೂ ಹೌದು.

1-2 ತಿಂಗಳ ಹಿಂದೆ ಒಂದು ರಾತ್ರಿ ಸುಮಾರು 9-30ರ ಹೊತ್ತಿಗೆ 4-8 ಜನರ ಗುಂಪೊಂದು ಮನೆಗೆ ಬಂದು ಸಹಿ ಹಾಕಿಸಿಕೊಂಡಿತ್ತು. "ಬ್ರಾಹ್ಮಣರಾದ ನೀವೇ ಸಹಿ ಹಾಕದಿದ್ದರೆ ನಾಳೆ ಬ್ರಾಹ್ಮಣರ ಹಾಗೂ ಉಳಿದವರ ಗತಿಯೇನು" ಎಂಬುದಾಗಿ ಮಾತಾನಾಡಿದರು. ಭವಿಷ್ಯದಲ್ಲಿನ ಅವರುಗಳ ಕಿರುಕುಳ ನೆನೆದು ಅಸಹಾಯಕನಾಗಿ ಸಹಿ ಹಾಕಿದ್ದೇನೆ.

ನನ್ನ ಅಭಿಪ್ರಾಯದಲ್ಲಿ ಇಂದು ದೇಶದಲ್ಲಿ ನಿರುದ್ಯೋಗ, ಭ್ರಷ್ಟಾಚಾರ, ಅದಕ್ಷತೆ ವಂಚನೆಗಳು ಮೆರೆದಾಡುತ್ತಿರುವಾಗ ಅವಗಳನ್ನು ಪರಿಹರಿಸುವ ಕಾರ್ಯದಲ್ಲಿ ಯಾವುದೇ ಪಕ್ಷಸಂಸ್ಥೆಗಳು ಹೋರಾಡಿದರೆ ಆಗ ರಾಮರಾಜ್ಯವೆನಿಸುತ್ತದೆ . ಅದು ಬಿಟ್ಟು ಬಹುಮತ ಪಡೆಯುವ ಹುಂಬುತನದಲ್ಲಿ ಒತ್ತಾಯ ಬಲವಂತಗಳಿಂದ ಬೆಂಬಲ ಸೂಚಿಸುವ ಸಹಿ ಪಡೆದ ಮಾತ್ರಕ್ಕೆ ಅದು ನಿಜವಾದ ಅಭಿಪ್ರಾಯ ಹೇಗಾದೀತು.?

ಅಷ್ಟಕ್ಕೂ ರಾಮಮಂದಿರವನ್ನಾಗಲಿ ಕಟ್ಟಿಬಿಡುವುದರಿಂದ ದೇಶದ ಏಕತೆ, ಸುಭದ್ರತೆ, ಹಿಂದುತ್ವಗಳನ್ನು ಸಾಧಿಸುತ್ತೇವೆಂಬುದು ಬರೀ ಭ್ರಮೆ. ಈ ದೇಶದ, ಅರ್ಧದಷ್ಟು ಜನಸಂಖ್ಯೆ ಎರಡು ಹೊತ್ತಿನ ಅನ್ನಕ್ಕೆ ಪರದಾಡುತ್ತಿರುವಾಗ, ದುಡಿಮೆ ಇಲ್ಲದೆ ಅಲೆದಾಡುತ್ತಿರುವಾಗ ರಾಮಮಂದಿರ ನಿರ್ಮಾಣದ ಅವಶ್ಯಕತೆ ಔಚಿತ್ಯಗಳಾದರೂ ಏನಿದೆ?

ನಮ್ಮ ನಿಜವಾದ ಸಮಸ್ಯೆಗಳತ್ತ ಗಮನ ಹರಿಸದೆ ಕೋಮು-ಜಾತಿ ಮತಗಳ ಹೆಸರಿನಲ್ಲಿ ವೈಮನಸ್ಯ-ಗೊಂದಲವೆಬ್ಬಿಸುವುದು ಯಾವ ನ್ಯಾಯ?

-- ಎಂ.ಎಸ್.ಎಸ್. ರಾವ್, ಸಾಗರ.
ಕನ್ನಡ ಪ್ರಭ

ಗಿಣಿರಾಮ ಮತ್ತು ಎತ್ತು

ಒಂದು ಚಂದದ ಗಿಣಿ
ಬಂದು ಕುಳಿತಿತು
ಮಾವಿನ ಮರದ ಮೇಲೆ
ಮಧ್ಯಾಹ್ನದ ವೇಳೆ
ಅಲ್ಲೆ ಇಲ್ಲೆ ಹಾರಾಡಿ
ಯಾರೋ ಬೆಳೆದ ಕಾಳು ಕಡಿ
ತಿಂದು ಚೆಲ್ಲೆ ತುಂಬಿತ್ತು
ಅದರ
ಉದರ

ನೆರಳು ತಂಗಾಳಿ
ತೂಕಡಿಸುತ್ತಾ ಗಿಳಿ
ಶುರು ಮಾಡಿತು ಪಾಠ
'ರಾಮ' 'ರಾಮ''ರಾಮ'
'ಜೈಸಿಯಾ ರಾಮ್'

ಮರದ ಕೆಳಗೆ ಮುದಿ ಎತ್ತು
ಉತ್ತು ಉತ್ತು ಸುಸ್ತು
ಗೊತ್ತೇ ಇಲ್ಲ ಅದಕ್ಕೆ
ಮೈ ತುಂಬ ಗಿಳಿ ಹಿಕ್ಕೆ
ಸತ್ತಂತೆ ಮಲಗಿತ್ತು

ಕೇಳಿತು ಗಿಳಿ: 'ಎತ್ತೆ ಎತ್ತೆ
ಹ್ಯೇಗಿದೆ ಶ್ರೀ ರಾಮ ಚರಿತೆ?'

ಎತ್ತು 'ಏಳಲಿಲ್ಲ
'ಏನೂ ಹೇಳಲಿಲ್ಲ'
ಬಿಡದೆ ಕೇಳಿತು ಮತ್ತೆ ಮತ್ತೆ
'ಹೇಗಿತ್ತು ರಾಮ ಚರಿತೆ?'
ಎತ್ತು
ಸುಮ್ಮನಿತ್ತು

'ಹೋಗಲಿ ಬಿಡು ಎತ್ತೆ'
ರಾಮ ಯಾರು ಗೊತ್ತೆ?
ಗಿಳಿ ಕೇಳುತ್ತಲೆ ಇತ್ತು
ಹಿಕ್ಕೆ ದೇಳುತ್ತಲೆ ಇತ್ತು

ಇದ್ದಕ್ಕಿದ್ದಂತೆ ಎತ್ತು
ಎದ್ದುನಿಂತು
ಮೈಕೊಡವಿ ಹೇಳಿತು-
'ಏಯ್ ಗಿಳಿ
ಮೊದಲು ಕೆಳಗಿಳಿ
ನನ್ನ ಹಾಗೆ ಉತ್ತು ಬಿತ್ತಿ
ಬೆಳೆಯೋದನ್ನ ಕಲಿ'

-- ಹೆಚ್. ದುಂಡಿರಾಜ್
(ಗಂಗೋತ್ರಿ ಕವಿಗೋಷ್ಠಿಯಲ್ಲಿ ಕೇಳಿ ಬಂದ ಕವನ)



ಕೋಮುವಾದಿಗಳ ಬಗ್ಗೆ ಕಯ್ಯೂರು ವೀರರ ಎಚ್ಚರಿಕೆ

ಕಯ್ಯೂರಿನ ನಾಲ್ವರು ವೀರರನ್ನು ಭಾರತಕ್ಕೆ ರೈತ ಆಂದೋಲನಕ್ಕೆ, ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಕ್ಕೆ ಅರ್ಪಿಸಿದ ಕಾಸರಗೋಡಿನ ತಾಲೂಕಿನ ರೈತ ಸಂಘ 1938ರ ಡಿಸೆಂಬರ್‌ನಲ್ಲಿ ತ್ರಿಕರಪುರದಿಂದ ಮಂಗಳೂರಿಗೆ ಬಂದು ಕಾಲ್ನಡಿಗೆ ಜಾಥಾ ಸಂಘಟಿಸಿತ್ತು. ಇವರ ಉದ್ದೇಶ ಕಾಸರಗೋಡು ತಾಲ್ಲೂಕಿನಲ್ಲಿ ಜನ್ಮಿ (ಜಮೀಂದಾರರು) ಗಳಿಂದ ನಡೆಯುತ್ತಿರುವ ದೌರ್ಜನ್ಯ, ಅನ್ಯಾಯ, ಅಕ್ರಮ ಗೇಣಿವಸೂಲಿ ಬಗ್ಗೆ ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸುವುದು. ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರಿಗೆ ಕೊಟ್ಟಾ ಈ ಮನವಿ ರೈತರ ಆಗಿನ ಸಮಸ್ಯೆಗಳ ಮತ್ತು ದಾರುಣ ಪರಿಸ್ಥಿತಿಯ ಯಥಾರ್ಥ ಚಿತ್ರವನ್ನೊಳಗೊಂಡಿತ್ತಲ್ಲದೆ ಆಗಲೂ ದುಡಿಯುವ ಜನರ ಹೋರಾಟವನ್ನು, ಐಕ್ಯತೆಯನ್ನು ಮುರಿಯಲು ಕೋಮುಶಕ್ತಿಗಳು ಪ್ರಯತ್ನಿಸುತ್ತಿದ್ದವರ ಬಗ್ಗೆ ರೈತರು ಜಾಗರೂಕರಾಗಿದ್ದರು ಎಂಬುದನ್ನು ತೋರಿಸುತ್ತದೆ. ಆ ಮನವಿಯ ಒಂದು ಅಂಶ ನಮ್ಮ ಓದುಗರಿಗಾಗಿ ಇಲ್ಲಿದೆ.

ನಮ್ಮ ಸಂಘಟಿತ ಶಕ್ತಿಯಿಂದಾಗಿ ಭಯಪಟ್ಟ ಮೇಲು ವರ್ಗದ ಜನ್ಮಿಗಳು, ಅಧಿಕಾರಿಗಳು ನಮ್ಮ ವಿರುದ್ಧ ಕೆಲಸ ಮಾಡುತ್ತಿದ್ದಾರೆ. ನಾವು ಕಾನೂನಿನ ವಿರುದ್ಧವಾದುದ್ದು ಯಾವುದನ್ನೂ ಮಾಡದೆ ಶಾಂತಿಯುತವಾಗಿ ಪ್ರತಿಭಟಿಸುತ್ತಿರುವುದರಿಂದ ನಮ್ಮ ಸಂಘಟನೆಯ ವಿರೋಧಿಗಳಿಗೆ ನಮ್ಮ ಚಟುವಟಿಕೆಗಳನ್ನು ಸುಲಭವಾಗಿ ಅಡಗಿಸಲು ಸಾಧ್ಯವಾಗಿಲ್ಲ. ಹತಾಶರಾಗಿ ಇವರು ನಮ್ಮ ವಿರುದ್ಧ ಸುಳ್ಳು ವದಂತಿಗಳನ್ನು ಹಬ್ಬಿಸಿ ಸರಕಾರದ ಉನ್ನತ ಅಧಿಕಾರಿಗಳ ಮಾರ್ಗ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಜನ್ಮಿಗಳು ಮತ್ತು ಗ್ರಾಮದ ಅಧಿಕಾರಗಳು, ಮೇಲು ವರ್ಗದವರು ನಮ್ಮ ವಿರುದ್ಧ ಸುಳ್ಳು ಕೇಸುಗಳನ್ನು ಸೃಷ್ಟಿಸಿ ನಮ್ಮ ರೈತರನ್ನು ಬಗ್ಗು ಬಡಿಯಲು ಪ್ರಯತ್ನಿಸುತ್ತಿದ್ದಾರೆ. ಇದೂ ಸಾಲಾಗದೆ ನಮ್ಮದು ಹಿಂದೂ ಸಂಘಟನೆ ಎನ್ನುವ ಸುಳ್ಳು ವದಂತಿಗಳನ್ನು ಹಬ್ಬಿಸಿ ನಾವು ಮುಸ್ಲಿಮರ ವಿರುದ್ಧ ಕೆಲಸ ಮಾಡುತ್ತಿದ್ದೇವೆಂದು ಹೇಳಿ ಬಡ ಮುಸ್ಲಿಮ್ ರೈತರನ್ನು ನಮ್ಮ ವಿರುದ್ಧ ಎತ್ತಿ ಕಟ್ಟುತ್ತಿದ್ದಾರೆ. ಈ ಸುಳ್ಳು ವದಂತಿಯಿಂದಾಗಿ ಚರ್ವತ್ತೂರು ಗ್ರಾಮದಲ್ಲಿ ಅಹಿತಕರ ಘಟನೆಯೊಂದು ನಡೆಯಲು ಕಾರಣವಾಯಿತು. ಮುಂದೆಯೂ ಬಹಳಷ್ಟು ಘಟನೆಗಳಿಗೆ ಇವರು ಕಾರಣರಾದರು. ನಾವು ಒಗ್ಗಟ್ಟಾಗಿರುವ ತನಕ ನಮ್ಮನ್ನು ಎದುರಿಸುವುದು ಅವರಿಗೆ ಅಸಾಧ್ಯ ಎಂಬುದು ಅವರ ಭಯ. ನಮ್ಮ ಹಕ್ಕುಗಳ ಬಗ್ಗೆ ಮಾತಾಡುವುದಕ್ಕೆ ನಾವು ಯಾರಿಗೂ ಹೆದರುವುದಿಲ್ಲವೆನ್ನುವುದನ್ನು ಅವರು ಚೆನ್ನಾಗಿ ಮನಗಂಡಿದ್ದಾರೆ. ಇದು ಅವರಿಗೆ ಸಹಿಸಲು ಸಾಧ್ಯವಾಗಿದೆ.

"ಜಮೀನ್ದಾರರು ಸೋತದ್ದನ್ನು ಕಂಡದ್ದು ಇದೇ ಮೊದಲು"

ಎಂದ ಚಿರಕುಂದನ್ ತಂದೆ

ಇದೇಮಾರ್ಚ್ 29, 1993 ಕ್ಕೆ ಕಯ್ಯೂರಿನ ನಾಲ್ವರು ಯುವಕ ರೈತರು, ಕಮ್ಯುನಿಸ್ಟ್ ಪಕ್ಷದ ಸದಸ್ಯರು ಹಾಗೂ ಕರ್ಷಕ ಸಂಘಂ (ರೈತ ಸಂಘ)ದ ಕಾರ್ಯಕರ್ತರು - ಮಡತ್ತಿಲ್ ಅಪ್ಪು, ಚಿರುಕುಂಡನ್ ಅಬುಬಕರ್ ಹಾಗೂ ಕುಂಞಂಬು ನಾಯರ್ ಬ್ರಿಟಿಷರ ನೇಣುಗಂಬವೇರಿ ಹುತಾತ್ಮರಾಗಿ 50 ವರ್ಷಗಳು ಸಂದವು. ನೇಣುಗಂಬವೇರಿದ ಇವರೆಲ್ಲಾ ಇಪ್ಪತ್ತರ ಹರೆಯದವರು. ಕಯ್ಯೂರು ಹುತಾತ್ಮ ಗಾಥೆ ಕೇರಳದ ಮಹಾನ್ ಕ್ರಾಂತಿಕಾರಿ ಸಾಮ್ರಾಜ್ಯಶಾಹಿ-ವಿರೋಧಿ ಆಂದೋಲನದ ಒಂದು ಭವ್ಯ ಅಧ್ಯಾಯ. ಮಲಬಾರ್ ಪ್ರದೇಶದಲ್ಲಿ ರೈತರ ನಡುವೆ ಕ್ರಾಂತಿ ಆಂದೋಲನ ಬೇರು ಬಿಡದಂತೆ ತಡೆಯಲು ಈ ಘಟನೆಯ ಮೂಲಕ ಹಾಗೂ ನಂತರ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ನಡೆಸಿದ ಪ್ರಯತ್ನವನ್ನು ಸಂಪೂರ್ಣ ವಿಫಲಗೊಳಿಸಿ ಆ ಪ್ರದೇಶದಲ್ಲಿ ಕಮ್ಯುನಿಸ್ಟ್ ಆಂದೋಲನ ಶಕ್ತಿಶಾಲಿಯಾಗಿ ಬೆಳೆಯುವಂತೆ ಮಾಡಿದ ಮಹಾನ್ ಬಲಿದಾನ ಈ ನಾಲ್ವರದ್ದು.

ಅವರ ಬಲಿದಾನದ 50 ನೇ ವಾರ್ಷಿಕದಂದು ದೇಶದ ಸಮಸ್ತ ಕಾರ್ಮಿಕ ಆಂದೋಲನ ವೀರ ವಂದನೆ ಅರ್ಪಿಸಿದೆ. ಈ ಹೋರಾಟದ 'ಚಿರಸ್ಮರಣೆ'ಯನ್ನು ಸಾಹಿತ್ಯದಲ್ಲಿ ಅಮರಗೊಳಿಸಿದ ನಿರಂಜನರ ಕೃತಿಯ ಒಂದು ಭಾಗ ಹಾಗೂ ನೇಣುಗಂಬವನ್ನು ಏರುವ ಹಿಂದಿನ ಈ ನಾಲ್ವರು ವೀರರು ಪಕ್ಷದ ಕಾರ್ಯದರ್ಶಿಗೆ ನೀಡಿದ ಹೇಳಿಕೆಗಳು ಹಾಗೂ ಪಕ್ಷದ ಸಂದೇಶವನ್ನ ಈ ಪುಟಗಳಲ್ಲಿ ನೆನಪಿಸಿಕೊಳ್ಳುತ್ತಾ 'ಐಕ್ಯರಂಗ'ವೂ ತನ್ನ ಕೆಂಪುವಂದನೆ ಅರ್ಪಿಸುತ್ತದೆ.

ತಳಿಪರಂಬ ಜಾತ್ರೆಯ ಸಮಯದಲ್ಲಿ ಅಲ್ಲಿಯೇ ಸಮೀಪದ ಒಂದು ಹಳ್ಳಿಯಲ್ಲಿ ಜರುಗಲು ಏರ್ಪಾಟಾಗಿದ್ದ ಉತ್ತರ ಮಲಬಾರಿನ ರೈತಸಮ್ಮೇಳನಕ್ಕೆ ಕಯ್ಯೂರಿನಿಂದ ಆದಷ್ಟು ಜನ ರೈತರನ್ನು ಪ್ರೇಕ್ಷಕರಾಗಿ ಕಳುಹಿಸಬೇಕೆಂದು ಮಾಸ್ತರು ಯೋಚಿಸಿದರು. . ಸಮ್ಮೇಳನಕ್ಕೆ ಹೋಗುವ ಮಾತನ್ನು ಬಹಿರಂಗಗೊಳಿಸಲುವ ಹಾಗಿರಲಿಲ್ಲ. ಚರ್ವತ್ತೂರಿನಿಂದ ತಳಿಪರಂಬಕ್ಕೆ ರೈಲು ಗಾಡಿಯಲ್ಲಿ ಕೆಲವೇ ಗಂಟೆಗಳ ಪ್ರವಾಸ. ಎರಡುದಿನಗಳ ಸಮ್ಮೇಳನ ಮುಗಿಸಿ ಮೂರನೆಯ ಬೆಳಗು ಮುಂಜಾನೆ ಕಯ್ಯೂರಿಗೆ ಮರಳುವುದು ಸಾಧ್ಯವಿತ್ತು. ಈ ಪ್ರವಾಸವೇ ಕಯ್ಯೂರಿನ ರೈತ ಸಂಘದ ಸ್ಥಾಪನೆಗೆ ಬುನಾದಿಯಾಗುವುದೆಂದು ಮಾಸ್ತರು ನಂಬಿದ್ದರು. ಅಪ್ಪು-ಚಿರುಕಂಡರಿಗೂ ಆ ಸಮ್ಮೇಳನದ ಮಹತ್ವ ಅರ್ಥವಾಗಿತ್ತು. ಹೋಗುವವರು ಯಾರು? ಆ ಜವ್ವನಿಗರಿಬ್ಬರು, ಚಿರುಕುಂಡನ ತಂದೆ, ಸಾಧ್ಯವಾದರೆ ಅಪ್ಪುವಿನ ತಂದೆ ಕೂಡ, ಕಣ್ಣ, ಕೋರ, ಬೇರೆಯೂ ನಾಲ್ಕಾರು ಜನ ರೈತರು. ಮಾಸ್ತರು ಈ ವಿಷಯ ಪ್ರಸ್ತಾಪಿಸಿದಾಗ ಅವರೆಲ್ಲಾ ತೋರಿದ ಆಸಕ್ತಿ ಅಷ್ಟಿಷ್ಟಲ್ಲ.

ಹೊಲಗಳಲ್ಲಿ ಕುಯಿಲು ಆರಂಭವಾಯಿತು. ಅನಂತರ ಸಮ್ಮೇಳನಕ್ಕಿದ್ದುದು ಒಂದೇ ವಾರ. ಪೈರು ಅಂಗಳಕ್ಕೆ ಬಂದೊಡನೆಯೇ ಹೋಗಿ ಬರಲು ದಿನ ಅನುಕೂಲವಾಗಿತ್ತು.



ಆದರೆ ಹೊರಡಬೇಕಾದ ಹಿಂದಿನ ದಿನ ಅಪ್ಪು ಸಪ್ಪೆಮೋರೆಯೊಡನೆ ಮಾಸ್ತರ ಬಳಿಗೆ ಬಂದ.

"ಏನು ವಿಶೇಷ ಅಪ್ಪು?" ಎಂದರು ಮಾಸ್ತರು.

"ಕೃಷ್ಣನ್‌ನಾಯರ್ ಬರೋದಕ್ಕಾಗೋದಿಲ್ಲ ಮಾಸ್ತರೆ. ಅವನ ಹೊಲದಲ್ಲಿನ್ನೂ ಕುಯಿಲೇ ಆಗಿಲ್ಲ. ನಾಳೆಗೆ ಇಟ್ಟುಕೊಂಡಿದ್ದಾನೆ."

ಕೃಷ್ಣನ್‌ನಾಯರ್ ನಂಬಿಯಾರರ ಒಕ್ಕಲು. ತುಂಬಾ ಉತ್ಸಾಹಿ. ಆತ ಸಮ್ಮೇಳನಕ್ಕೆ ಹೋಗಲೇಬೇಕೆಂಬುದು ಮಾಸ್ತರರ ಅಪೇಕ್ಷೆಯಾಗಿತ್ತು. ಅವರು ಯೋಚಿಸಿ ಹೇಳಿದರು:

"ಅಷ್ಟೇನೆ? ಸಮ್ಮೇಳನಕ್ಕೆ ಹೋಗುವವರೆಲ್ಲ ನಾಳೆ ಹೊಲಕ್ಕಿಳಿದು ಕೃಷ್ಣನ್ ನಾಯರಿಗೆ ಸಹಾಯಮಾಡಿ. ಅವನದೇನು ಹತ್ತು ಎಕರೆ ಜಮೀನೆ? ಕತ್ತಲಾಗುವ ಹೊತ್ತಿಗೆ ನೀವೆಲ್ಲ ಇಲ್ಲಿಂದ ಹೊರಟರೆ ಸಾಕು. ಸಾಯಂಕಾಲ ಮಂಗಳೂರಿನಿಂದ ಹೊರಡೋ ರೈಲು ಸಿಕ್ಕಿಯೇ ಸಿಗ್ತದೆ. ಅಲ್ಲವಾ?"

ಕಯ್ಯೂರಿನ ನಾಲ್ವರು ವೀರರೊಂದಿಗೆ ಶಿಕ್ಷೆಗೆ ಗುರಿಯಾದ ಆದರೆ ಇನ್ನೂ ಹದಿವಯಸ್ಸಿನವರಾದುದುರಿಂದ ನೇಣುಗಂಬದಿಂದ ಪಾರಾದ ಕಾ. ಕೃಷ್ಣನ್ ನಾಯರ್ ಹಾಗೂ 'ಚಿರಸ್ಮರಣೆ' ಯ ಪ್ರಸಿದ್ಧ ಮಾಸ್ತರು ಕಾ. ಕೆ. ಮಾಧವನ್‌ರ ಇತ್ತೀಚಿನ ಫೋಟೋಗಳು.

"ಹೂಂ. ಮಧ್ಯಾಹ್ನ ಚಿರುಕಂಡನೂ ಅದೇ ಸಲಹೆ ಮಾಡ್ದ. . ಆದರೂ ಕೇಳೋಣಾಂತ ಬಂದೆ. ನೀವು ಹೇಳಿದ ಹಾಗೇ ಮಾಡ್ತೇವೆ."

.... ಮಾರನೆಯ ಬೆಳಗ್ಗೆ ಕೃಷ್ಣನ್ ನಾಯರನ ಹೊಲದಲ್ಲಿ ಎಲ್ಲಿಲ್ಲದ ಸಂಭ್ರಮ. ಸಹಬಾಂಧವನಿಗೆ ನೆರವಾಗಲು ರೈತರ ತಂಡವೇ ಬಂದಿತ್ತು. ತಮ್ಮ ಕುಯಿಲು ಮುಗಿದಿದ್ದು ಅಕ್ಕಪಕ್ಕದವರೂ ಹೊಲಕ್ಕಿಳಿದರು. ಮೇಲೇರುತ್ತಿದ್ದ ಸೂರ್ಯನೊಡನೆ ಸ್ಪರ್ಧಿಸುತ್ತ ಕುಡುಗೋಲು ಹಿಡಿದ ಕೈಗಳು ಫಲಭಾರದಿಂದ ಬಾಗಿದ್ದ ಭತ್ತದ ಸಸಿಗಳು ಕರಕರನೆ ಕುಯ್ದುವು. ರೈತ ಹೆಂಗಳೆಯರು ಪಾಡ್ದನಗಳನ್ನು ಹಾಡಿದರು. ಕಣ್ಣ ಹೊಸ ಹಾಡಿನಿಂದ ದುಡಿಯುವವರ ಉಲ್ಲಾಸ ಹೆಚ್ಚುವಂತೆ, ಕೈಗಳ ಬಿರುಸು ಇಮ್ಮಡಿಯಾಗುವಂತೆ ಮಾಡಿದ. ಮಧ್ಯಾಹ್ನದ ವಿರಾಮದ ವೇಳೆಗೆ ಉಳಿದುದು ಸ್ವಲ್ಪವೇ. ಮೂರು ಗಂಟೆಯ ಹೊತ್ತಿಗೆಲ್ಲ ಕುಯ್ಲು ಮುಗಿದೇ ಹೋಯಿತು. ಕೃಷ್ಣನ್‌ನಾಯರ ಮುಖ ಅರಳಿ, ಮೊರದಷ್ಟು ಅಗಲವಾಯಿತು.

ಇನ್ನೇನು ಕುಯ್ದುದನ್ನು ರಾಶಿಹಾಕಿ ಕೃಷ್ಣನ್ ನಾಯರ ಗುಡಿಸಲಿಗೆ ಒಯ್ದುಮುಟ್ಟಿಸುವುದೊಂದೇ ಕೆಲಸ. ಅದಕ್ಕೆ ಪೂರ್ವಭಾವಿಯಾಗಿ ನಾಲ್ಕು ನಿಮಿಷ ದಣಿವಾರಿಸಿಕೊಳ್ಳಲೆಂದು ರೈತರೆಲ್ಲ ಕುಳಿತರು.

ಅಷ್ಟರಲ್ಲಿ ಪುಷ್ಟವಾದ ಎತ್ತುಗಳನ್ನು ಹೂಡಿದ್ದ ಗಾಡಿ ಅತ್ತ ಬರತೊಡಗಿತ್ತು.

"ಗಾಡಿಗೆ ಹೇಳಿದ್ದೆ ಏನಪ್ಪ ಕೃಷ್ಣನ್‌ನಾಯರ್? ಬರ್‍ತಾ ಇದೆಯಲ್ಲ ಯಾವುದೋ ರಥ!'' ಎಂದು ಯಾರೋ ಅಂದರು.

ಇದೇನು ತಮಾಷೆಯೋ ವಾಸ್ತವವೋ ಎಂದು ತಿಳಿಯಲು ಎಲ್ಲರೂ ಅತ್ತ ಕತ್ತು ತಿರುಗಿಸಿ ನೋಡಿದರು.

ಕೃಷ್ಣನ್‌ನಾಯರೇ ಮೊದಲು ಹೋರಿಗಳನ್ನು ಗುರುತಿಸಿ, "ಅದು ಜಮೀನ್ದಾರರ ಗಾಡಿ''ಎಂದ. ಹಾಗೆ ಹೇಳುತ್ತಲಿದ್ದಂತೆ ಆತನ ಮುಖ ಕಪ್ಪಿಟ್ಟಿತು.

"ತನ್ನ ಸಹಾಯವೂ ಒಂದಿಷ್ಟು ಇರಲೀಂತ ನಂಬಿಯಾರರೇ ಕಳಿಸಿದ್ದಾರೋ" ಎಂದು ಹೇಳಿ ಯಾರೋ ನಕ್ಕರು.

ಆದರೆ ಆ ವಾತಾವರಣ ಬದಲಾಗಲು ಹೆಚ್ಚು ಹೊತ್ತು ಹಿಡಿಯಲಿಲ್ಲ. ಕೃಷ್ಣನ್‌ನಾಯರ್ ಊಹಿಸಿದ್ದಂತೆಯೇ ಆಯಿತು. ಆತನ ಪೈರನ್ನು ವಶಪಡಿಸಿಕೊಂಡು ಜಮೀನ್ದಾರರ ಮನೆಗೊಯ್ಯುವುದಕ್ಕೇ ಆ ಗಾಡಿ ಬಂದಿತ್ತು. ಗಾಡಿಯ ಜತೆಯಲ್ಲಿ ಜಮೀನ್ದಾರರ ಕಡೆಯ ಕ್ರೂರಿಗಳೆಂದು ಕುಪ್ರಸಿದ್ಧರಾಗಿದ್ದ ಇಬ್ಬರು ಆಳುಗಳೂ ಇದ್ದರು. ಇಷ್ಟೊಂದು ಜನರನ್ನು ನೋಡಿ ಆಳುಗಳು ಸ್ವಲ್ಪ ಹಿಂತೆಗೆದರೂ ಅವರಲ್ಲೊಬ್ಬ ಕೃಷ್ಣನ್‌ನಾಯರನ್ನು ಉದ್ದೇಶಿಸಿ ಹೇಳಿದ:

> "ಹೂಗಳೇನು ಮಹಾ! ಅವು ಕ್ಷಣದಲ್ಲೇ ಬಾಡಿ ಉದುರುತ್ತವೆ. ಆದರೆ ನಮ್ಮ ಕಯ್ಯೂರು ಸಂಗಾತಿಗಳಾರೋ, ಎಂದೆಂದಿಗೂ ಬಾಡದ, ಉದುರದ, ಮಾನವೀಯತೆಯ ಶ್ರೇಷ್ಠ ಚಿರಂತನ ಪುಷ್ಪಗಳು, ಅವಿನಾಶಿಗಳು ಅಮರರು" .
>
> - ಪಿ.ಸಿ. ಜೋಷಿ.

"ಪೈರನ್ನು ಸಾಗಿಸಿಕೊಂಡು ಬರೋದಿಕ್ಕೆ ಜಮೀನ್ದಾರರು ಹೇಳಿದ್ದಾರೆ."

ಅದನ್ನು ಕೇಳಿ, ಮೊದಲು ನಿಂದೆಯ ಮಾತುಗಳನ್ನಾಡುತ್ತ ಆಕ್ರೋಶಮಾಡಿದವಳು ಕೃಷ್ಣನ್‌ನಾಯರ ಹೆಂಡತಿ. ಅಷ್ಟೊಂದು ಜನರ ಸಾಮೀಪ್ಯದಲ್ಲಿ ಆಕೆಯ ಬಡ ಗಂಟಲಿಗೆ ಎಲ್ಲಿಲ್ಲದ ಬಲ ಬಂದಿತ್ತು. ರೈತರೆಲ್ಲ ಗಾಡಿಯನ್ನೂ ಬೆದರಿದ ಎತ್ತುಗಳನ್ನೂ ಆ ಇಬ್ಬರನ್ನೂ ಸುತ್ತುವರಿದರು. ಒಬ್ಬರು ಆಡಿದುದು ಇನ್ನೊಬ್ಬರಿಗೆ ಅರ್ಥವಾಗದ ಹಾಗೆ, ಆ ಪ್ರದೇಶವೆಲ್ಲ ಮಾತಿನಿಂದ ತುಂಬಿ ಹೋಯಿತು. ಕೃಷ್ಣನ್‌ನಾಯರ್ ಸಂದಾಯ ಮಾಡದೇ ಉಳಿಸಿದ್ದ ಇನ್ನೂರು ರೂಪಾಯಿಗಳ ಸಾಲವೊಂದಿತ್ತು. ಬರಿಯ ಗೇಣಿಗಾಗಿ ಕಾಯದೆ ಇಡಿಯ ಪೈರನ್ನೇ ವಶಪಡಿಸಿಕೊಂಡು ತಮ್ಮ ಹಣವನ್ನು ಮರಳಿ ಪಡೆಯಲು ಜಮೀನ್ದಾರರು ನಿರ್ಧರಿಸಿದ್ದರು. ಆದ್ದರಿಂದ ಕೃಷ್ಣನ್‌ನಾಯರಿಗೆ ಮತ್ತಷ್ಟು ನಷ್ಟವಾಗುವುದೆಂಬುದು ಮತ್ತೆ ಜೀವನ ನಿರ್ವಹಣಕ್ಕೋಸ್ಕರ ಸಾಲ ಪಡೆಯಲು ಜಮೀನ್ದಾರರನ್ನೇ ಆತ ಅವಲಂಬಿಸಬೇಕಾಗುತ್ತದೆಂಬುದೂ ಸ್ಪಷ್ಟವಾಗಿತ್ತು.

ರೈತ ಬಾಂಧವರೆಡೆಯಲ್ಲಿ ನಿಂತಿದ್ದ ಕೃಷ್ಣನ್‌ನಾಯರ್ ಧೈರ್ಯಗೆಡಲಿಲ್ಲ.

"ನ್ಯಾಯ ನೋಡ್ಕೊಳ್ಳಿ" ಎಂದು ವಾದಿಸಿದ ಮಾತು ಬಲವಾಯಿತು. ನಂಬಿಯಾರರ ಭಟರ ಬೆದರಿಕೆಯ ನುಡಿಗಳಿಗೆ ರೈತರ ಅಣಕನುಡಿಗಳು ಸರಿ ಮಿಗಿಲೆನಿಸಿದ ಉತ್ತರವಾದುವು. ಅರ್ಧ ಘಂಟೆಯ ಹೊತ್ತು ಪರಿಸ್ಥಿತಿ ಹೀಗೆಯೇ ಉಳಿದು, ಗಾಡಿಯೂ ಆಳುಗಳೂ ಬಂದ ದಾರಿಯಲ್ಲೇ ಹಿಂತಿರುಗಬೇಕಾಯಿತು. ನೆರದಿದ್ದವರೆಲ್ಲ ಬೇಗಬೇಗನೆ ಪೈರನ್ನು ಹೊತ್ತು ಕೃಷ್ಣನ್ ನಾಯರ್ ಅಂಗಳಕ್ಕೆ ಸಾಗಿಸಿದರು.

ಆ ಕೆಲಸ ಮುಗಿಯುವ ಹೊತ್ತಿಗೆ ಚಿರುಕುಂಡನ ತಂದೆಯೆಂದ:

"ಜಮೀನ್ದಾರರು ಸೋತದ್ದನ್ನು ನನ್ನ ಜೀವಮಾನದಲ್ಲಿ ಇದೇ ಮೊದಲ್ನೆ ಸಲ ನಾನು ಕಂಡದ್ದು!"

ಕಣ್ಣ ಗೆಲುವಿನ ಧ್ವನಿಯಲ್ಲಿ ಹೇಳಿದ:

"ಇದೆಂಥ ಸೋಲು ಮಾವ? ಈಗ ಶುರುವಾಗಿದೆ ಅಷ್ಟೇ. ಮುಂದೆ ನೋಡು ಏನಂತೆ!"

ನೇಣುಗಂಬ ಏರುವ ಮೊದಲು ಕಯ್ಯೂರು ವೀರರಿಗೆ ಪಕ್ಷದ ಸಂದೇಶ

"ಕಮ್ಯುನಿಸ್ಟ್ ಪಕ್ಷ ನಿಮ್ಮ ಬಗ್ಗೆ ಅಭಿಮಾನ ಹೊಂದಿದೆ, ಹೆಮ್ಮೆಪಡುತ್ತದೆ. ನಮ್ಮ ಪಕ್ಷದ ಸದಸ್ಯತ್ವ ಕೇವಲ ನೂರಿನ್ನೂರು ಇದ್ದಾಗ ನೀವು ನಮ್ಮ ಪಕ್ಷ ಸೇರಿದಿರಿ. ನಮ್ಮ ಸದಸ್ಯ ಬಲ ಹದಿನೇಳು ಸಾವಿರಕ್ಕೆ ಮುಟ್ಟಿದೆ. ನೀವು ನಡೆಸಿದ ಹೋರಾಟವನ್ನು ಬೆಂಬಲಿಸಲು, ಹಾಗೆಯೇ ಮುಂದುವರಿಸಲು ಅವರೆಲ್ಲರೂ ಒಕ್ಕೊರಲಿನಿಂದ ಪ್ರತಿಜ್ಞೆ ಮಾಡಿದ್ದಾರೆ. ದೇಶದ ಸ್ವಾತಂತ್ರ್ಯದ ಸಲುವಾಗಿ, ರೈತರ ವಿಮೋಚನೆಗಾಗಿ, ಜನತೆಯ ಏಳಿಗೆಗಾಗಿ ಜೀವ ಬಲಿದಾನ ನೀಡಲಿರುವ ನೀವು ಇತಿಹಾಸದಲ್ಲಿ ಚಿರಸ್ಮರಣೀಯರಾಗುತ್ತೀರಿ. ಎಲ್ಲೆಲ್ಲೂ ನಮ್ಮ ಪಕ್ಷವು ನಿಮ್ಮ ಹೆಸರಗಳನ್ನು ಪ್ರೀತಿ ವಿಶ್ವಾಸಗಳಿಂದ ನೆನಪು ಮಾಡಿ ಕೊಳ್ಳುತ್ತಿರುತ್ತದೆ. ನಮ್ಮ ಪಕ್ಷ, ನಿಮ್ಮನ್ನು ನಾಲ್ಕು ಮಂದಿಯನ್ನು ಕಳೆದುಕೊಳ್ಳುವುದಿಲ್ಲ, ನಾವು ನಾಲ್ಕು ಮಂದಿ ಹುತಾತ್ಮರನ್ನು ಪಡೆದುಕೊಳ್ಳುತ್ತೇವೆ. ನಿಮ್ಮನ್ನು ಸಾವಿನ ದವಡೆಯಿಂದ ಉಳಿಸಿಕೊಳ್ಳಲು ನಮಗೆ ಸಾಧ್ಯವಾಗಲಿಲ್ಲ. ಆದರೆ ನಿಮ್ಮ ಹೋರಾಟದ ಮತ್ತು ಬಲಿದಾನದ ಸ್ಫೂರ್ತಿಯಿಂದ ನಿಮ್ಮಂತಹ ನಾಲ್ನೂರು, ನಾಲ್ಕು ಸಾವಿರ, ನಾಲ್ಕು ಲಕ್ಷ, ಲಕ್ಷಾಂತರ ವೀರರನ್ನು ಪಡೆಯಲು ಪಕ್ಷಕ್ಕೆ ಸಾಧ್ಯವಾಗುತ್ತದೆ. ಅದನ್ನು ಯಾವ ಶಕ್ತಿಯೂ ತಡೆಯಲಾರದು."



'ಬದುಕನ್ನು ಪ್ರೀತಿಸಿದ' ಈ ಬಾಂಧವರು
ಒಳ್ಳೆಯ ಬದುಕಿಗೋಸ್ಕರ
ದುಡಿದರು, ಮಡಿದರು,
ಎಂಬ ಒಕ್ಕಣೆಕೆ ಹೊತ್ತ
ಕಯ್ಯೂರು ಹುತಾತ್ಮ ಸ್ಮಾರಕ

ಈ ವೀರರ ಕಥೆ ಕೇಳಿ ಕರಗದ ಕಲ್ಲೆದೆಯಾದರೂ ಯಾವುದು?

ಠಣಂ ಠಣಕ್ ಠಣಂ...

ಮಂಗಳ ಹಾಡುತ್ತಿದ್ದಾರೆ. 'ಕಯ್ಯೂರು ವೀರಗಾಥಾ' ಇಲ್ಲಿಗಾಯಿತು, ಬಾಂಧವ! ಜನ ಏಳುತ್ತಿದ್ದಾರೆ. ಏಳಿ ನೀವೂ....

ಆ ಹೆಂಗಸರು ಗಂಡಸರೆಲ್ಲರ ಮುಖಗಳನ್ನೇನು ನೋಡುತ್ತಿದ್ದೀರಿ? ಕಪೋಲಗಳು ತೋಯ್ದಿವೆಯೆಂದೆ? ಭಾರವಾದ ಹೃದಯಗಳನ್ನು ಹೊತ್ತು ಅವರು ನಿಂತಿರುವರೆಂದೆ?

ಇದೇನು ನನ್ನನ್ನೂ ಯಾಕೆ ಹೀಗೆ ನೋಡುತ್ತಿದ್ದೀರಿ?

ತಿಳಿಯಿತು! ಎಲ್ಲಿ-ಸ್ವಲ್ಪ ನಿಮ್ಮ ಕಪೋಲಗಳನ್ನೇ ನೀವು ಮುಟ್ಟಿಕೊಳ್ಳಿ!

ನಾನು ಬಲ್ಲೆ. ಅದು ತಪ್ಪಲ್ಲ. ಹಾಗೆ ಮಿಡಿಯುವ ಮನಸ್ಸೇ ನಿರ್ಮಲ ಹೃದಯಕ್ಕೆ ಕನ್ನಡಿ. ಅಲ್ಲದೆ, ಈ ವೀರಕಥೆಯನ್ನು ಕೇಳಿ ಕರಗದ ಕಲ್ಲೆದೆಯಾದರೂ ಯಾವುದು?

ಜನ ಸಾಲುಕಟ್ಟಿ ನಿಂತು ಹುತಾತ್ಮರ ಸ್ಮಾರಕಸ್ತೂಪದೆದುರು ಶ್ರದ್ಧಾಂಜಲಿ ಅರ್ಪಿಸುತ್ತಿದ್ದಾರೆ. ಬನ್ನಿ. ನಾವೂ ನಿಂತು ನಮ್ಮ ಸರದಿಗಾಗಿ ಕಾಯೋಣ.

——— ಆ ಅಮೃತಶಿಲೆಯ ಸ್ತೂಪ.... ಆ ವಾಚನಾಲಯ...

ದೇಶದಾದ್ಯಂತ ನಿಧಿ ಸಂಗ್ರಹಿಸಿ ಈ ಸ್ಮಾರಕದ



"ನಾನು ನಮ್ಮ ಜನರಿಗಾಗಿ ಏನೆಲ್ಲ ...ಲು ಸಾಧ್ಯವಾಯಿತೋ, ಅದೆಲ್ಲ ... ನಾನು ಪಕ್ಷದಿಂದಲೇ ಕಲಿತೆ. ನಾನು ...ರ್ತವ್ಯವನ್ನು ಮಾಡಿದ್ದೇನೆಂದು. ಪಕ್ಷ ...ರ ಸಾಕು. ಅಷ್ಟೇ ನನ್ನ ಬಯಕೆ"

ಪೊಡವರ ಕುಂಞಂಬು.



"ಪಕ್ಷ ಬಲಶಾಲಿಯಾಗಿ ಬೆಳೆಯುತ್ತಿರುವ ಶುಭ ವಾರ್ತೆಯನ್ನು ನೀವಿಂದು ತಂದಿದ್ದೀರಿ. ನಾವು ನೇಣುಗಂಬವನ್ನೇರಿ ಪಕ್ಷಕ್ಕೆ ಇನ್ನಷ್ಟು ಶಕ್ತಿಯನ್ನು ತುಂಬುತ್ತೇವೆ. ನಾವು ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಲು ಮತ್ತು ಅದಕ್ಕೋಸ್ಕರ ಪ್ರಾಣಾರ್ಪಣೆ ಮಾಡಲು ಸಹ ಸಿದ್ಧರಾಗಿಯೇ ಪಕ್ಷವನ್ನು ಸೇರಿದೆವು. ನಮ್ಮ ಕರ್ತವ್ಯ ನೆರವೇರಿಸಿದೆವು"

ಮಡತ್ತಿಲ್ ಅಪ್ಪು.



...ಾವು ಕೇವಲ ನಾಲ್ಕು ಮಂದಿ ಕೃಷಿಕ... ನಮ್ಮ ದೇಶದಲ್ಲಿ ಕೋಟಿಗ... ಕೃಷಿಕರಿದ್ದಾರೆ. ನಮ್ಮನ್ನು ಗಲ್ಲಿಗೇ ...ಲ್ಲಬಹುದು. ಆದರೆ ಕೃಷಿಕರನ್ನೆಲ್ಲ ...ಮಾಡಲು ಸಾಧ್ಯವಿಲ್ಲ. ಇದು ನಮಗೆ ... ತುಂಬುತ್ತದೆ. ನೀವು ದೇಶದ ...ಭಾಗ...ದಲೂ ಜನರ ಸಂದೇಶ ...ನಮಗೆ ತಂದೊಪ್ಪಿಸಿದ್ದೀ... ಅದು ...ಚೈತನ್ಯ ನೀಡುತ್ತದೆ. ನಮ್ಮ ಜನ ...ನ್ನೂ ಹೆಚ್ಚಿನ ಸೇವೆ ಸಲ್ಲಿಸುವ ಅವ...ನ್ನೂ ನಾವು ಕಳೆದುಕೊಳ್ಳುತ್ತಿದ್ದೇವೆ ... ಚಿಂತೆಯೊಂದೇ ನಮ್ಮನ್ನೀಗ ಕಾಡು... ನಮ್ಮಲ್ಲಿ ಮತ್ತೆ ಜೀವ ಚಿಗುರುವುದು ...ಾಗುತ್ತಿದ್ದರೆ ನಾವು ತಿರುಗಿ ಜನರಸಲು ...ಪ್ರಾಣಾರ್ಪಣೆ ಮಾಡುತ್ತಿದ್ದೇವು.

- ಚಿರಕುಂಡನ್



"ಒಂದೆ ದೇಶಕ್ಕಾಗಿ, ಜನತೆಗಾಗಿ ಬಲಿದಾನ ನೀಡಿದ್ದ ಹುತಾತ್ಮರಿಂದ ಬಹಳ ಸ್ಫೂರ್ತಿ ಪಡೆದಿದ್ದೇವೆ. ಒಂದು ದಿನ ನಾವು ಸಹ ಅವರ ಸಾಲಿಗೆ ಸೇರುತ್ತೇವೆಂದು ನಾವು ಕನಸಿನಲ್ಲೂ ಎಣಿಸಿರಲಿಲ್ಲ. ನಾವು ಏನೂ ಅಳುಕಿಲ್ಲದೆ ನೇಣುಗಂಬ ಏರುತ್ತೇವೆಂದು ನಮ್ಮ ಸಂಗಾತಿಗಳಿಗೆ ಹೇಳಿ. ನನ್ನ ತಾಯಿ ಇಳಿವಯಸ್ಸಿನವಳು. ಆಕೆಯನ್ನು ಸಾಂತ್ವನಗೊಳಿಸಿ, ನನ್ನ ತಮ್ಮಂದಿರು ಇನ್ನೂ ಚಿಕ್ಕವರು. ಪಕ್ಷದ ಕೆಲಸಗಳಿಗಾಗಿ ಅವರಿಗೆ ಶಿಕ್ಷಣ ನೀಡಿ. ನಾನು ಮನೆಯಲ್ಲಿ ದೊಡ್ಡ ಮಗ, ನನ್ನ ಮನೆಯವರನ್ನು ನೋಡಿಕೊಳ್ಳಲು ಪಕ್ಷವಲ್ಲದೆ ಬೇರೆ ಯಾರೂ ಇಲ್ಲ,"

- ಅಬುಬಕರ್

...ಮಾಡಿದ್ದೇವೆ.
...ಗೋ, ಸ್ವಯಂಸೇವಕರು ಕೆಂಪು ಗುಲಾಬಿ ...ದ್ದಾರೆ. ಬನ್ನಿ ತೆಗೆದುಕೊಳ್ಳೋಣ.
... ಚೆಂಗುಲಾಬಿ ಅಳಿದ ಹುತಾತ್ಮರ ನೆನ...ಣೆ....
...ಯ ಮೇಲೆ ರಕ್ತಾಕ್ಷರಗಳಲ್ಲಿ ಕೊರೆದಿರು...ದಿದಿರಾ?
...ದುಕನ್ನು ಪ್ರೀತಿಸಿದ ಈ ಬಾಂಧವರು ...ಬದುಕಿಗೋಸ್ಕರ ದುಡಿದವರು, ಮಡಿ-

...ಗಲಿದ ಸೋದರರೇ! ಇಗೋ ನಮ್ಮ ...ಂದನೆ! ಇಗೋ ನಮ್ಮ ರಕ್ತ ನಮಸ್ಕಾರ!
...ಮ್ಮ ಕನಸೆಲ್ಲ ನನಸಾಗಿಲ್ಲ ಎಂದು ನಾವು ... ನಮ್ಮ ನಾಡೇನೋ ಸ್ವತಂತ್ರವಾ... ಆದರೆ ಇದಿನ್ನೂ ಸಮತೆಯ ಸೋದರ ...ಶಾಂತಿಯ ಬೀಡಾಗಿಲ್ಲ. ಕಲ್ಲುಮು... ನಡೆದು ಒಂದು ಘಟ್ಟವನ್ನೀಗ ನಾವು ...ವೆ. ಇಲ್ಲಿಂದ ಇನ್ನೊಂದು ಘಟ್ಟಕ್ಕೆ ಇನ್ನು ... ಅದನ್ನು ಯಶಸ್ವಿಯಾಗಿಯೆ ಮುಗಿಸಿ... ವಿಷಯದಲ್ಲಿ ನಮಗೆ ಸಂದೇಹವಿಲ್ಲ. ...ರಪರಂಪರೆಯುಳ್ಳ, ನಿರ್ಮಲ ಚಾರಿತ್ರ್ಯ... ಜನತೆಗೆ ಆ ಶಕ್ತಿಯಿದೆ, ಹೇರಳವಾಗಿ ಇದೆ.

ಭಾಷಣ.....

ಈ ನಾಡಿನ ವೃದ್ಧ ರೈತನಾಯಕ ಮಾತನಾಡುತ್ತಿದ್ದಾರೆ:

"ದೇಶಬಾಂಧವರೇ! ಆ ವೀರ ಬದುಕಿನ ಅಮರ ಸಂದೇಶಕ್ಕಿಂತ ಹೆಚ್ಚಿನ ಯಾವ ಮಾತನ್ನು ತಾನೇ ನಾನು ಆಡಬಲ್ಲೆ? ಅವರ ಕನಸನ್ನು ಪೂರ್ತಿಯಾಗಿ ನನಸುಗೊಳಿಸುವ ಭಾರ ನಿಮ್ಮದು. ನಿಮ್ಮ ಸ್ಮೃತಿಪಟಲದಲ್ಲಿ ಕಯ್ಯೂರು ವೀರರ ಸ್ಮರಣೆ ಚಿರಕಾಲ ಹಸುರಾಗಿರಲಿ! ಬದುಕಿನ ಹಾದಿಯಲ್ಲಿ ಮುಂದಕ್ಕೆ ಸಾಗುವ ನಿಮಗೆಲ್ಲ ಆ ಸ್ಮರಣೆ ತಿಳಿವು ನೀಡುವ ಬೆಳಕಾಗಲಿ!"

ಕನ್ನಡನಾಡಿನ ಓ ಬಾಂಧವ! ಬನ್ನಿ! ಜನ ಜಯಘೋಷ ಮಾಡುತ್ತಿದ್ದಾರೆ. ನಾವೂ ಸ್ವರ ಸೇರಿಸೋಣ:

"ಕಯ್ಯೂರು ಹುತಾತ್ಮರ ವೀರಸ್ಮರಣೆ
- ರಕ್ತ ನಮಸ್ಕಾರ"
"ಕಯ್ಯೂರು ವೀರಯೋಧರ ಚಿರಸ್ಮರಣೆ
-ರಕ್ತ ನಮಸ್ಕಾರ!"

ಬಡವರ ಕೂಳೂ ರಫ್ತು

ವಿದೇಶೀ ವಿನಿಮಯ ಸಮಸ್ಯೆಯನ್ನು ಪರಿಹರಿಸಲಾರದ ಕೇಂದ್ರ ಸರ್ಕಾರ ಈಗ ಕೃಷಿ ಕ್ಷೇತ್ರಕ್ಕೆ ಗಂಟು ಬಿದ್ದಿದೆ. ಬರಲಿರುವ ಹೊಸ ಆಮದು ರಫ್ತು ನೀತಿ ದೇಶದ ಒಟ್ಟು ರಫ್ತಿನಲ್ಲಿ ಕೃಷಿ ಉತ್ಪನ್ನಗಳ ರಫ್ತನ್ನು ಈಗಿನ ಶೇ. 15 ರಿಂದ 25 ಕ್ಕೆ ಏರಿಸುವ ಪ್ರಸ್ತಾವ ಮಾಡಲಿದೆ.

"ಅಂದ್ರೆ ಒಳ್ಳೆಯದೇ ಆಯ್ತಲ್ರೀ" ಎನ್ನಬಹುದು ನೀವು ಆದರೆ ನಿಜಕ್ಕೂ ಒಳ್ಳೆಯದಾಗುತ್ತಾ?

ಒಳ್ಳೆಯದಾಗೋದು ನಿಜ. ಯಾರಿಗೆ? ರಫ್ತು ಗುಣಮಟ್ಟದ ಬೆಳೆ ಬೆಳೆವ ಜಮೀನ್ದಾರಿ ಕುಳಗಳಿಗೆ.

ಸಾಮಾನ್ಯವಾಗಿ ರೈತ ಕುಟುಂಬದ ರೀತಿ ನೀತಿ ಏನು? ಬೆಳೆದ ಕಾಳು ಕಡಿಯಲ್ಲಿ ಕುಟುಂಬಕ್ಕೆ ಬೇಕಾದಷ್ಟನ್ನು ಉಳಿಸಿಕೊಂಡು ಉಳಿದವನ್ನು ಮಾರಿ ಬಟ್ಟೆ ಬರೆ ಇತ್ಯಾದಿಗಳಿಗೆ ಖರ್ಚು ಮಾಡುವುದು ಅಲ್ಲವೇ?


ಸರ್ಕಾರ ಮಾಡುತ್ತಿರೋದು ಇದನ್ನಲ್ಲ. ನಮಗೆ ಬೇಕಾಗುವಷ್ಟನ್ನು ನಮ್ಮ ದೇಶದಲ್ಲಿ ನಾವು ಬೆಳೆಯುತ್ತಿಲ್ಲ. ಬೆಳೆದದ್ದನ್ನು ಎಲ್ಲರಿಗೆ ಹಂಚೋದಕ್ಕೋ ಆಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರಫ್ತು ರಫ್ತು ಎಂದರೆ ನಮ್ಮ ದೇಶದ ಜನ (ಬಡಜನ) ಉಪವಾಸವಿರಬೇಕು ಎಂದು.

ಬರಲಿವೆ ಅಂತಹ ದಿನ. "ಈಗ ಹೇಳ್ರಿ ಅಂತಹ ದಿನ ಬಂದರೆ ಒಳ್ಳೆಯದೇ ಆಯ್ತೇನ್ರಿ"?

ಮುಖ ನೋಡಿ ಮಣೆ ಹಾಕುವ ಬಜೆಟ್‌ನ ಶ್ರೀಮಂತಿಕೆ

ಬಜೆಟ್ ಮಂಡಿಸಿದ ಮನಮೋಹನರು ಸಾಬೂನು ಇತ್ಯಾದಿ ಶೌಚ ಸಾಮಾನುಗಳು ಮತ್ತು ಶೃಂಗಾರ ಸಾಮಗ್ರಿಗಳ ಮೇಲಿನ ಅಬ್ಕಾರಿ ಸುಂಕ ಕಡಿಮೆ ಮಾಡಿದ್ದೇವೆ ಎಂದರು. ಇದು ಕಡಿಮೆಯಾಗಿರುವುದೂ ಹೌದು. ಆದರೆ ಯಾವ ರೀತಿ?

ಶ್ರೀಮಂತರು ಬಳಸುವ ಶೃಂಗಾರ ಸಾಮಗ್ರಿಗಳ ಮೇಲಿನ ಅಬ್ಕಾರಿ ಸುಂಕ ಬಹಳ ಕಡಿಮೆಯಾಗಿ ಅವುಗಳ ಮೇಲೆ ಬೆಲೆ ಇಳಿದಿದೆ. ಆದರೆ ಸಾಬೂನಿನಂತಹ ಜನಸಾಮಾನ್ಯರು ಉಪಯೋಗಿಸುವ ವಸ್ತುಗಳ ಮೇಲಿನ ಸುಂಕ ಸ್ವಲ್ಪ ಕಡಿಮೆಯಾಗಿ ಅವುಗಳ ಬೆಲೆ ಸ್ವಲ್ಪೇ ಇಳಿದಿದೆ. ನೀವು ಎಷ್ಟು ಶ್ರೀಮಂತರೆಂಬುದರ ಮೇಲೆ ನಿಮಗೆ ಸಿಗುವ ಬಜೆಟ್ ಲಾಭ ಅವಲಂಬಿಸಿರುತ್ತದೆ ಎಂತಹ ಶ್ರೀಮಂತ ಬಜೆಟ್ ಅಲ್ಲವೇ?



ಬರಲಿದೆ ಸೌರಗ್ರಾಮ

ಇನ್ನೊಂದು ತಿಂಗಳಲ್ಲಿ ಹಿಂದುಳಿದ ಗ್ರಾಮವಾದ ಕಲ್ಯಾಣಪುರ (ಉತ್ತರಪ್ರದೇಶದ ಅಲಿಘಡ ಜಿಲ್ಲೆಯಲ್ಲಿದೆ) ಸೌರಗ್ರಾಮವಾಗಲಿದೆ ಎಂದು ಕೇಂದ್ರ ಸರ್ಕಾರ ಪ್ರಕಟಿಸಿದೆ.

ಅಸಂಪ್ರದಾಯಿಕ ಶಕ್ತಿ ಮೂಲಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವುದು ಖಂಡಿತವಾಗಿಯೂ ಒಳ್ಳೆಯ ಯೋಜನೆಯೇ. ಐ.ಎಂ.ಎಫ್ ವಿಶ್ವಬ್ಯಾಂಕುಗಳು ಒತ್ತಾಯದಿಂದ ಹೇರುತ್ತಿರುವ ಈ ಯೋಜನೆಗಳಿಗೆ ದೊಡ್ಡ ಮಿತಿಯಿದೆ.

ನಮ್ಮ ವಿದ್ಯುತ್ತಿನ ಅವಶ್ಯಕತೆ ಅಗಾಧವಾದುದು. ಈ ಪ್ರಯತ್ನಗಳು ಪ್ರಯಾಣಕ್ಕೆ ಹಡಗು ಬೇಕಾದಾಗ ಕಾಗದದ ದೋಣಿ ಬಿಟ್ಟಂತೆ.

ವಿದೇಶಿಯರಿಗೆ ದಂಬಾಲು ಬಿದ್ದಿರುವ ಸರ್ಕಾರ

ವಿದ್ಯುತ್ ಕ್ಷೇತ್ರವನ್ನು ಖಾಸಗಿಯವರಿಗೆ ತೆರೆದ ಸರ್ಕಾರ ಈಗ ಯಾರು ಹಣ ಹೂಡಲು ಮುಂದೆ ಬಾರದ್ದನ್ನು ಕಂಡು ರಾಜ್ಯ ವಿದ್ಯುತ್ ನಿಗಮಗಳ ಮೂಲಕ ವಿದ್ಯುತ್ತನ್ನು ಖರೀದಿಸುವ ಭರವಸೆ ಸಹ ನೀಡುತ್ತಿದೆ.

ವಿದೇಶೀಯರ ಮುಂದೆ ಡೊಗ್ಗು ಸಲಾಮು ಹೊಡೆಯುತ್ತಿರುವ ಸರ್ಕಾರವನ್ನು ಸತಾಯಿಸದೇ ಬಿಟ್ಟಾರೆಯೇ ಈ ಲಾಭಕೋರ ವಿದೇಶೀ ಬಂಡವಾಳಿಗರು?

ಮುಂಬಯಿ, ರವ್ವಾ ತೈಲಕ್ಷೇತ್ರಗಳಿಗೆ ಬಹುರಾಷ್ಟ್ರೀಯ ಕಂಪನಿಗಳ ಲಗ್ಗೆ

ತೈಲ ಕ್ಷೇತ್ರವನ್ನು ಖಾಸಗಿಯವರಿಗೆ ಮತ್ತು ವಿದೇಶಿಯರಿಗೆ ತೆರೆದ ನಂತರ ಈ ಬೆಳವಣಿಗೆ ಈಗಾಗಲೇ ಒಳ್ಳೆಯ ಫಲವತ್ತಾದ ತೈಲ ಕ್ಷೇತ್ರಗಳಾದ ಮುಂಬಯಿ, ಮತ್ತೂ ಕೃಷ್ಣಾ ಗೋದಾವರಿ ರವ್ವಾ ತೈಲಕ್ಷೇತ್ರಗಳಿಗೆ ಬಹುರಾಷ್ಟ್ರೀಯ ಕಂಪನಿಗಳು ಮುಗಿ ಬಿದ್ದಿವೆ.

ಸರ್ಕಾರಿ ಕ್ಷೇತ್ರದ ತೈಲ ಅಭಿವೃದ್ಧಿ ನಿಗಮ ಮತ್ತು ತೈಲ ಮತ್ತು ನೈಸರ್ಗಿಕ ಅನಿಲ ನಿಗಮಗಳು ಕಂಡು ಹಿಡಿದ ಅಭಿವೃದ್ಧಿಪಡಿಸಿದ ಕ್ಷೇತ್ರಗಳು ಈಗ ವಿದೇಶೀ ಬಹುರಾಷ್ಟ್ರೀಯ ಕಂಪನಿಗಳ ಮಡಿಲು ಸೇರಲಿದೆ.

ಜಾಗತಿಕವಾಗಿ ತೈಲಕ್ಕೆ ಬಹಳ ದೊಡ್ಡ ಆರ್ಥಿಕ ಮಹತ್ವವಿರುವಾಗ ಭಾರತ ಈ ಕ್ಷೇತ್ರದಲ್ಲಿ ಸ್ವಾವಲಂಬನೆ ಸಾಧಿಸುವುದು ಸಾಧ್ಯವಾಗಿಲ್ಲದೇ ಇರುವಾಗ ಇಂತಹ ಮಾರಾಟ ಭಾರತವನ್ನು ಆರ್ಥಿಕವಾಗಿ ನಲುಗಿಸಿದೆ.

ನಮ್ಮ ಈ ತೈಲ ಸಂಪತ್ತನ್ನು ವಿದೇಶಿ ಕಂಪನಿಗಳು ಕೊಳ್ಳೆ ಹೊಡೆಯಲಿದೆ. ಈ ಕಂಪನಿಗಳು "ಕೆರೆಯ ನೀರನು ಕೆರೆಗೆ ಚೆಲ್ಲಿ" ದುಡ್ಡು ಮಾಡಲಿದ್ದಾರೆ.

ಶೇರು ಹಗರಣ

ಶೇರು ಹಗರಣವೆಂದರೆ ವಿದೇಶೀ ಬ್ಯಾಂಕುಗಳು ಎಂಬಂತಾಗಿಬಿಟ್ಟಿದೆ. ಸ್ಟಾನ್‌ಚಾರ್ಟ್ ಬ್ಯಾಂಕ್‌ನ ಹಿಂದಿನ ಭಾರತದ ಮುಖ್ಯಸ್ಥ ನ್ಯಾಟ್ ಮತ್ತು ಆ ಬ್ಯಾಂಕ್‌ನ ಮುಖ್ಯ ನಿರ್ವಾಹಕ ಕಣ್ಣನ್ ಜಂಟಿ ಪಾರ್ಲಿಮೆಂಟರಿ ಸಮಿತಿಯ ಸಾಕ್ಷ್ಯ ನೀಡಿದ್ದಾರೆ.

ಇಬ್ಬರು ಸೆಕ್ಯೂರಿಟಿಗಳ ವ್ಯವಹಾರ ಮತ್ತು ಅದರಲ್ಲಿನ ನಿಯಮಗಳ ಉಲ್ಲಂಘನೆ ತಮ್ಮ ಗಮನಕ್ಕೆ ಬರಲಿಲ್ಲವೆಂದಿದ್ದಾರೆ. ಅದೇ ಬ್ಯಾಂಕ್‌ನ ವ್ಯಾಪಾರೀ ಬ್ಯಾಂಕಿಂಗ್ ವಿಭಾಗದ ಪ್ರಕಾಶ್ ಮಾರ್ಡೇ ನೀಡಿದ್ದ ವರದಿಯ ಬಗೆಗೆ ಅವರಿಗೆ ಗೊತ್ತಿರಲಿಲ್ಲವೆಂತೆ!!

ಆದರೆ ಅವರಿಗೆ ಈ ಕೆಳಗಿನವು ಗೊತ್ತಿದ್ದುವಂತೆ ಕಣ್ಣನ್ ಮಹಾಶಯರಿಗೆ ಭಾರತದ ಮಾಜಿ ಅಟಾರ್ನಿ ಜನರಲ್ ಜಿ. ರಾಮಸ್ವಾಮಿಯವರ ಪರಿಚಯವಿತ್ತಂತೆ.

3. ನ್ಯಾಟರಿಗೆ ಹರ್ಷದ್ ಮೆಹ್ತ ಹಿತೇನ್‌ದಲಾಲ್ ಅಥವಾ ಭೂಪೇನ್ ಪರಿಚಯವಿರಲಿಲ್ಲವಂತೆ. ಆದರೆ ಅವರ ಪತಿ ಸೆಕ್ಯೂರಿಟಿಯ ಮಾರಾಟದ ಹಣವನ್ನು (10 ಲಕ್ಷಗಳಿಗೂ ಮೀರಿ) ಹಿತೇನ್ ದಲಾಲ್ ಚೆಕ್ಕುಗಳ ಮೂಲಕ ಪಡೆದಿರುವುದು ನಿಜವಂತೆ.

ಹಗರಣದಲ್ಲಿ ಅವರ ಪಾತ್ರವೊಂದನ್ನು ಹೊರತುಪಡಿಸಿ ಉಳಿದವೆಲ್ಲ ನಿಜ ಎನ್ನುತ್ತಿದ್ದಾರೆಯೇ ಇವರು?

ಕಾರ್ಮಿಕರನ್ನು ಹೊರದಬ್ಬುವುದೇ ನಮ್ಮ ಉದ್ಯೋಗ ನೀತಿ!

-- ಕೇಂದ್ರ ಕಾರ್ಮಿಕ ಮಂತ್ರಿ ಸಂಗ್ಮಾ

ಕೊನೆಗೂ ಭಾರತ ಸರಕಾರ ಕಾರ್ಮಿಕರನ್ನು ಬೀದಿಗೆಸೆಯುವ 'ಎಕ್ಸಿಟ್ ಪಾಲಿಸಿ' (ನಿರ್ಗಮನ ನೀತಿ) ಯನ್ನು ಅಂಗೀಕರಿಸುವ ಮೋಸದ ಪ್ರಯತ್ನ ನಡೆಸಿದೆ. ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿಗಳು ಇದುವರೆಗೆ ಕಾರ್ಮಿಕ ಸಂಘಗಳ ಪ್ರತಿರೋಧದಿಂದಾಗಿ ಕಾರ್ಮಿಕ ನೀತಿಗಳಲ್ಲಿ ಪ್ರತಿಫಲಿಸಲಿಲ್ಲ. ಈಗ ಅವೆಲ್ಲಾ ಪೂರ್ಣವಾಗಿ ಪ್ರತಿಫಲಿಸಲಾರಂಭಿಸುತ್ತದೆ. ಸರಕಾರದ ಆರ್ಥಿಕ ಯೋಜನೆಗಳ ಪೂರ್ಣ ಹೊರೆ ಕಾರ್ಮಿಕರ ಮೇಲೆ ಬೀಳಲಿದೆ. ಈಗ ಐ.ಎಂ.ಎಫ್.- ವಿಶ್ವಬ್ಯಾಂಕ್‌ನ ಶರತ್ತುಗಳೆಲ್ಲಾ ನರಸಿಂಹರಾವ್ ಸರಕಾರದ ಆರ್ಥಿಕ ಹಾಗೂ ಕಾರ್ಮಿಕ ನೀತಿಗಳಾಗಿ ಬಿಟ್ಟಿವೆ.

ಈಗ ದುಷ್ಟ 'ನಿರ್ಗಮನ ನೀತಿ'ಯನ್ನು ಘೋಷಿಸಿದ್ದು ಎಂತಹ ಮೋಸತನದಿಂದ! ನವದೆಹಲಿಯಲ್ಲಿ ಮಾರ್ಚ್ 16 ರಂದು ನಡೆದ "ಉಚ್ಚ ಆಡಳಿತ ಮಂಡಳಿಯ ದೃಷ್ಟಿಕೋಣ" ಎಂಬ ವಿಚಾರ ಸಂಕಿರಣದಲ್ಲಿ ಕಾರ್ಮಿಕ ಮಂತ್ರಿಗಳು 'ಎಕ್ಸಿಟ್‌ನೀತಿ'ಯ ಘೋಷಣೆಯನ್ನು ವಿದ್ಯುಕ್ತವಾಗಿ ಮಾಡಿದರು. ಈ ವಿಚಾರ ಸಂಕಿರಣವನ್ನು 'ಭಾರತೀಯ ಉದ್ದಿಮೆಗಳ ಒಕ್ಕೂಟ' ಅಂದರೆ ದೊಡ್ಡ ಉದ್ಯಮಿಗಳ ಸಂಘ ಏರ್ಪಡಿಸಿತ್ತು. ಇತ್ತೀಚಿನವರೆಗೂ ಭಾರತ ಸರಕಾರದ ವಕ್ತಾರರು 'ಎಕ್ಸಿಟ್‌ನೀತಿ' ತ...ಾಗುತ್ತಿದೆ ಎಂಬುದು ಸುಳ್ಳು ಎಂದೇ ಹೇಳುತ್ತಿದ್ದರು.

ಎಲ್ಲಾ ಕಾರ್ಮಿಕ ಸಂಘಗಳು ಬಲವಾಗಿ ವಿರೋಧಿಸಿದರೂ ಕಾರ್ಮಿಕ ಮಂತ್ರಿಗಳು ತಮ್ಮ ಸರಕಾರ 'ಎಕ್ಸಿಟ್ ಪಾಲಿಸಿ' ಯನ್ನು ರೂಪಿಸಿದೆ ಎಂದು ದೊಡ್ಡ ಬಂಡವಾಳಶಾಹೀ ಮಾಲಿಕರನ್ನು ಖುಶಿಗೊಳಿಸಲು ಸಾರಿದರು!

ಕಾರ್ಮಿಕ ಮಂತ್ರಿಗಳು ಒಂದೇ ವೇಳೆಗೆ ಎರಡು ದನಿಯಲ್ಲಿ ಮಾತನಾಡುವ ಗೋಸುಂಬೆತನ ಪ್ರದರ್ಶಿಸಿದರು. ಒಂದು ಕಡೆ ಎಕ್ಸಿಟ್ ಪಾಲಿಸಿ ಉದ್ಯೋಗವಕಾಶ ನಿರ್ಮಿಸುವತ್ತ ಗಮನ ಕೇಂದ್ರೀಕರಿಸುತ್ತದೆ ಎಂದರೆ ಅದೇ ಉಸಿರಿನಲ್ಲಿ ಮತ್ತೊಮ್ಮೆ ಹೇಳುತ್ತಾರೆ ಉದ್ದಿಮೆಗಳನ್ನು ಮುಚ್ಚಿ, ಕಾರ್ಮಿಕರನ್ನು ತೆಗೆದುಹಾಕಿ "ಅನುತ್ಪಾದಕ ಹಾಗೂ ತಪ್ಪಿತಸ್ಥ ನೌಕರರನ್ನು ತೆಗೆಯುವ" ಹಕ್ಕು ಮಾಲಿಕರಿಗೆ ಎಂದು! ಅಂದರೆ ಮಾಲಕರು ಹೇಳಿದ ಹಾಗೆ ಕೇಳಿಕೊಂಡು ಉತ್ಪಾದನೆ ಮಾಡಲು ಸಿದ್ಧರಿಲ್ಲದ ಕಾರ್ಮಿಕರನ್ನೆಲ್ಲಾ ಬೀದಿಗೆಸೆಯಲಾಗುವುದು!

ಇತ್ತೀಚೆಗೆ ನಡೆದ ಭಾರತೀಯ ಕಾರ್ಮಿಕ ಸಮ್ಮೇಳನದಲ್ಲಿ ಎಲ್ಲಾ ಕಾರ್ಮಿಕ ಸಂಘಗಳು ಎಕ್ಸಿಟ್‌ಪಾಲಿಸಿ ಹಾಗೂ ರಾಷ್ಟ್ರೀಯ ನವೀಕರಣ ನಿಧಿಯನ್ನು ವಿರೋಧಿಸಿ ಒಂದು ಉದ್ಯೋಗ ನೀತಿ' ರ... ಎಂದು ಸರಕಾರವನ್ನು ಒತ್ತಾಯಿಸಿದ್ದರು. ಆದರೆ ಮಾಲಕರ ಸಭೆಯಲ್ಲಿ ಎಕ್ಸಿಟ್ ಪಾಲಿಸಿಯೇ ಸರಕಾರದ ಉದ್ಯೋಗ ನೀತಿ ಎಂದು ಮುಖ...ತ್ತಾ ನಿರುದ್ಯೋಗಿಗಳನ್ನು ಗೇಲಿ ಮಾಡುತ್ತಿದ್ದಾರೆ ನರಸಿಂಹರಾವ್ ಸರಕಾರದ ಕಾರ್ಮಿಕ ಮೂರ್ತಿಗಳು.

ಕಾರ್ಮಿಕರು ಮಾಲಕರ ಮರ್ಜಿಯಂತೆ ದುಡಿಯದಿದ್ದರೆ ಅವರನ್ನು ಬೀದಿಗೆಸೆಯುವ ಹಕ್ಕು ಮಾಲಕರಿಗಿದೆ ಆದರೆ ಮಾಲಿಕರಿಗೆ ಯಾವುದೇ ಬಾಧ್ಯತೆಗಳಿಲ್ಲ ಅವರ ವರ್ತನೆಗೆ ಕಡಿವಾಣ ಹಾಕಲು ಯಾವುದೇ ಶಾಸನ ಬೇಡ. ಐ.ಎಂ.ಎಫ್.-ವಿಶ್ವಬ್ಯಾಂಕ್ ಹೇಳಿದಂತೆ ಕೇಳುವ ಕಾಡಿನ ಶಾಸ ಮಾತ್ರ ಮಾಲಕರದ್ದೇ ದರ್ಬಾರು. ಕಾರ್ಮಿಕರನ್ನು "ಶಿಸ್ತಿಗೊಳಪಡಿಸುವ", ಅವರ ತಮ್ಮ ಹಕ್ಕುಗಳನ್ನು ಕೇಳದಂತೆ ಮಾಡುವುದೇ ಸರಕಾರದ ಕೆಲಸ.

ಆದರೆ ಎಕ್ಸಿಟ್ ನೀತಿಯ ಸರ್ವಾಧಿಕಾರಿ ಸ್ವರೂಪವನ್ನು ಕಾರ್ಮಿಕವರ್ಗ ಖಂಡಿಸುತ್ತದೆ ಎಂದು ತೀಕ್ಷ್ಣವಾಗಿ ಹೇಳಿರುವ ಸಿ.ಐ.ಟಿ.ಯು ಎಲ್ಲಾ ಕಾರ್ಮಿಕ ಸಂಘಗಳು, ಕಾರ್ಮಿಕ ವರ್ಗ ಐ.ಎಂ.ಎಫ್.-ವಿಶ್ವಬ್ಯಾಂಕ್ ನಿರ್ದೇಶಿತ ದುಷ್ಟ ಆಟ ಸಾಗದಂತೆ ಮಾಡಲು ಐಕ್ಯ ಹೋರಾಟ ನಡೆಸಬೇಕು ಎಂದು ಕರೆ ನೀಡಿವೆ.

ವಿಮಾ ಕಂಪನಿಗಳಲ್ಲಿರುವ ಜನತೆಯ ಹಣ ಯಾರಿಗಾಗಿ?

ಜನರ ಆರೋಗ್ಯ ರಕ್ಷಣೆಗಾಗಿಯೋ ಬಂಡವಾಳಶಾಹಿಗಳ ದುರುಪಯೋಗಕ್ಕಾಗಿಯೋ?

ನರಸಿಂಹರಾವ್ ಸರಕಾರದ 'ಖಾಸಗೀಕರಣ'ದ ಮಂತ್ರ ವಾಸ್ತವವಾಗಿ ಬಹುಪಾಲು ಜನಗಳ ಅಭಿವೃದ್ಧಿಯ ಯೋಚನೆ ಬಿಟ್ಟು, ಕೆಲವೇ ಖಾಸಗೀ ಮಾಲಕರ ಹಿತಾಸಾಧನೆಯ ಯೋಚನೆ ಮಾಡುವ ದುಷ್ಟತನದ ದ್ಯೋತಕ ಎಂಬುದಕ್ಕೆ ವಿಮಾ ಉದ್ದಿಮೆ ಒಂದು ಜ್ವಲಂತ ಉದಾಹರಣೆ. ಮಾರ್ಚ್ 29 ರಂದು 12 ಲಕ್ಷ ಬ್ಯಾಂಕ್- ವಿಮಾ ನೌಕರರ, ಅಧಿಕಾರಿಗಳ ಬೃಹತ್ ಮುಷ್ಕರ ಕಾರ್ಯಾಚರಣೆಯ ಒಂದು ಉದ್ದೇಶ ಈ 'ಖಾಸಗೀಕರಣ'ದ ದುಷ್ಟತನದತ್ತ ಜನರ ಗಮನ ಸೆಳೆಯುವುದು. ಬ್ಯಾಂಕ್ ರಂಗದ ನಂತರ ಇದೀಗ ವಿಮಾ ರಂಗದ ಖಾಸಗೀಕರಣದ ಮಾತಿನ ಹಿಂದಿರುವ ಗುಲಾಮ ಬುದ್ಧಿಯನ್ನು ಬಿಚ್ಚಿಟ್ಟಿರುವ ವಿಮಾ ನೌಕರರ ಆಂದೋಲನದ ಮುಖಂಡ ಸರೋಜ್ ಚೌಧುರಿಯವರ ಲೇಖನದ ಕೆಲವು ಅಂಶಗಳು.

1956ರಲ್ಲಿ ಮುಂದ್ರಾ ಹಗರಣದಲ್ಲಿ ವಿಮಾ ಉದ್ದಿಮೆಯಲ್ಲಿ ಖಾಸಗಿಯವರ ಹೊಲಸು ವ್ಯವಹಾರಗಳು ಬಯಲಿಗೆ ಬಂದ ಹಿನ್ನೆಲೆಯಲ್ಲಿ ರಾಷ್ಟ್ರೀಕರಣಗೊಳಿಸಿದ ವಿಮಾ ಉದ್ದಿಮೆಯನ್ನು 1993 ರಲ್ಲಿ ಶೇರು ಹಗರಣದಲ್ಲಿ ಖಾಸಗಿಯವರ, ವಿದೇಶೀಯವರ ಹೊಲಸು ವ್ಯವಹಾರಗಳು ಬಯಲಾಗುತ್ತಿರುವ ಹಿನ್ನಲೆಯಲ್ಲಿಯೇ ಮತ್ತೆ ಖಾಸಗಿಯವರಿಗೆ, ಮುಖ್ಯವಾಗಿ ಮನಮೋಹನ ಸಿಂಗ್‌ರ ದರ್ಬಾರಿನಲ್ಲಿ ಲಾಭ ತರುತ್ತಿರುವ, ದೇಶ ಕೈಗಾರಿಕಾ ಮತ್ತು ಹಣಕಾಸು ರಂಗದಲ್ಲಿ ತನ್ನ ಕಾಲ ಮೇಲೆ ನಿಲ್ಲಲು ಆಧಾರ ಕೊಡುಗೆ ನೀಡಿದ ಸಾರ್ವಜನಿಕ ಉದ್ದಿಮೆಗಳನ್ನು ಒಂದೊಂದಾಗಿ ಮಾರುತ್ತಿರುವ ಮನಮೋಹನಸಿಂಗ್ ಈ ವರ್ಷದ ಬಜೆಟ್‌ನಲ್ಲಿ ವಿಮಾ ಉದ್ದಿಮೆಯ ಬಗ್ಗೆ ಒಂದು "ಉಚ್ಚಮಟ್ಟದ ಸಮಿತಿ" ನೇಮಿಸುವುದಾಗಿ ಘೋಷಿಸಿದ್ದಾರೆ. ಜನವರಿ 1956 ರಲ್ಲಿ ಜವಹರಲಾಲ್ ಸರಕಾರ ರಾಷ್ಟ್ರೀಕರಿಸಿದ ಜೀವವಿಮಾ ಉದ್ದಿಮೆಯನ್ನು ಹಾಗೂ ಮೇ 1972 ರಲ್ಲಿ ಇಂದಿರಾಗಾಂಧಿ ಸರಕಾರ ರಾಷ್ಟ್ರೀಕರಿಸಿದ ಸಾಮಾನ್ಯ ವಿಮಾ ಉದ್ದಿಮೆಯನ್ನು ಮತ್ತೆ ಖಾಸಗಿಯವರಿಗೆ ಕೊಡುವ ಕೆಲಸ ಆರಂಭಿಸಿದ್ದಾರೆ.

ಹಿಂದೆ ಈ ಉದ್ದಿಮೆಯನ್ನು ರಾಷ್ಟ್ರೀಕರಿಸಿದ್ದೇಕೆ? ಈಗ ಇದನ್ನು ಮತ್ತೆ ಖಾಸಗಿಯವರಿಗೆ ಕೊಡುತ್ತಿರುವುದೇಕೆ? ದೇಶದ ಪ್ರಗತಿಗೆ ಖಾಸಗೀ ಲಾಭದ ಬಂಡವಾಳಶಾಹಿಗಳಿಂದ ಏನು ಪ್ರಯೋಜನವಿಲ್ಲ, ಅಷ್ಟೇ ಅಲ್ಲ ಅವರ ಚಟುವಟಿಕೆಗಳು ದೇಶದ ಪ್ರಗತಿಗೆ ಮಾರಕ ಎಂದು ಆರಂಭದಿಂದಲೇ ತಿಳಿದ ಮೇಲೆ ರಾಷ್ಟ್ರೀಕರಣವೇ ಇದಕ್ಕೆ ಏಕೈಕ ಪರಿಹಾರ ಎಂದು ಮನಗಾಣಲಾಯಿತು. ಹಾಗಾದರೆ ಕಳೆದ ನಲವತ್ತು ವರ್ಷಗಳಲ್ಲಿ ನಮ್ಮ ಬಂಡವಾಳಶಾಹಿಗಳ ಮನಪರಿವರ್ತನೆಯಾಗಿದೆಯೇ? ಇಲ್ಲ. ಆಗ ರಾಷ್ಟ್ರೀಕರಣವೇ ಏಕೈಕ ಪರಿಹಾರ ಎಂದು ಮನಗಂಡ ರಾಜಕೀಯ ಪಕ್ಷದ ಉತ್ತರಾಧಿಕಾರಿಗಳು ಈಗ "ಖಾಸಗೀ ಲಾಭವೇ ದೇಶದ ಪ್ರಗತಿ" ಎಂದು ಜನಗಳನ್ನು ನಂಬಿಸಲು ಹೆಣಗುತ್ತಿದ್ದಾರೆ.

ರಾಷ್ಟ್ರೀಕರಿಸಿದ್ದೇಕೆ?

1956 ರ ಮೊದಲು ಸುಮಾರು 245 ಖಾಸಗೀ ವಿಮಾ ಕಂಪೆನಿಗಳಿದ್ದವು. ಟಾಟಾ, ಬಿರ್ಲಾಗಳು, ಸಿಂಘಾನಿಯಾಗಳು ಮತ್ತಿತರ ದೊಡ್ಡ ಬಂಡವಾಳಶಾಹಿಗಳ ಪ್ರತಿಯೊಂದು ಗುಂಪು ಕನಿಷ್ಟ ಒಂದು ಬ್ಯಾಂಕ್ ಹಾಗೂ ಒಂದು ವಿಮಾ ಕಂಪೆನಿಯ ಮೇಲೆ ಹತೋಟಿ ಪಡೆದಿತ್ತು. ಗ್ರಾಮಗಳತ್ತ ಕಣ್ಣೆತ್ತಿಯೂ ನೋಡದ ಇವು ಸಾರ್ವಜನಿಕರಿಂದ ಪಡೆದ ಹಣವನ್ನು ಆಯಾಯ ಬಂಡವಾಳಶಾಹಿಗಳ ವ್ಯವಹಾರಗಳಿಗೆ, ಶೇರು ಮಾರುಕಟ್ಟೆಯಲ್ಲಿ ಸಟ್ಟಾವ್ಯಾಪಾರಕ್ಕೆ ಬಳಕೆಯಾಗುತ್ತಿದ್ದವು. ಮೋಸದ ಲೆಕ್ಕ ಪತ್ರಗಳಿಂದ ವಿಮಾ ವ್ಯವಹಾರಗಳಿಂದ ಬಂದ ಲಾಭಗಳನ್ನು ಖಾಸಗೀ ಮಾಲಕರಿಗೆ ಜೇಬಿಗಿಳಿಸಿದರೆ, ನಷ್ಟಗಳನ್ನು ವಿಮಾ ಕಂಪೆನಿಯ ಲೆಕ್ಕಕ್ಕೆ ಹಾಕುತ್ತಿದ್ದರು. ವಿಮಾ ಪ್ರೀಮಿಯಂ ಮೂಲಕ ಸಂಗ್ರಹಿಸಿದ ಸಾರ್ವಜನಿಕರ ಉಳಿತಾಯದ ಲೂಟಿಯಾಗುತ್ತಿತ್ತು.

ಜೀವ ವಿಮಾ ಉದ್ದಿಮೆಯನ್ನು ರಾಷ್ಟ್ರೀಕರಿಸಿದಾಗ ನೆಹರೂ ಹೇಳಿದ ಮಾತನ್ನು ಅವರ ಹೆಸರು ಹೇಳಿ ಬದುಕುತ್ತಿರುವವರು ಮರೆತಿದ್ದಾರೆ. ಆದರೆ ನಾವು ಈಗ ಅದನ್ನು ನೆನಪಿಸಿಕೊಳ್ಳಬೇಕು.- "ಜೀವ ವಿಮಾ ಭಾರತ ಸರಕಾರದ ಪ್ರಮುಖ ಉದ್ದಿಮೆಗಳಲ್ಲಿ ಒಂದಾಗುತ್ತದೆ. ಅದರ ಉದ್ದೇಶ ವ್ಯಕ್ತಿಗಳ ಹಾಗೂ ಸರಕಾರದ ಸೇವೆ. ಕೇವಲ ಲಾಭ ಗಿಟ್ಟಿಸುವ ಗುರಿಯನ್ನು ಅದೀಗ ಕೈಬಿಡುತ್ತದೆ. ಸೇವೆ ಮಾಡುವ ಗುರಿಯೇ ಮುಖ್ಯವಾಗುತ್ತದೆ".

ಗುರಿಸಾಧಿಸಲಿಲ್ಲವೇ?

ಜೀವವಿಮಾ ಕಾರ್ಪೋರೇಷನ್ ಅಥವಾ ಎಲ್.ಐ.ಸಿ. ಈ ಗುರಿಯನ್ನು ಸಾಧಿಸಿಲ್ಲವೇ- ಖಾಸಗಿಯವರು ಈ ಗುರಿಯನ್ನು ಸಾಧಿಸಬಹುದೆಂದು ಮನಮೋಹನ ಸಿಂಗ್ ನಂಬಿದ್ದಾರೆಯೇ? ಸಾಮಾಜಿಕ ಅಭಿವೃದ್ಧಿಯಲ್ಲಿ ಎಲ್.ಐ.ಸಿ. ಕಳೆದ 36 ವರ್ಷಗಳಲ್ಲಿ ವಹಿಸಿದ ಪಾತ್ರದ ಬಗ್ಗೆ ಮನಮೋಹನ್‌ಸಿಂಗ್‌ರವರು ಚಕಾರ ಎತ್ತುವುದಿಲ್ಲ. ಏಕೆಂದರೆ ನಿಜಸಂಗತಿಯನ್ನು ಮಾರೆಮಾಡಲಾಗದಷ್ಟು ಸ್ಪಷ್ಟವಾಗಿ ಜನಗಳ ಮುಂದಿದೆ. ಕೇವಲ ನಗರಗಳಲ್ಲೇ ಕಾಣುತ್ತಿದ್ದ, ಗ್ರಾಮೀಣ ಭಾರತದತ್ತ ಕಣ್ಣೆತ್ತಿ ನೋಡಲು ಸಿದ್ಧರಿಲ್ಲದ ಖಾಸಗೀ ಮಾಲಕರ ವಿಮಾ ಕಂಪೆನಿಗಳು ಜನಗಳಿಗೆ ಅಗತ್ಯವಾದ ಕುಡಿಯುವ ನೀರು, ವಿದ್ಯುಚ್ಛಕ್ತಿ, ವಸತಿ ಯೋಜನೆಗಳಿಗೆ ಹಣ ತೊಡಗಿಸುತ್ತಾರೆ ಎಂದು ಯಾರು ತಾನೇ ನಿರೀಕ್ಷಿಸಲು ಸಾಧ್ಯ. ಆದರೆ ಭಾರತದ ಯಾವುದೇ ಮೂಲೆಗೆ ಹೋದರೂ ಅಲ್ಲಿ ಕುಡಿಯುವ ನೀರಿನ ಪೈಪುಗಳಿಲ್ಲಾದರೂ ನಿಮಗೆ ಕಂಡರೆ, ಚರಂಡಿಯ ವ್ಯವಸ್ಥೆಯ ಪೈಪುಗಳಿಲ್ಲಾದರೂ ನಿಮ್ಮ ಕಣ್ಣಿಗೆ ಬಿದ್ದರೆ ಅವು ಎಲ್.ಐ.ಸಿ. ನೆರವಿನಿಂದಲೇ ಆಗಿರುತ್ತದೆ.

1956ರ ಮೊದಲು ವಿದ್ಯುತ್, ನೀರು ಚರಂಡಿ ಮೇಲಿನ ವಸತಿ ಯೋಜನೆಗಳಲ್ಲಿ ವಿಮಾ ಉದ್ದಿಮೆಯ ಕೊಡುಗೆ ಸೊನ್ನೆ. 1967 ರಲ್ಲಿ ಇದು 67 ಕೋಟಿಗೂ ಮೀರಿತು. ಮಾರ್ಚ್ 31,1992 ರಲ್ಲಿ 3175 ಕೋಟಿ ರೂಗಳಿಗೇರಿತು.

ವಸತಿಯೋಜನೆಗಳಲ್ಲಿ 1967 ರಲ್ಲಿ 121 ಕೋಟಿ ರೂ. ತೊಡಗಿಸಿದ್ದಾರೆ. 1992 ರಲ್ಲಿ ಇದು 3,795 ಕೋಟಿ ರೂಗಳು. ನೀರು-ಚರಂಡಿ ವ್ಯವಸ್ಥೆಗಳಲ್ಲಿ 989 ಕೋಟಿ ರೂ.ಗಳು ಸಾರ್ವಜನಿಕ ಸಾರಿಗೆ ವಲಯದಲ್ಲಿ ಎಲ್.ಐ.ಸಿ. ಕೊಡಗಿಸಿದ ಹಣ 147 ಕೋಟಿ ರೂ. ಇತರ ಸಾರ್ವಜನಿಕ ಉದ್ದಿಮೆಗಳಲ್ಲಿ ತೊಡಗಿಸಿರುವ ಒಟ್ಟು ಹಣ 2541 ಕೋಟಿ ರೂ. ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಡಿಬೆಂಚರುಗಳಲ್ಲಿ 334 ಕೋಟಿ ರೂ ತೊಡಗಿಸಿದೆ.

ಏಕೆ ಈಗ ಪುನಾರಾಲೋಚನೆ?

ವಿಮಾ ಉದ್ದಿಮೆಯನ್ನು ಖಾಸಗಿಯವರಿಗೆ ತೆರೆದರೆ ಇವೆಲ್ಲಾ ಹೆಚ್ಚುತ್ತವೆಯೇ? ರಾಜ್ಯಗಳ ಕೈಗಾರಿಕಾ ಅಭಿವೃದ್ಧಿ, ಉತ್ತಮ ನೀರು ಪೂರೈಕೆ ವ್ಯವಸ್ಥೆ, ಚರಂಡಿ ವ್ಯವಸ್ಥೆ, ವಸತಿ ಯೋಜನೆ- ದೊಡ್ಡ ದೊಡ್ಡ ಮಾತುಗಳನ್ನಾಡುವ ಖಾಸಗೀ ಬಂಡವಾಳಶಾಹಿಗಳು ಈ ಯೋಜನೆಗಳಲ್ಲಿ ಎಂದಾದರೂ ಹಣ ತೊಡಗಿಸುವ ಯೋಚನೆಯನ್ನಾದರೂ ಮಾಡುತ್ತಾರೆಯೇ? ಒಂದು ವೇಳೆ ಹಣತೊಡಗಿಸಿದರೂ ಈ ಎಲ್ಲಾ ಸೌಲಭ್ಯಗಳಿಗೆ ನಾಗರಿಕರು ಹಲವು ಹತ್ತು ಪಟ್ಟು ಹೆಚ್ಚು ತೆರಬೇಕಾಗುತ್ತದೆ.

ಹಾಗಿದ್ದರೆ ಹಣಕಾಸು ಮಂತ್ರಿಗಳೇಕೆ ವಿಮಾ ಉದ್ದಿಮೆಯನ್ನು ಮಾರಲು ಕಾತುರರಾಗಿದ್ದಾರೆ? ಬೇರೆ ಸರ್ಕಾರಿ ಉದ್ದಿಮೆಗಳನ್ನು ಮಾರುವಾಗ ಅವರ ಸಮಜಾಯಿಷಿ- "ಸರ್ಕಾರ ಈ ಕೈಗಾರಿಕೆ ನಡೆಸುವ ಜವಾಬ್ದಾರಿಯಿಂದ ಮುಕ್ತವಾಗಿ ಜನಗಳ ಸಾಮಾಜಿಕ ಸೌಲಭ್ಯದತ್ತ ಹೆಚ್ಚು ಗಮನಿಸಲು ಹಣ, ಸಮಯ ಸಿಗುತ್ತದೆ" ಇದು ಅವರ ಪ್ರಾಮಾಣಿಕ ಮಾತಾಗಿದ್ದರೆ 1956ರಲ್ಲಿ ಕೇಂದ್ರ ಸರಕಾರ ತೊಡಗಿಸಿದ 5 ಕೋಟಿ ರೂಗಳಿಗೆ ಕಳೆದ 35 ವರ್ಷಗಳಲ್ಲಿ 700 ಕೋಟಿ ರೂ.ಗಳ ಲಾಭವನ್ನು ಸರಕಾರಕ್ಕೆ ದೊರಕಿಸಿಕೊಟ್ಟು ಆದಾಯ ತೆರಿಗೆ ಇತ್ಯಾದಿಗಳ ಮೂಲಕವೂ ಕೇಂದ್ರ ಸರಕಾರದ ಬೊಕ್ಕಸಕ್ಕೆ ಆದಾಯ ತಂದೂ ಸಾಮಾಜಿಕ ಸೌಲಭ್ಯಗಳಿಗೆ ಪ್ರತಿವರ್ಷ ಅಗಾಧ ಹಣ ಒದಗಿಸುತ್ತಿರುವ ವಿಮಾ ಉದ್ದಿಮೆಯನ್ನೇಕೆ ಅವರು ಖಾಸಗಿಯವರಿಗೆ ದಾನಮಾಡುತ್ತಿದ್ದಾರೆ?

ಐ.ಎಂ.ಎಫ್. ಗುಲಾಮ

ವಿಮಾ ಉದ್ದಿಮೆಯ ಬಗ್ಗೆ ಮನಮೋಹನ್‌ಸಿಂಗ್‌ರ ನಿಲುವು ಉದಾರೀಕರಣ, ಖಾಸಗೀಕರಣದ ಮೂಲಕ ಸರಕಾರ ಜನಗಳ ಸಾಮಾಜಿಕ, ಅಗತ್ಯಗಳತ್ತ ಹೆಚ್ಚು ಗಮನಹರಿಸುತ್ತಿದೆ ಎಂದು ನರಸಿಂಹರಾವ್ ಸರಕಾರ ಈಗ ಪದೇ ಪದೇ ಜನಗಳಿಗೆ ಹೇಳುತ್ತಿರುವುದು ಎಷ್ಟು ದೊಡ್ಡ ಮೋಸ ಎಂಬುದನ್ನು ಸಾಬೀತುಪಡಿಸುತ್ತದೆ.

ಎಲ್.ಐ.ಸಿ, ಜಿಐಸಿ (ಸಾಮಾನ್ಯ ವಿಮಾ ಕಾರ್ಪೊರೇಶನ್) ದೇಶದ ಅಭಿವೃದ್ಧಿಗೆ ನಿಜವಾದ ಕೊಡುಗೆ ನೀಡಿದೆಯೇ ಇಲ್ಲವೇ ಎಂಬುದು ನರಸಿಂಹರಾವ್ ಸರಕಾರದ ಮುಂದಿರುವ ಸಮಸ್ಯೆಯಲ್ಲ. **"ಪಾಲಿಸಿದಾರರ ಮತ್ತು ದೇಶದ ಹಿತಾಸಕ್ತಿ ಸಾಧಿಸಲು ಹಣ ತೊಡಗಿಸಬೇಕು"** ಎಂಬ ನೆಹರೂ ಕಾಲದ ನೀತಿಯನ್ನು ಬದಲಿಸಿ **"ಖಾಸಗೀ ಲಾಭದ ಹಿತಾಸಕ್ತಿ ಸಾಧಿಸಲು ಹಣ ತೊಡಗಿಸಬೇಕು"** ಎಂಬ ಐ.ಎಂ.ಎಫ್.- ವಿಶ್ವಬ್ಯಾಂಕ್ ನೀತಿಯನ್ನು ಪಾಲಿಸುವುದು ಹೇಗೆ ಎಂಬುದೇ ಈ ದುಷ್ಟ ಸರಕಾರ ಎದುರಿಸುವ ಪ್ರಶ್ನೆ.

ಆದ್ದರಿಂದಲೇ ವಿಮಾ ಉದ್ದಿಮೆಯ ಬಗ್ಗೆ "ಪರಿಶೀಲಿಸಿ" ಅದನ್ನು ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳಿಗೆ ತೆರೆದಿಡುವ ಬಗ್ಗೆ ಈ ಐ.ಎಂ.ಎಫ್. ಗುಲಾಮ ಬುದ್ಧಿಯ ಸರಕಾರ ಯೋಚಿಸುತ್ತಿದೆ. ಯೋಚಿಸುತ್ತಿರುವುದಷ್ಟೇ ಅಲ್ಲ, ಆಗಲೇ ಜನಗಳಿಗೆ ತಿಳಿಸದಿದೆಯೇ ಎಲ್.ಐ.ಸಿ. ಬ್ರಿಟಿಷ್ ವಿಮಾ ಕಂಪೆನಿ ಸನ್‌ಲೈಫ್‌ನೊಂದಿಗೆ. ಒಂದು ಒಪ್ಪಂದಕ್ಕೆ ಬರುವಂತೆ ಮಾಡಿದೆ. ಒಂದು ಅತ್ಯುತ್ತಮ ಸೇವೆ ಸಲ್ಲಿಸಿದ ರಾಷ್ಟ್ರೀಯ ಸಂಸ್ಥೆಯನ್ನು ನಾಶಮಾಡಿ ದೇಶದ ವಿಮಾ ಉದ್ದಿಮೆಯನ್ನು ವಿದೇಶೀ ರಕ್ಕಸ ಕಂಪೆನಿಗಳು ಲೂಟಿ ಹೊಡೆಯಲು ಹಾದಿ ಸಿದ್ಧಗೊಳಿಸುತ್ತಿದೆ ನರಸಿಂಹರಾವ್ ಮನಮೋಹನ್ ಸಿಂಗ್ ಕೂಟ.

●

ಅದ್ಭುತ ಯಶಸ್ಸು.......

ಪುಟ 1ರಿಂದ

ಬೆದರಿಸುತ್ತಿದ್ದಾರೆ, ದೇಶದ ಬಹುಪಾಲು ಜನಕ್ಕೆ ಇಲ್ಲದ ಸೌಲಭ್ಯಗಳನ್ನು ಕೇಳುತ್ತಿದ್ದಾರೆ ಎಂದೆಲ್ಲಾ ಇದ್ದಕ್ಕಿದ್ದಂತೆ ದೇಶದ ಬಡವರ ನೆನಪುಮಾಡಿಕೊಂಡು ಆಳುವ ಜನಗಳ ಬಾಲಬಡುಕರ ಪ್ರಚಾರದ ನಡುವೆ ಮುಷ್ಕರ ಯಶಸ್ವಿಯಾಗಿ ನಡೆಯಿತು. ಇಂತಹ ಅಪಪ್ರಚಾರಗಳು ದುಡಿಯುವ ಜನರ ಕೆಲವು ಇನ್ನೂ ಪ್ರಜ್ಞಾವಂತರಾಗದ ವಿಭಾಗಗಳನ್ನು ಮೋಸ ಮಾಡುವಲ್ಲಿ ಯಶಸ್ವಿಯಾದರೂ ದೇಶದ ಪ್ರಜ್ಞಾವಂತ ಕಾರ್ಮಿಕ ಆಂದೋಲನ ಅರವತ್ತರ ದಶಕದಲ್ಲಿ ಬ್ಯಾಂಕ್ ವಿಮಾ ನೌಕರರ ಹೋರಾಟದಿಂದಲೇ ತುಟ್ಟಿಭತ್ಯೆ ಈಗ ಯಾರೂ ಮಾತಿನಲ್ಲಿ ನಿರಾಕರಿಸಲಾಗದ ಸೌಲಭ್ಯವಾಗಿಬಿಟ್ಟಿದೆ. ಈಗಲೂ ಹಲವು ಅಸಂಘಟಿತ

ಕಾರ್ಮಿಕ ವಿಭಾಗಗಳ ಹೋರಾಟಗಳಿಗೆ ನಾಂದಿ ಹಾಡಿದ ಹೋರಾಟವದು ಎಂಬುದನ್ನು ಮರೆತಿಲ್ಲ, ಅದೇ ರೀತಿ ದೇಶದ ಕಾರ್ಮಿಕ ವರ್ಗಕ್ಕೆ ಪೆನ್ಷನ್‌ನಂತಹ ಇನ್ನೊಂದು ಸಾಮಾಜಿಕ ಭದ್ರತಾ ಸೌಲಭ್ಯವನ್ನು ಪಡೆಯುವ ಹೋರಾಟವನ್ನು ಭಾರತದ ಸಮಸ್ತ ಕಾರ್ಮಿಕ ವರ್ಗದ ಪರವಾಗಿ ಬ್ಯಾಂಕ್, ವಿಮಾ ನೌಕರರು ಆರಂಭಿಸಿದ್ದಾರೆ ಎಂದು ದೇಶದ ಕಾರ್ಮಿಕ ಆಂದೋಲನ ಈ ಮುಷ್ಕರಕ್ಕೆ ಬೆಂಬಲ ನೀಡಿತು. ಅಷ್ಟೇ ಅಲ್ಲ ಸಂಘಟಿತ ಕಾರ್ಮಿಕರು ಮುಷ್ಕರ ನಡೆಸಿದಾಗ ಮಾತ್ರ ಬಡವರನ್ನು ನೆನಸಿಕೊಳ್ಳುವ ಮಂದಿ ಸಮಾನತೆಯ ಸಮಾಜದ ಕನಸು ಕಂಡು ಅದಕ್ಕಾಗಿ ಬ್ರಿಟಿಶ್ ಸಾಮ್ರಾಜ್ಯಶಾಹಿಗಳ ನೇಣುಗಂಬವೇರಿದ ಭಗತ್‌ಸಿಂಗ್ ಹುತಾತ್ಮರಾದ ದಿನದಂದೇ ಅಮೇರಿಕನ್

ಕಂಪೆನಿ ಮ್ಯಾಕ್‌ಡೊನಾಲ್ಡ್ ಚಿಕನ್‌ಗಳು ಭಾರತಕ್ಕೆ ಈಗ ಅಗತ್ಯ ಎಂದು ಹೇಳಿ ಅದಕ್ಕೆ 'ತುಂಬು ಹೃದಯದ' ಸ್ವಾಗತ ನೀಡಿದ್ದಾರೆ. ಭಾರತದ ಬಹುಪಾಲು ಹಳ್ಳಿಗಳು, ಹಲವಾರು ನಗರಗಳೂ ಕೂಡ' ಕುಡಿಯುವ ನೀರಿನ ಸಮಸ್ಯೆಯಿಂದ ನರಳುತ್ತಿರುವಾಗ ಅಮೇರಿಕಾದ ಲೆಹರ್‌ಪೆಪ್ಸಿಯೇ ಭಾರತದ ಜನಕ್ಕೆ 'ಈ ಕಾಲದ ಆಯ್ಕೆ'ಯೆಂದು ಯಾವ ನಾಚಿಕೆಯೂ ಇಲ್ಲದೆ ಆರ್ಭಟಿಸುತ್ತಿದ್ದಾರೆ ಎಂದೂ ಭಾರತದ ಕಾರ್ಮಿಕ ವರ್ಗಕ್ಕೆ ತಿಳಿದಿದೆ. ಬ್ಯಾಂಕ್ ವಿಮಾ ನೌಕರರು 'ಖಾಸಗೀಕರಣ'ದ ವಿರುದ್ಧ ನಡೆಸುವ ಹೋರಾಟ ಭಾರತದ ದುಡಿಯುವ ಜನರೆಲ್ಲರ ಹೋರಾಟ ಎಂದೂ ಅರಿತಿದ್ದಾರೆ.

ಕನಿಷ್ಟ ಕೂಲಿ ನಿರ್ಣಯಿಸಿ ಜಾರಿಗೊಳಿಸಲು ಆಗ್ರಹ

ಉಡುಪಿ ಜಿಲ್ಲಾ ಕೈಗಾರಿಕೆಗಳ ಕಾರ್ಮಿಕರಿಗೆ ಅಸಂಘಟಿತ ಕಾರ್ಮಿಕರೂ ಸೇರಿದಂತೆ ಕನಿಷ್ಠ ಕೂಲಿ ಕಾಯಿದೆಯಂತೆ 2 ವರ್ಷಗಳಿಗೊಮ್ಮೆ ಕನಿಷ್ಠ ಕೂಲಿಯನ್ನು ಪುನರ್ನಿರ್ಣಯಿಸಬೇಕಾಗಿದ್ದರೂ ಕರ್ನಾಟಕ ಸರಕಾರ ಅನೇಕ ಕೈಗಾರಿಕೆಗಳ ಕಾರ್ಮಿಕರ ಕೂಲಿಯನ್ನು ಪುನಃವಿಮರ್ಶೆ ಮಾಡದೆ ಹತ್ತಾರು ವರ್ಷಗಳೇ ಕಳೆದಿವೆ. ಸದ್ಯದ ವಿಪರೀತ ಬೆಲೆ ಏರಿಕೆಯಿಂದಾಗಿ ಅಸಂಘಟಿತ ಕಾರ್ಮಿಕರು ಸೇರಿದಂತೆ ಎಲ್ಲಾ ಕೈಗಾರಿಕೆಗಳ ಕಾರ್ಮಿಕರಿಗೆ ಕನಿಷ್ಟ ಕೂಲಿ ರೂ. 1250 ನಿರ್ಣಯಿಸಿ, ಏರಿಳಿತ ತುಟ್ಟಿಭತ್ಯೆಯನ್ನು ಪಾಯಿಂಟಿಗೆ 5 ಪೈಸೆಯಂತೆ ನೀಡುವಂತಾಗಬೇಕು ಎಂದು ನಿರ್ಣಯವನ್ನು ದಿನಾಂಕ 23-3-93 ರಂದು ಉಡುಪಿಯ ರಾಜ್ಯ ಸರಕಾರಿ ನೌಕರರ ಭವನದಲ್ಲಿ ಸೇರಿದ ಉಡುಪಿ ತಾಲೂಕು ಜನರಲ್ ವರ್ಕರ್ಸ್ ಯೂನಿಯನ್ 21 ನೇ ವಾರ್ಷಿಕ ಮಹಾ ಸಭೆಯಲ್ಲಿ ಅಂಗೀಕರಿಸಲು [illegible] ಒತ್ತಾಯಿಸಲಾಗಿದೆ.

[illegible] ಅಧ್ಯಕ್ಷತೆಯನ್ನು ಶ್ರೀ ಡೇವಿಡ್ [illegible] ವಹಿಸಿದ್ದರು. ಕಾರ್ಯದರ್ಶಿ ಎ. [illegible] ವರದಿ ಓದಿದರು. ವಾರ್ಷಿಕ ಲೆಕ್ಕಪತ್ರ [illegible] ಮಂಡಿಸಿದಂತೆ ವರದಿಯನ್ನು ಅಂಗೀಕರಿಸಲಾಯಿತು.

ಸಭೆಗೆ ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ತಾಲೂಕು ಪ್ರೆಸ್ ವರ್ಕರ್ಸ್ ಯೂನಿಯನ್‌ನ ಶ್ರೀ ರಮೇಶ್ ಮೆಂಡನ್, ನೈಗ ಕಾರ್ಮಿಕರ ಮುಂದಾಳು ಶ್ರೀ ಫ್ರೆಡ್ರಿಕ್ ಅಲ್ಬರ್ಟ್ ಸೋನ್ಸ್. ಹಿರಿಯ ಕಾರ್ಮಿಕ ಮುಂದಾಳು ಕಮಲ್ ಉಮ್ಮರ್, ಮತ್ತು ಡಿ.ವೈ.ಎಫ್.ಐ ಉಡುಪಿ ಸಮಿತಿ ಕಾರ್ಯದರ್ಶಿ ಪಿ. ವಿಶ್ವನಾಥ ರೇ ಮೊದಲಾದವರು ಶುಭಕೋರಿ ಮಾತನಾಡಿದರು. ಕೊನೆಯಲ್ಲಿ ರವೀಂದ್ರ ಧನ್ಯವಾದ ಸಲ್ಲಿಸಿದರು.

ದಾಂಡೇಲಿ ನಗರ ಸಭೆ ಅವ್ಯವಹಾರ ತನಿಖೆಗೆ ಒತ್ತಾಯ

ದಾಂಡೇಲಿ • ನಗರ ಸಭೆ ಆಡಳಿತವು ಕಾಂಗ್ರೆ ಮುಖಂಡತ್ವದಲ್ಲಿ ಮೂರು ವರ್ಷ ಮುಗಿಯುತ್ತಾ ಬಂದರೂ ಅಧ್ಯಕ್ಷತೆಯನ್ನು ವಹಿಸಿಕೊಂಡ ಶ್ರೀ ಮಾರ್ಕ್ ಕೆ.ಎಸ್. ಪಾಟೀಲರ ದುರಾಡಳಿತಕ್ಕೆ ಕೊನೆ ಇಲ್ಲದೆ, ನಗರ ನಾಗರಿಕರು ಪೌರಸೌಲಭ್ಯಗಳಿಂದ ವಂಚಿತರಾಗಿದ್ದಾರೆ ಸರಕಾರದಿಂದ ಮಂಜೂರಾದ 1.28 ಕೋಟಿ ರೂ ಮೊತ್ತದ ಸಮಗ್ರ ನೀರು ಸರಬರಾಜು ಕಳೆದ ನಾಲ್ಕು ವರ್ಷಗಳಿಂದ ಕೈಗೆತ್ತಿಕೊಂಡಿದ್ದು ರಾಜ್ಯದಲ್ಲಿ ಕಾಂಗ್ರೆ ಸರಕಾರವಿದ್ದರೂ ಸಹ ನಗರ ಜನತೆಗೆ ಕುಡಿಯುವ ನೀರಿನ ಬವಣೆ ತಪ್ಪಲಿಲ್ಲ. ಅಲ್ಲದೇ ನಗರ ನೈರ್ಮಲ್ಯ ಕುಂಠಿತಗೊಂಡು ನಗರಸಭೆಯ ದೈನಂದಿನ ಕೆಲಸಗಳು ಸಂಪೂರ್ಣ ನಿಂತುಹೋಗಿವೆ.

ಕಳೆದ ಒಂದೂವರೆ ವರ್ಷಗಳಿಂದ ಸ್ವಹಿತಾಸಕ್ತಿ ಭ್ರಷ್ಟಾಚಾರ, ಕಳಪೆ ಕೆಲಸ ಮತ್ತು ಅಸಮರ್ಥ ಆಡಳಿತ ಕುರಿತು ಸರಕಾರದ ಗಮನಕ್ಕೆ ತಂದು ಜಿಲ್ಲಾಧಿಕಾರಿಗಳಿಂದ ಸಮಗ್ರ ತನಿಖೆ ನಡೆಸಲಾಗಿದ್ದು ಸರಕಾರದ ವಿಳಂಬ ನೀತಿಯಿಂದ ಇಂತಹ ತಪ್ಪಿತಸ್ಥರ ಮೇಲೆ ಯೋಗ್ಯ ಕ್ರಮ ಕೈಗೊಳ್ಳುವಲ್ಲಿ ಹಿಂದೇಟು ಹಾಕಲಾಗುತ್ತಿದೆ.

ಆಡಳಿತಾರೂಢ ಅಧ್ಯಕ್ಷರ ಬೆಂಬಲಿತ ಹತ್ತು ಜನ ಸದಸ್ಯರು ಅವರ ಮೇಲೆ ಗಂಭೀರ ಆರೋಪ ಹೊರಿಸಿ ಅವರಿಗಿತ್ತ ಬೆಂಬಲ ಹಿಂತೆಗೆದುಕೊಂಡ ವಿಷಯ ಪತ್ರಿಕೆಗಳಲ್ಲಿ ವರದಿಯಾದರೂ ಅಧ್ಯಕ್ಷ ಅಧಿಕಾರ ಲಾಲಸೆಯಿಂದ ಕುರ್ಚಿಗಂಟಿಕೊಂಡಿದ್ದು, ಮಾಸಿಕ ಸಭೆಯಲ್ಲಿ ತಾವೇ ತಂದ ವಿಷಯಗಳು ಬಹುಮತವಿಲ್ಲದೆ ಬಿದ್ದು ಹೋದರು ನೈತಿಕತೆ ಪರಿಜ್ಞಾನವಿಲ್ಲದೆ ಅಧಿಕಾರದಲ್ಲಿ ಮುಂದುವರೆದಿದ್ದಾರೆ. ನೈತಿಕತೆಯನ್ನರಿತು ಉಪಾಧ್ಯಕ್ಷರು ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟು ತೆರವು ಮಾಡಿದ್ದಾರೆ. ಇಂತಹ ನಗರ ಸಭೆಯ ದುರಾಡಳಿತವನ್ನು ವಿರೋಧಿಸಿ ದಿನಾಂಕ ಮಾರ್ಚ್ 16,1993 ಮಂಗಳವಾರ ಸಂಜೆ 6 .30ಕ್ಕೆ ಸಂತೇ ಮೈದಾನದಲ್ಲಿ ನಗರ ಸಭೆಯ ಮಾಜಿ ಅಧ್ಯಕ್ಷ ಸಿ.ಪಿ.ಐ(ಎಂ) ನ ಕಾಂ. ಟಿ.ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯನ್ನು ಏರ್ಪಡಿಸಲಾಯಿತು. ಸಭೆಯನ್ನುದ್ದೇಶಿಸಿ ಸಿ.ಪಿ.ಐ.(ಎಂ) ನ ಕಾಂ ಹರೀಶ್‌ನಾಯ್ಕ ಜನತಾದಳದಿಂದ ಪ್ರಮೋದ ಹೆಗಡೆ, ಆರ್. ಎಸ್.ನಾಯ್ಕ, ವಿ.ಎ. ಕೋನಾಪುರ, ಸಿಪಿಐ(ಎಂ) ನ ಕಾಂ. ಅಕ್ರಮಖಾನ ರವರು ಮಾತನಾಡಿದರು

ದಿನಾಂಕ ಮಾರ್ಚ್ 18,1993 ರಂದು ನಗರ ಸಭೆಯ ಎದುರಿಗೆ ಸಿಪಿಐ(ಎಂ) ಹಾಗೂ ಜನತಾದಳದ ಜಂಟಿ ಸಹಯೋಗದೊಂದಿಗೆ ಎರಡೂ ಪಕ್ಷಗಳ ನೂರಾರು ಕಾರ್ಯಕರ್ತರು ಧರಣಿ ಸತ್ಯಾಗ್ರಹವನ್ನು ನಡೆಸಿದರು. ಈ ಕಾರ್ಯಕ್ರಮದಲ್ಲಿ ದಾಂಡೇಲಿ ನಾಗರಿಕರು ತುಂಬಾ ಉತ್ಸಾಹದಿಂದ ಪಾಲ್ಗೊಂಡಿದ್ದರು. ಸಿಪಿಐ(ಎಂ) ಕಾರ್ಯದರ್ಶಿ ಮಂಜುನಾಥ ಫುಲಕರ, ಜನತಾದಳ ಅಧ್ಯಕ್ಷರಾದ ವಿ.ಎ. ಕೋನಾಪುರರವರು ಪತ್ರಿಕಾ ಪ್ರಕಟನೆ ಹೊರಡಿಸಿದ್ದಾರೆ.

ಡಿ.ವೈ.ಎಫ್.ಐ. ನಿಂದ 'ಭಯೋತ್ಪಾದಕ ಭೂತದಹನ'

ಇತ್ತೀಚೆಗೆ ಮುಂಬೈಯಲ್ಲಿನ ವಿದೇಶಿ ಕೈವಾಡದಿಂದ ನಡೆಯಿತೆನ್ನಲಾದ ಬಾಂಬ್ ಆಸ್ಫೋಟವನ್ನು ಡಿ.ವೈ.ಎಫ್.ಐ. ಜಿಲ್ಲಾ ಸಮಿತಿ ಖಂಡಿಸಿದೆ.

ಇಂತಹ ಶಕ್ತಿಗಳ ವಿರುದ್ಧ ದೇಶಪ್ರೇಮಿ ಜನರು ಹೋರಾಟ ಮಾಡುವುದರ ಮೂಲಕ ದೇಶದ ಭದ್ರತೆಯನ್ನು ಉಳಿಸಬೇಕಾಗಿದೆ ಎಂದಿದೆ.

ಈ ನಿಟ್ಟಿನಲ್ಲಿ ಡಿ.ವೈ.ಎಫ್.ಐ. ಬೆಂಗಳೂರು ಜಿಲ್ಲಾ ಸಮಿತಿಯ ನೇತೃತ್ವದಲ್ಲಿ ಮಾರ್ಚ್ 1[illegible] ರಂದು ಪ್ರತಿಭಟನಾ ಮೆರವಣಿಗೆ ನಡೆಸಿ ನಗರ ಪುರಭವನದ ಮುಂದೆ ಭಯೋತ್ಪಾದಕ ಭೂತ ದಹನ ಮಾಡಲಾಯಿತು.

ಡಿ.ವೈ.ಎಫ್.ಐ ಜಿಲ್ಲಾ ಅಧ್ಯಕ್ಷರಾದ ಟಿ. ಶಿವಶಂಕರ್ ಸ್ವಾಗತಿಸಿ ಮಾತನಾಡಿದರು. ರಾಜ್ಯ ಕಾರ್ಯದರ್ಶಿ ಗುರುಶಾಂತ್ ದೇಶದ ಸಮಗ್ರತೆ ಕಾಪಾಡಲು ಎಲ್ಲಾ ಪ್ರಜಾಸತ್ತಾತ್ಮಕ ಶಕ್ತಿಗಳು ಒಂದಾಗಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು. ಜಿಲ್ಲಾ ಕಾರ್ಯದರ್ಶಿ ಗೋಪಾಲಕೃಷ್ಣ ರವರು ಭಯೋತ್ಪಾದನೆ ಹತ್ತಿಕ್ಕುವುದರೊಂದಿಗೆ ದೇಶದ ಐಕ್ಯತೆಯನ್ನು ಕಾಪಾಡಬೇಕೆಂದು ವಿನಂತಿಸಿದರು.

"ಯೆಲ್ಟ್‌ಸಿನ್‌ರ ಜುಟ್ಟು ಹಿಡಿದು ಬಗ್ಗಿಸಿದರು"

ಶರತ್ ಚಂದ್ರ

ಜನಾಭಿಪ್ರಾಯ ಸಂಗ್ರಹಣೆ ನಡೆಸಿಯೇ ನಡೆಸುತ್ತೇನೆ, ಜನರ ಬೆಂಬಲ ಪಡೆದೇ ಪಡೆಯುತ್ತೇನೆ ಎಂದು ಹಮ್ಮು ತೋರಿಸುತ್ತಾ ಸರ್ವಾಧಿಕಾರೀ ನಿಲುವು ಪ್ರದರ್ಶಿಸುತ್ತಿದ್ದ ರಶ್ಯಾದ ಅಧ್ಯಕ್ಷ ಯೆಲ್ಟ್‌ಸಿನ್ ರಶ್ಯಾದ ಸಂಸತ್ತು ಜನಾಭಿಪ್ರಾಯ ಸಂಗ್ರಹದಲ್ಲಿ ರಶ್ಯಾ ಈಗ ಹಿಡಿದಿರುವ ಆರ್ಥಿಕದಾರಿ ಮುಂದುವರಿಯಬೇಕೇ ಎಂಬ ಪ್ರಶ್ನೆಯನ್ನೂ ಸೇರಿಸಬೇಕು ಎಂದು ಹೇಳಿದಾಗ, ಇನ್ನು ತನ್ನ ಸೋಲು ಖಂಡಿತ ಎಂದು ಬಗೆದು ಜನಾಭಿಪ್ರಾಯದ ಕಾರ್ಯಕ್ರಮವನ್ನು ಕೈ ಬಿಡಬೇಕಾಗಿ ಬಂದಿದೆ.

ಇದರ ಮೊದಲು ಅಧ್ಯಕ್ಷ ಯೆಲ್ಟ್‌ಸಿನ್ ವಿರುದ್ಧ ದೋಷಾರೋಪಣೆಗೆ ಬಗ್ಗೆ ಪರಿಶೀಲಿಸಲು ಸೇರಿದ್ದ ಜನತಾ ಪ್ರತಿನಿಧಿಗಳ ಕಾಂಗ್ರೆಸ್ ದೋಷಾರೋಪಣೆ, ಅವರನ್ನು ಅಧಿಕಾರದಿಂದ ಕೆಳಗಿಳಿಸುವ ನಿರ್ಣಯವನ್ನು ಮತದಾನಕ್ಕೆ ಹಾಕಲಾಯಿತು. ಈ ನಿರ್ಣಯಕ್ಕೆ ಬಹುಮತ ದೊರಕಿತು. 475 ಪ್ರತಿನಿಧಿಗಳು ನಿರ್ಣಯದ ಪರವಾಗಿ ಮತನೀಡಿದರೆ. 377 ಪ್ರತಿನಿಧಿಗಳು ವಿರುದ್ಧ ಮತನೀಡಿದರು. 47 ಜನ ಮತದಾನದಲ್ಲಿ ಭಾಗವಹಿಸಲಿಲ್ಲ. ಆದರೆ ಈಗಿನ ಸಂವಿಧಾನದ ಪ್ರಕಾರ ಅಧ್ಯಕ್ಷೀಯ ದೋಷಾರೋಪಣೆ ಮಂಜೂರಾಗಲು ಕನಿಷ್ಠ ಮೂರನೇ ಎರಡು ಬಹುಮತ ಅಂದರೆ 521 ಮತಗಳು ಬೇಕಾಗಿತ್ತು. ಆದರೆ ಯೆಲ್ಟ್‌ಸಿನ್‌ರ ಪರವಾಗಿ ಮತ ನೀಡಿದವರು ಕೇವಲ ಮೂರನೇ ಒಂದು ಭಾಗ ಮತ್ತು ಅವರ ವಿರುದ್ಧ ಮತ ನೀಡಿದವರು ಹಾಗೂ ಭಾಗವಹಿಸದವರು ಸೇರಿ ಮೂರನೇ ಎರಡು ಭಾಗ ಬಹುಮತವಿತ್ತು ಎಂಬುದು ಗಮನಾರ್ಹ.

ಈ ಕಾಂಗ್ರೆಸ್ ಸಭೆಗೆ ಮೊದಲು ಅಧ್ಯಕ್ಷ ಯೆಲ್ಟ್‌ಸಿನ್ ಹಾಗೂ ಪಾರ್ಲಿಮೆಂಟ್ ಸ್ಪೀಕರ್ ಖುಸ್‌ಬುಲತಾವ್ ಟೆಲಿವಿಷನ್ ಭಾಷಣಗಳನ್ನು ಮಾಡಿದರು. ಯೆಲ್ಟ್‌ಸಿನ್ ತಮ್ಮ ಭಾಷಣದಲ್ಲಿ ಏಪ್ರಿಲ್ 25 ಜನಮತ ಸಂಗ್ರಹ ನಡೆಸುವುದು ಈಗಿನ ಬಿಕ್ಕಟ್ಟಿಗೆ ಪರಿಹಾರ, ತಾನು ಯಾವುದೇ ರಾಜಿಗೆ ಸಿದ್ಧನಿಲ್ಲ ಎಂದರು ಖುಸ್‌ಬುಲತಾವ್ ತಮ್ಮ ಭಾಷಣದಲ್ಲಿ ಈಗಿನ ಬಿಕ್ಕಟ್ಟಿನ ಮೂಲ ಕಾರಣ ಯೆಲ್ಟ್‌ಸಿನ್ನರ 'ಆರ್ಥಿಕ ಸುಧಾರಣೆಗಳು ' ತಂದಿರುವ ಬವಣೆ. ಇದು ಅಧ್ಯಕ್ಷರು ಮತ್ತು ಪಾರ್ಲಿಮೆಂಟ್ ನಡುವೆ ಘರ್ಷಣೆಯಲ್ಲ. ಅಧ್ಯಕ್ಷರು ಪ್ರಜಾಪ್ರಭುತ್ವ ಹೆಸರಿನಲ್ಲಿ ನಾಟಕವಾಡುತ್ತಿದ್ದಾರೆ.ಸಂವೈಧಾನಿಕ ಕೋರ್ಟಿನ ಅಧ್ಯಕ್ಷ ಝೋರ್‌ಕಿನ್ ಈಗಿನ ಬಿಕ್ಕಟ್ಟನ್ನು ಪರಿಹರಿಸಲು ಅಧ್ಯಕ್ಷೀಯ ಮತ್ತು ಪಾರ್ಲಿಮೆಂಟು ಚುನಾವಣೆಯನ್ನು ಈ ವರ್ಷದ ಕೊನೆಯೊಳಗೆ ನಡೆಸಬಹುದು ಎಂದು ಸೂಚಿಸಿದರು.

ಜನತಾಪ್ರತಿನಿಧಿ ಕಾಂಗ್ರೆಸ್‌ನಲ್ಲಿ ಅಧ್ಯಕ್ಷೀಯ ದೋಷಾರೋಪಣೆ ನಿರ್ಣಯಕ್ಕೆ ಅಗತ್ಯ ಮೂರನೇ ಎರಡುಭಾಗ ಬಹುಮತ ದೊರೆಯದ್ದರಿಂದ ಬಿಕ್ಕಟ್ಟು ಬಗೆಹರಿಸುವ ಇತರ ವಿಧಾನಗಳ ಬಗ್ಗೆ ಚರ್ಚೆನಡೆಸುತ್ತಿದೆ.

ಅಧ್ಯಕ್ಷ ಯೆಲ್ಟ್‌ಸಿನ್ ಮತ್ತು ಅವರ ಬೆಂಬಲಿಗರು ಏಪ್ರಿಲ್-25 ಜನಮತಸಂಗ್ರಹದ ಅಧ್ಯಕ್ಷರಿಗೆ ಹೆಚ್ಚು ಅಧಿಕಾರ ಕೊಡುವ ಹೊಸ ಸಂವಿಧಾನದ ಬಗ್ಗೆ ನಡೆಸಲು ಸಲಹೆ ಮಾಡುತ್ತಿದ್ದಾರೆ. ಅಧ್ಯಕ್ಷರ ವಿರೋಧಿಗಳು ಜನಮತ ಸಂಗ್ರಹ ನಡೆಯುವುದಾದರೆ ಆರ್ಥಿಕ ಸುಧಾರಣೆಗಳು ಹೋಗುತ್ತಿರುವ ದಾರಿ ಹಾಗೂ ಶೀಘ್ರ ಚುನಾವಣೆ ಬಗ್ಗೆ ಸಹ ಅದರಲ್ಲಿ ಪ್ರಶ್ನೆಗಳು ಇರಬೇಕೆಂದು ಒತ್ತಾಯಿಸುತ್ತಿದ್ದಾರೆ. ಕಾಂಗ್ರೆಸ್‌ನಲ್ಲಿ ಯೆಲ್ಟ್‌ಸಿನ್ ಮಾಡಿದ ಭಾಷಣದಲ್ಲಿ ತಾವು ಸಂವಿಧಾನವನ್ನು ಉಲ್ಲಂಘಿಸಿರಬಹುದೆಂದು ಪರೋಕ್ಷವಾಗಿ ಒಪ್ಪಿಕೊಂಡರು. ಟೆಲಿವಿಷನ್ ಭಾಷಣದಲ್ಲಿ ಯಾವುದೇ ರಾಜಿತಳ್ಳಿಹಾಕಿದ ಯೆಲ್ಟ್‌ಸಿನ್, ಕಾಂಗ್ರೆಸ್ ಭಾಷಣದಲ್ಲಿ ರಾಜಿಯ ಮನೋಭಾವ ತೋರಿಸಿದರು.

ಇದಕ್ಕಿಂತ ಮೊದಲು ರಾಜಿಗೆ ಅನುವಾಗುವಂತೆ, ಅವರ ಹಲವು ವಿವಾದಾಸ್ಪದ ಮಂತ್ರಿಗಳನ್ನು ಸಂಪುಟದಿಂದ ಕೈಬಿಟ್ಟಿದ್ದಾರೆ. ಅದರಲ್ಲಿ ಉಪಪ್ರಧಾನಿ, ಆರ್ಥಿಕಮಂತ್ರಿ, ಹಣಕಾಸು ಮಂತ್ರಿಗಳು ಸೇರಿದ್ದಾರೆ.

ಜಿಯಾಂಗ್ ಝೆಮಿನ್ ಚೀನಾದ ಅಧ್ಯಕ್ಷರು

ಚೀನಾದ ಕಮ್ಯುನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಜಿಯಾಂಗ್ ಝೆಮಿನ್ ಚೀನಾದ ಜನತಾ ಪ್ರಜಾಪ್ರಭುತ್ವದ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಈಗ ಅಧಿವೇಶನದಲ್ಲಿರುವ ಚೀನಾದ ಪಾರ್ಲಿಮೆಂಟು-ರಾಷ್ಟ್ರೀಯ ಜನತಾ ಕಾಂಗ್ರೆಸ್ ಈ ಚುನಾವಣೆ ಮಾಡಿದರು. ಅವರು ಈಗಾಗಲೇ ಪಕ್ಷದ ಪ್ರಧಾನ ಕಾರ್ಯದರ್ಶಿಯಲ್ಲದೆ ಕೇಂದ್ರೀಯ ಮಿಲಿಟರಿ ಕಮಿಶನ್ ಅಧ್ಯಕ್ಷರೂ ಆಗಿದ್ದಾರೆ. ಮೂರು ಸ್ಥಾನಗಳನ್ನು ಒಂದೇ ವ್ಯಕ್ತಿ ವಹಿಸಿಕೊಳ್ಳುತ್ತಿರುವುದು ಮಾವೋ ನಂತರ ಇದೇ ಮೊದಲು ಎಂದು ಹೇಳಲಾಗಿದೆ.

ಬ್ರಿಟನ್‌ನಲ್ಲೂ ನವ-ನಾಜಿ ಹಿಂಸಾಚಾರ

ಜರ್ಮನಿ ಮತ್ತು ಆಸ್ಟ್ರಿಯಾದಲ್ಲಿ ಪ್ರಮುಖ ಸಮಸ್ಯೆಯಾಗಿರುವ ನವ-ನಾಜಿ ಚಳುವಳಿ ಹಾಗೂ ಜನಾಂಗೀಯ ಹಿಂಸಾಚಾರ ಬ್ರಿಟನ್ನಿಗೂ ಹಬ್ಬುವಂತೆ ಕಾಣುತ್ತಿದೆ. ಇಂತಹ ಹಲವಾರು ನವ-ನಾಜಿ ಸಂಘಟನೆಗಳು ತಲೆಎತ್ತುತ್ತಿವೆ. ಕಳೆದ ನಾಲ್ಕು ವರ್ಷಗಳಲ್ಲಿ ಏಶ್ಯನರು ಮತ್ತಿತರ ಬಿಳಿಯರಲ್ಲದವರ ಮೇಲೆ ಜನಾಂಗೀಯ ಆಕ್ರಮಣ ಹಿಂಸಾಚಾರ ಎರಡು ಪಟ್ಟಾಗಿದೆ. 8 ಸಾವಿರ ಇಂತಹ ಘಟನೆಗಳು ಈ ಬಾರಿ ವರದಿಯಾಗಿದೆ.

ಕಂಬಾಟ್-18 ಎಂಬ ನವ-ನಾಜಿ ಸಂಸ್ಥೆ ಹೊರತರುವ 'ರೆಡ್‌ವಾಚ್' ಎಂಬ ಪ್ರಕಟಣೆ ಜನಾಂಗೀಯ ಭೇದದ ವಿರುದ್ಧ ಹೋರಾಡುವ ವ್ಯಕ್ತಿಗಳ, ಸಂಘಟನೆಗಳ ಹೆಸರು ವಿಳಾಸಗಳನ್ನು ಮುದ್ರಿಸಲಾಗುತ್ತಿದೆ. ಈ ವ್ಯಕ್ತಿಗಳ, ಸಂಘಟನೆಗಳ ಮೇಲೆ ಆಕ್ರಮಣ, ಹಿಂಸಾಚಾರ, ಬೆದರಿಕೆ ಇದರ ಸ್ವಯಂವೇದ್ಯವಾದ ಉದ್ದೇಶ. ಎರಡು ಏಶ್ಯರನ್ನು ವಿನಾಕಾರಣ ಕೊಂದ ನವ-ನಾಜಿ ಯುವಕ ಬಂಧಿತನಾದ ಮೇಲೂ ತಾನು ಬಿಡುಗಡೆಯಾದ ಮೇಲೆ ಇನ್ನಷ್ಟು ಹೆಚ್ಚು ಏಶ್ಯನರನ್ನು ಕೊಲ್ಲುವುದಾಗಿ ಕೊಚ್ಚುತ್ತಿದ್ದನಂತೆ.

ಪಾಕಿಸ್ತಾನದಲ್ಲಿ ರಾಜಕೀಯ ಬಿಕ್ಕಟ್ಟು

ಪಾಕಿಸ್ತಾನದಲ್ಲಿ ನಿಜವಾದ ಅಧಿಕಾರ ತ್ರಿವಳಿಗಳಲ್ಲಿ ಹಂಚಿಹೋಗಿದೆ- ಅಧ್ಯಕ್ಷರು, ಪ್ರಧಾನಮಂತ್ರಿ ಹಾಗೂ ಸೈನ್ಯದ ಮುಖ್ಯಸ್ಥ, ಈ ಮೂರರ ನಡುವೆ ವಿರಸವಾದರೆ ಪಾಕಿಸ್ತಾನದಲ್ಲಿ ಬಿಕ್ಕಟ್ಟು ಉಂಟಾಗುತ್ತದೆ. ಮೂವರಲ್ಲಿ ಒಬ್ಬರು ಇನ್ನೊಬ್ಬರ ಮೇಲೆ ಮಸಲತ್ತು ನಡೆಸುವುದು ಸಾಮಾನ್ಯ. ಪಾಕಿಸ್ತಾನದ ರಾಜಕೀಯ ಚರಿತ್ರೆಯಲ್ಲಿ ಇತ್ತೀಚೆಗೆ ಸೈನ್ಯದ ಮುಖ್ಯಸ್ಥ ತೀರಿಕೊಂಡರು ಅವರ ಜಾಗದಲ್ಲಿ ಅಧ್ಯಕ್ಷರು ಒಬ್ಬ ಕಿರಿಯ ಅಧಿಕಾರಿಯನ್ನು ನೇಮಿಸಿದರು ಇದರಿಂದ ನೇಮಕವಾದ ಈ ಹೊಸ ಸೇನಾ ಮುಖ್ಯಸ್ಥ ಅಧ್ಯಕ್ಷರಿಗೆ ವಿಧೇಯವಾಗಿರುವುದು ಸ್ವಾಭಾವಿಕ, ಆದ್ದರಿಂದ ಅಧ್ಯಕ್ಷರ ಅಧಿಕಾರ ವಿಪರೀತ ಹೆಚ್ಚಾಗಿದೆ ಎಂದು ಪ್ರಧಾನಿ ನವಾಜ್ ಶರೀಫ್‌ಗೆ ಹೆದರಿಕೆಯಾಗಿದೆ. ಆದ್ದರಿಂದ ಪ್ರಧಾನಿ ನವಾಜ್ ಶರೀಫ್ ಅಧ್ಯಕ್ಷರ ಹಲವಾರು ಅಧಿಕಾರಗಳನ್ನು ಕಡಿಮೆಮಾಡುವ ಸಂವಿಧಾನ ತಿದ್ದುಪಡಿ ಸೂಚಿಸಿದ್ದಾರೆ. ನಾಲ್ಕೂ ಸೇನಾ ಮುಖ್ಯಸ್ಥರು, ಮುಖ್ಯ ನ್ಯಾಯಾಧೀಶರುಗಳು, ಹಾಗೂ ರಾಜ್ಯ ಮತ್ತು ರಾಷ್ಟ್ರೀಯ ಆಸೆಂಬ್ಲಿಗಳನ್ನು ನೇಮಕ ಹಾಗೂ ರದ್ದತಿ ಮಾಡುವ ಅಧಿಕಾರಗಳಲ್ಲಿ ಕೆಲವನ್ನು ರದ್ದು ಮಾಡುವುದು ಪ್ರಧಾನಿಯ ಸೂಚನೆ. ಪ್ರಧಾನಿ- ಅಧ್ಯಕ್ಷರ ಈ ತಿಕ್ಕಾಟದಲ್ಲಿ ಆಳುವ ಪಕ್ಷದಲ್ಲೇ ಬಿಕ್ಕಟ್ಟು ಆರಂಭವಾಗಿದೆ. ಇದರ ಹಿಂದೆ ಅಧ್ಯಕ್ಷರ ಕೈವಾಡ ಇದೆ ಎನ್ನಲಾಗಿದೆ. ಮೂವರು ನವಾಜ್ ಶರೀಫ್ ಸಂಪುಟದ ಮಂತ್ರಿಗಳು ರಾಜೀನಾಮೆ ನೀಡಿದ್ದಾರೆ.

ಸುಹಾರ್ತೋ ಆರನೇ ಬಾರಿ ಅಧ್ಯಕ್ಷರು

ಇಂಡೋನೇಶ್ಯಾದಲ್ಲಿ ಅಧ್ಯಕ್ಷ ಸುಹಾರ್ತೋ ಆರನೇ ಬಾರಿ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಇಂಡೋನೇಶ್ಯಾದ ರಬ್ಬರ್ ಸ್ಟಾಂಪ್ ಪಾರ್ಲಿಮೆಂಟ್ ಐದು ವರ್ಷಕ್ಕೊಮ್ಮೆ ಕೇವಲ 20 ನಿಮಿಷಗಳ ಕಾಲ ಸಭೆ ಸೇರುತ್ತದೆ. ಸುಹಾರ್ತೋರನ್ನು ಅಧ್ಯಕ್ಷರಾಗಿ ಪುನರಾಯ್ಕೆ ಮಾಡಲಿಕ್ಕೆ! ಜನರಲ್ ಸುಹಾರ್ತೋರ 27 ವರ್ಷಗಳ ಹಿಂದೆ ಕಮ್ಯುನಿಸ್ಟ್ ಪಕ್ಷ ಕ್ಷಿಪ್ರಕ್ರಾಂತಿ ನಡೆಸಲಿದೆ ಎಂಬ ಆಪಾದನೆ ಮೇಲೆ 10 ಲಕ್ಷ ಕಮ್ಯುನಿಸ್ಟರ ನರಬೇಟೆಯಾಡಿ ಅಧಿಕಾರಕ್ಕೆ ಬಂದ ಮಹಾಶಯ. ಆದ್ದರಿಂದ ಅಮೆರಿಕದ ನೇರ ಆಯ್ಕೆ. ಇಂಡೋನೇಶ್ಯಾದಲ್ಲಿ ಪ್ರಜಾಪ್ರಭುತ್ವ ಇಲ್ಲ! ಮಾನವಹಕ್ಕುಗಳು ಇಲ್ಲ! ಎಂದು ಅಮೇರಿಕಾದ ಆಳರಸು ಬೊಬ್ಬೆ ಹೊಡೆಯುವುದು ಯಾವಾಗಲಾದರೂ ಕೇಳಿದ್ದೀರಾ! ಉಪಾಧ್ಯಕ್ಷ ಪದವಿಗೂ ಸೇನೆಯ ಜನರಲ್ ಒಬ್ಬರನ್ನು 'ಆಯ್ಕೆ' ಮಾಡಲಾಗಿದೆ!

ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ರಾಜೀನಾಮೆಗೆ ಆಗ್ರಹ

ರಾಷ್ಟ್ರದ ಸಂವಿಧಾನವನ್ನೇ ಉಲ್ಲಂಘಿಸಿ ಅತ್ಯುನ್ನತ ನ್ಯಾಯಾಲಯಕ್ಕೆ ದ್ರೋಹ ಬಗೆದು ಡಿಸೆಂಬರ್ ಆರರಂದು ಬಾಬರಿ ಮಸೀದಿಯನ್ನು ಕೆಡವಿರುವ ಹಿಂದೂ ಮೂಲಭೂತವಾದಿಗಳ ಅವಮಾನಕಾರಿಯಾದ ಘಟನೆಯ ವಿರುದ್ಧ ಎಲ್ಲಾ ಜಾತ್ಯಾತೀತ ಶಕ್ತಿಗಳು ಖ್ಯಾತ ಶಿಕ್ಷಣ ತಜ್ಞರು ಪ್ರಚರಾಂದೋಲನಗಳನ್ನು ನಡೆಸಿ ದೇಶದ ಸಂವಿಧಾನವನ್ನು ಎತ್ತಿ ಹಿಡಿದು ಐಕ್ಯತೆಗಾಗಿ ಕರೆ ನೀಡುತ್ತಿರುವಾಗಲೇ, ಮಸೀದಿ ಇದ್ದ ಸ್ಥಳದಲ್ಲೇ ರಾಮಮಂದಿರವನ್ನು ಕಟ್ಟುತ್ತೇವೆಂದು ನಡೆಸಿದ ಸಹಿ ಸಂಗ್ರಹಕ್ಕೆ ಸಹಿ ನೀಡಿರುವ ಮೈಸೂರು ವಿಶ್ವವಿದ್ಯಾನಿಲಯದ ಉಪಕುಲಪತಿ ಎಂ. ಮಾದಯ್ಯನವರ ಕೃತ್ಯ ದೇಶವಿರೋಧಿಯಾಗಿದೆ.

ದೇಶದ ಸಂವಿಧಾನಕ್ಕೆ ಜಾತ್ಯಾತೀತ ರಾಷ್ಟ್ರದ ಮೂಲ ತತ್ವಕ್ಕೆ ಗಂಡಾಂತರಕಾರಿಯಾದ ಹಿಂದೂ ಮತೀಯವಾದಿಗಳಿಗೆ ಬೆಂಬಲಿಸಿರುವ ಎಂ. ಮಾದಯ್ಯನವರು ಉಪಕುಲಪತಿಯವರಾಗಿ ಶಿಕ್ಷಣ ಕ್ಷೇತ್ರದ ಉನ್ನತ ಹುದ್ದೆಯಲ್ಲಿ ಮುಂದುವರೆಯುವ ಅರ್ಹತೆಯನ್ನು ಈ ಮೂಲಕ ಕಳೆದುಕೊಂಡಿದ್ದಾರೆ. ರಾಷ್ಟ್ರದ ಸಂವಿಧಾನವನ್ನೇ ಎತ್ತಿಹಿಡಿಯದಂತಹ ವ್ಯಕ್ತಿಗಳು ಉಪಕುಲಪತಿಯಾಗಿರುವುದು ಶಿಕ್ಷಣ ಕ್ಷೇತ್ರಕ್ಕೆ ಅವಮಾನಕಾರಿಯಾಗಿದೆ.

ಈ ಹಿನ್ನಲೆಯಲ್ಲಿ ರಾಜ್ಯಪಾಲರು ತಕ್ಷಣ ಉಪಕುಲಪತಿಗಳ ರಾಜೀನಾಮೆ ಪಡೆಯಬೇಕು. ರಾಜೀನಾಮೆ ನೀಡದಿದ್ದರೆ ಆ ಸ್ಥಾನದಿಂದ ಎಂ. ಮಾದಯ್ಯನವರನ್ನು ಉಚ್ಚಾಟಿಸಬೇಕೆಂದು ಭಾರತ ವಿದ್ಯಾರ್ಥಿ ಫೆಡರೇಷನ್(ಎಸ್.ಎಫ್.ಐ.)ಕರ್ನಾಟಕ ರಾಜ್ಯ ಸಮಿತಿ ಮಾನ್ಯ ರಾಜ್ಯಪಾಲರನ್ನು ಒತ್ತಾಯಿಸಿದೆ.

ಮಾರಣ ಹೋಮ : ಕಠಿಣ ಶಿಕ್ಷೆಗೆ ಎಸ್.ಎಫ್.ಐ ಆಗ್ರಹ

ಬದನವಾಳ ಗ್ರಾಮದಲ್ಲಿ ಹಾಡುಹಗಲೇ ಮೂವರು ದಲಿತರನ್ನು ಹತ್ಯೆ ಮಾಡಿರುವುದು ಖಂಡನೀಯ. ಈ ಕೃತ್ಯದಲ್ಲಿ ಯಾವುದೇ ಗೌರಾವಾನ್ವಿತ ವ್ಯಕ್ತಿ ಶಾಮಿಲಾಗಿದ್ದರು ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳುವಂತೆ ಬಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ) ರಾಜ್ಯ ಸಮಿತಿ ಸರ್ಕಾರವನ್ನು ಒತ್ತಾಯಿಸಿದೆ.

ಮಾನವೀಯ ಮೌಲ್ಯಗಳಿಗೆ ಕಳಂಕ ತಂದ ದುಷ್ಟ ಶಕ್ತಿಗಳಿಗೆ ಉಗ್ರ ಶಿಕ್ಷೆ ವಿಧಿಸುವುದು ಹಾಗೂ ನೊಂದ ಕುಟುಂಬಗಳಿಗೆ ತಕ್ಷಣ ಪರಿಹಾರ ನೀಡಲು ಎಸ್. ಎಫ್.ಐ. ಒತ್ತಾಯಿಸಿದೆ ಹಾಗೂ ಜಾತಿ ವೈಷಮ್ಯಗಳನ್ನು ಬಿಟ್ಟು ಶಾಂತಿಯುತವಾಗಿ ಬಾಳಲು ಬದನವಾಳ ಜನತೆಯಲ್ಲಿ ವಿನಂತಿಸಿದೆ.

ಶಾಂತಿಗಾಗಿ ಮೈತ್ರಿ ಜ್ಯೋತಿ ಆಚರಣೆ

ಕ್ರಾಂತಿ ವೀರ ಭಗತ್‌ಸಿಂಗ್‌ರವರ ಹುತಾತ್ಮ ದಿನದ ಅಂಗವಾಗಿ ರಾಜ್ಯದ ಎಲ್ಲೆಡೆ ಮೈತ್ರಿ ಜ್ಯೋತಿ ಕಾರ್ಯಕ್ರಮವನ್ನು ಆಚರಿಸಲಾಗಿದೆ. ಕೆಲವು ವಿವರಗಳು ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿದ್ದು ಇನ್ನೂ ಕೆಲವು ಸುದ್ದಿಗಳನ್ನು ಈ ಸಂಚಿಕೆಯಲ್ಲಿ ಕೊಡಲಾಗುತ್ತಿದೆ.

ವಿಜಾಪುರ: ಶಾಂತಿಗಾಗಿ ಮತ್ತು ಕೋಮುಸಾಮರಸ್ಯಕ್ಕಾಗಿ ಮೈತ್ರಿ ಜ್ಯೋತಿ ಎಂಬ ವಿನೂತನ ಕಾರ್ಯಕ್ರಮವನ್ನು ದಿನಾಂಕ 23-3-93 ರಂದು ಭಗತ್‌ಸಿಂಗ್ ಹುತಾತ್ಮ ದಿನವಂದು ಡಿ.ವೈ.ಎಫ್.ಐ. ಮತ್ತು ಎಸ್.ಎಫ್.ಐ. ವಿಜಾಪುರ ಜಿಲ್ಲಾ ಸಮಿತಿಗಳ ಆಶ್ರಯದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಮೈತ್ರಿ ಜ್ಯೋತಿಯನ್ನು ಉದ್ಘಾಟಿಸುತ್ತಾ ಮಾತನಾಡಿದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಎಸ್. ಕೆ ಉಪಾಧ್ಯಾಯ ಅವರು, ತಮ್ಮ ಚಿಕ್ಕ ವಯಸ್ಸಿನಲ್ಲಿ ದೇಶಕ್ಕಾಗಿ ನಗುನಗುತಾ ನೇಣುಗಂಬಕ್ಕೇರಿದ ಹುತಾತ್ಮ ಭಗತ್‌ಸಿಂಗ್, ರಾಜಗುರು , ಸುಖದೇವ ರವರು ಹುತಾತ್ಮರಾಗಿ 62 ವರ್ಷಗತಿಸಿದ ಈ ಸಂದರ್ಭದಲ್ಲಿ ಮೈತ್ರಿಜ್ಯೋತಿ ಹೊತ್ತಿಸಿ ಕತ್ತಲಿನಿಂದ ಬೆಳಕಿನಡೆಗೆ ತರುವ ಪ್ರಯತ್ನ ಇದಾಗಿದೆ. ಅಲ್ಲದೆ ದೇಶಕ್ಕೆ ಬಂದಿರುವ ಗಂಡಾಂತರವನ್ನು ಅರಿತು ವಿದ್ಯಾರ್ಥಿ ಯುವಜನರು ರಾಷ್ಟ್ರೀಯ ಐಕ್ಯತೆ ಸಮಗ್ರತೆಯನ್ನು ಕಾಪಾಡಬೇಕೆಂದು ಕರೆ ನೀಡಿದರು. ಇದೆ ಸಂದರ್ಭದಲ್ಲಿ ಸುಮಾರು ಇನ್ನೂರು ಜನ ವಿದ್ಯಾರ್ಥಿ ಯುವಜನರು ಮೇಣದ ಬತ್ತಿಗಳನ್ನು ಹೊತ್ತಿಸಿ ಮೈತ್ರಿ ಜ್ಯೋತಿಯನ್ನು ಬೆಳಗಿಸಿದರು.

ಈ ಸಭೆಯಲ್ಲಿ ರೈತ ಮುಖಂಡ ಭೀಮಶಿ ಕಲಾದಗಿ ಹಾಗೂ ಕಾರ್ಮಿಕ ಮುಖಂಡರಾದ ಎಲ್.ಕೆ. ಚಂಚಲಕರ್, ನ್ಯಾಯವಾದಿ ಹಾಗೂ ಡಿ.ವೈ.ಎಫ್.ಐ. ಜಿಲ್ಲಾ ಸಮಿತಿ ಸದಸ್ಯರಾದ ಶ್ರೀಧರ್ ಕುಲಕರ್ಣಿ ಅವರುಗಳು ಮಾತನಾಡಿದರು. ವೇದಿಕೆಯ ಮೇಲೆ ಜನತಾದಳದ ಮುಖಂಡ ರಮೇಶ್ ಜೀವಜೀವಣಗಿ ಹಾಜರಿದ್ದರು. ಸಭೆಯ ಅಧ್ಯಕ್ಷತೆಯನ್ನು ಡಿ.ವೈ.ಎಫ್.ಐ. ಜಿಲ್ಲಾ ಅಧ್ಯಕ್ಷ ಮನ್ನು ಸಾಬ ಕಲಾದಗಿ ವಹಿಸಿದ್ದು, ಕಾರ್ಯದರ್ಶಿ ಸದಾನಂದ ಮೋದಿ ಕಾರ್ಯಕ್ರಮವನ್ನು ನಿರ್ವಹಿಸಿದರು.

ಮುಂಡಗೋಡು : ದೇಶದಲ್ಲಿ ಹೆಚ್ಚುತ್ತಿರುವ ಛಿದ್ರಕಾರೀ ಕೋಮುವಾದಿ ಶಕ್ತಿಗಳ ಬೆಳವಣಿಗೆ ಆ ಮೂಲಕ ದೇಶವನ್ನು ಅಭದ್ರಗೊಳಿಸಲು ಪ್ರಯತ್ನಿಸುತ್ತಿವೆ. ಇಂತಹ ದೇಶ ವಿರೋಧಿ ಶಕ್ತಿಗಳ ವಿರುದ್ಧ ವಿದ್ಯಾರ್ಥಿ ಯುವಜನ ಪ್ರಾಣವನ್ನು ಪಣವಾಗಿಟ್ಟು ದೇಶ ಉಳಿಸಿಕೊಳ್ಳಬೇಕೆಂದು ಸ್ಥಳೀಯ ಪದವಿ ಕಾಲೇಜು ಪ್ರಾಂಶುಪಾಲರಾದ ಎಸ್.ಎಮ್.ಹೆಗಡೆ ಹೇಳಿದರು ಅವರು ಮಾರ್ಚ್ 23 ರಂದು ಮುಂಡಗೋಡುನಲ್ಲಿ "ಮೈತ್ರಿ ಜ್ಯೋತಿ" ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತಾನಾಡುತ್ತಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಶಾಂತರಾಮ್ ನಾಯಕ್ ಮಾತನಾಡಿ ಭಗತ್‌ಸಿಂಗ್ ಹುತಾತ್ಮದಿನದಿಂದ ಮಾರ್ಚ್ 30 ರವರೆಗೆ ಕೇಂದ್ರ ಸರಕಾರದ ಜನವಿರೋಧಿ ಬಜೆಟ್ ವಿರುದ್ಧ ಮುಷ್ಕರ ಮತ್ತು ಕಾರ್ಯಕ್ರಮಗಳನ್ನು ವಿವರಿಸಿದರು. ಇನ್ನೊಬ್ಬ ಅತಿಥಿಗಳಾಗಿ ಅಧಿಕಾರಿ ಜೋಶಿಯವರು ಮಾತನಾಡಿದರು. ಗೋಪಾಲಕೃಷ್ಣ ಹೆಗಡೆ ಅಧ್ಯಕ್ಷತೆ ವಹಿಸಿದ್ದು, ಯುವರಾಜ ಕಂಬಾಳಿ ಮಠ ಸ್ವಾಗತಿಸಿ ಕಾರ್ಯಕ್ರಮ ನಿರ್ವಹಿಸಿದರು.

ಸುದ್ದಿಗಳು

— ಪುಟ 6ರಿಂದ —

ಸಮಾವೇಶದ ಆರಂಭದಲ್ಲಿ ಇತ್ತೀಚೆಗೆ ಕುಷ್ಟಗಿಯಲ್ಲಿ ಶರಣಮ್ಮಳ ಅತ್ಯಾಚಾರ ವಿರೋಧಿ ತಹಸೀಲ್ದಾರರ ಮೂಲಕ ರಾಜ್ಯಪಾಲರಿಗೆ ಮನವಿ ಅರ್ಪಿಸಿ ಮೆರವಣಿಗೆಯಲ್ಲಿ ತೆರಳಿದರು. ಮೆರವಣಿಗೆಯ ನೇತೃತ್ವವನ್ನು ಶಕುಂತಲಾ, ಅನಿತಾ, ಮಾದೇವಿ, ಅನಸೂಯ, ನಾಗರತ್ನ ವಹಿಸಿದ್ದರು.

NRNM/BGS-405 MAG(2) PRB DECR 319-78/79

ಹೂಡಿಯಲ್ಲೂ ಪೋಲೀಸ್ ದೌರ್ಜನ್ಯಕ್ಕೆ ಪ್ರತಿಭಟನೆ

ಬೆಂಗಳೂರು ನಗರದ ಬಳಿಯಿರುವ ಹೂಡಿ ಗ್ರಾಮದಲ್ಲಿ 'ಆಶ್ರಯ' ಯೋಜನೆಯ ಹೆಸರಿನಲ್ಲಿ ನಡೆಯುತ್ತಿರುವ ಅಕ್ರಮ, ಅನ್ಯಾಯಗಳನ್ನು ಪ್ರತಿಭಟಿಸಿ ಶಾಂತಿಯುತ ಧರಣಿ ನಡೆಸುತ್ತಿದ್ದ ಗ್ರಾಮಸ್ಥರ ಮೇಲೆ ಜಿಲ್ಲಾಧಿಕಾರಿಗಳು, ಡಿ.ಸಿ.ಪಿ. ನೇತೃತ್ವದಲ್ಲಿ ನಡೆಸಿದ ದೌರ್ಜನ್ಯವನ್ನು ಪ್ರತಿಭಟಿಸಿ ಮಹದೇವಪುರ ಪೋಲಿಸ್ ಠಾಣೆಯ ಎದುರು ಮಾರ್ಚ್ 29 ರಂದು ಶಾಂತಿಯುತ ಧರಣಿ ನಡೆಸುತ್ತಿದ್ದಾಗಲೂ ಅದೇ ರೀತಿ ದೌರ್ಜನ್ಯದ ಪುನರಾವರ್ತನೆಯಾಗಿದ್ದು, ಇದನ್ನು ಬೆಂಗಳೂರು ನಗರ ಪೋಲಿಸ್ ಕಮಿಶನರ್‌ರವರ ಗಮನಕ್ಕೆ ತರಲು ಸಿಪಿಐ(ಎಂ), ಜನತಾದಳ, ದಲಿತ ಸಂಘರ್ಷ ಸಮಿತಿ ಹಾಗೂ ಇತರ ಪ್ರಗತಿಪರ ಸಂಘಟನೆಗಳ ಕಾರ್ಯಕರ್ತರು ಮಾರ್ಚ್ 31 ರಂದು ಪೋಲೀಸ್ ಕಮಿಶನರ್‌ರವರ ಕಚೇರಿಗೆ ಪ್ರತಿಭಟನಾ ಮೆರವಣಿಗೆ ಹಾಗೂ ಧರಣಿಯ ಕಾರ್ಯಕ್ರಮ ಸಂಘಟಿಸಿದ್ದರು. ಮೆರವಣಿಗೆಯನ್ನು ಮಧ್ಯದಲ್ಲೇ ಪೋಲೀಸರು ತಡೆದದ್ದರಿಂದ ಅಲ್ಲೇ ಧರಣಿ ಕೂತರು. ಅಲ್ಲಿಂದ ಸಿ.ಪಿ.ಐ(ಎಂ) ರಾಜ್ಯ ಸೆಕ್ರೆಟಾರಿಯೆಟ್ ಸದಸ್ಯ ವಿ.ಜೆ.ಕೆ. ನಾಯರ್, ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಆರ್. ಶ್ರೀನಿವಾಸ್ ಮತ್ತಿತರ ಮುಖಂಡರಿದ್ದ ನಿಯೋಗವೊಂದು ಪೋಲಿಸ್ ಕಮಿಶನರ್‌ರವನ್ನು ಭೇಟಿ ಮಾಡಿ ಮನವಿ ಅರ್ಪಿಸಿತು.

ಮಾರ್ಚ್ 29 ರಂದು ಶಾಂತಿಯುತ ಧರಣಿ ನಡೆಸುತ್ತಿದ್ದ ಜನರನ್ನು ಬಂಧಿಸಿ ಕೊನೆಯಲ್ಲಿ ಇದ್ದ ಕೆಲವೇ ಪ್ರಮುಖ ಕಾರ್ಯಕರ್ತರ ಮೇಲೆ ಲಾಠಿ ಪ್ರಹಾರ ಮಾಡುವ ಅವಶ್ಯಕತೆಯೇ ಇಲ್ಲದಿದ್ದರೂ ತೀವ್ರವಾದ ಲಾಠಿ ಪ್ರಹಾರ ಮಾಡಿ ಹಲವಾರು ಜನರನ್ನು ಗಾಯಗೊಳಿಸಿದ್ದಾರೆ. ಅಲ್ಲದೆ 22 ಜನರ ಮೇಲೆ ಕ್ರೈ.ನಂ. 47.9 3 ಪ್ರಕಾರ ಕೇಸು ದಾಖಲು ಮಾಡಿದ್ದಾರೆ.

ಅಲ್ಲದೆ ಈ ಹೋರಾಟ ಸಮಿತಿಯ ಪ್ರಮುಖ ನಾಯಕರಾದ ಹೆಚ್. ಎಸ್. ಗೋಪಾಲಗೌಡ, ಗೋಪಾಲ ರೆಡ್ಡಿ ಹಾಗೂ ಇನ್ನಿತರ ಮೇಲೆ ಇವರಿಗೆ ಸಂಬಂಧವಿಲ್ಲ ಸುಳ್ಳು ಕೇಸು ದಾಖಲೆ ಮಾಡಿದ್ದಾರೆ. ಹಾಗೂ ನರಸಿಂಹಮೂರ್ತಿ ಹಾಗೂ ವಿಶ್ವನಾಥ ಎಂಬುವವರನ್ನು ಖುದ್ದಾಗಿ ಕೆಂಪಯ್ಯನವರ ಸಮ್ಮುಖದಲ್ಲೇ ಸಿಕ್ಕಾಪಟ್ಟೆ ಹೊಡೆದು ಅವರ ಮೇಲೆ ಸಹ ಕೇಸು ದಾಖಲೆ ಮಾಡಿದ್ದಾರೆ.

ಅಲ್ಲದೆ ಈ ಪ್ರದೇಶದ ಜನರನ್ನು ಬೆದರಿಸಿ ಭಯಾನಕ ವಾತಾವರಣ ಉಂಟುಮಾಡುತ್ತಿದ್ದಾರೆ.

ಇವರಲ್ಲಿ ಪ್ರಮುಖವಾಗಿ ವರ್ತೂರು ಕ್ಷೇತ್ರದ ಶಾಸಕ ಹಾಗೂ ತೋಟಗಾರಿಕೆ ಮಂತ್ರಿಗಳಾದ ಕೃಷ್ಣಪ್ಪ ಹಾಗೂ ಹಾಲಪ್ಪನವರು ತಮ್ಮ ಮೇಲಿರುವ ಈ ಅವ್ಯವಹಾರ ಮುಚ್ಚಿ ಹಾಕಲು ಡಿ.ಸಿ. ಪಿ. ಕೆಂಪಯ್ಯನವರನ್ನು ಹಾಗೂ ಸ್ಥಳೀಯ ಪೋಲಿಸಿನವರನ್ನು ಅಧಿಕಾರ ಬಲದಿಂದ ದುರುಪಯೋಗಪಡಿಸಿ ಅಮಾಯಕ ಜನರ ಮೇಲೆ ದಮನಕಾರಿ ಕ್ರಮ ಅನುಸರಿಸಿ ಈ ನ್ಯಾಯವಾದ ಹೋರಾಟವನ್ನು ದಮನ ಮಾಡುವ ಸಂಚು ಹೂಡಿದ್ದಾರೆ. ಇವರಲ್ಲಿ ಡಿ.ಸಿ.ಪಿ. ಕೆಂಪಯ್ಯನವರು ಸಹಾ ಶಾಮಿಲಾಗಿರುವುದರಿಂದಲೇ ಈ ಅಮಾಯಕ ಜನರ ಮೇಲೆ ದಮನಕಾರಿ ಕೃತ್ಯ ನಡೆಯುತ್ತಿದೆ ಎಂದು ವಿವರಿಸಿರುವ ಮನವಿ ಪೋಲಿಸ್ ಕಮಿಶನರ್ ಕೂಡಲೇ ಈ ಬಗ್ಗೆ ಪರಿಶೀಲಿಸಿ ಡಿ.ಸಿ.ಪಿ. ಕೆಂಪಯ್ಯನವರನ್ನು ಸಸ್ಪೆಂಡಿನಲ್ಲಿಟ್ಟು ಕೂಲಂಕುಶ ವಿಚಾರಣೆ ನಡೆಸಬೇಕೆಂದೂ, ಅಮಾಯಕ ಜನರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ತಡೆಗಟ್ಟಿ ಅಮಾಯಕರ ಮೇಲೆ ಹಾಕಿರುವ ಸುಳ್ಳು ಮೊಕದ್ದಮೆಗಳನ್ನು ವಾಪಸ್ಸು ಪಡೆಯಬೇಕೆಂದು ಒತ್ತಾಯಿಸಿದೆ.

ನಂತರ ಧರಣಿ ಕೂತ ಕಾರ್ಯಕರ್ತರನುದ್ದೇಶಿಸಿ ವಿ.ಜೆ.ಕೆ. ನಾಯರ್, ಆರ್. ಶ್ರೀನಿವಾಸ್, ಕೃಷಿ ಕೂಲಿಕಾರರ ಸಂಘಟನೆಯ ಅಧ್ಯಕ್ಷ ಜಿ.ಎಸ್. ನಾಗರಾಜ್, ದಲಿತ ಸಂಘರ್ಷ ಸಮಿತಿಯ ಸಂಚಾಲಕ ಮಾವಳ್ಳಿ ಶಂಕರ್ ಹಾಗೂ ಜನತಾದಳ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಅಧ್ಯಕ್ಷ ಅಶ್ವತ್ಥ ನಾರಾಯಣ ರೆಡ್ಡಿಯವರು ಮಾತನಾಡಿದರು.

ಪೋಲೀಸರ ಮಾರ್ಚ್ 29ರ ಕುಕೃತ್ಯವನ್ನು ಖಂಡಿಸಿ ಹಲವಾರು ಸಂಘಟನೆಗಳು ಪತ್ರಿಕಾ ಹೇಳಿಕೆ ನೀಡಿವೆ.

ದಿನಾಂಕ ಮಾರ್ಚ್ 29,1993 ರಂದು ನಡೆದ ಈ ಹಲ್ಲೆಯನ್ನು ಸಿ.ಐ.ಟಿ.ಯು ಖಂಡಿಸಿ ತಪಿತಸ್ಥರ ಮೇಲೆ ಸರ್ಕಾರ ಕಠಿಣ ಕ್ರಮಕೈಗೊಳ್ಳುವಂತೆ ಮತ್ತು ಹಲ್ಲೆಯಲ್ಲಿ ಗಾಯಗೊಂಡವರಿಗೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿದೆ ಹಾಗೂ ಅಕ್ರಮವಾಗಿ ವಶಪಡಿಸಿಕೊಂಡ ನಿವೇಶನಗಳನ್ನು ರದ್ದುಪಡಿಸಿ ಅವನ್ನು ಸೂಕ್ತವಾದವರಿಗೆ ಮರು ಹಂಚಿಕೆ ನಡೆಸಬೇಕೆಂದು ಆಗ್ರಹಪಡಿಸಿದೆ.

ಹರಿಜನ ಕೃಷಿಕರನ್ನು ಮತ್ತು ಬಡ ಕಾರ್ಮಿಕರ ಮೇಲಿನ ಈ ದೌಜನ್ಯವನ್ನು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ ಖಂಡಿಸಿದ್ದು, ಇದು ಹರಿಜನ ಕೃಷಿಕರ ನಾಗರೀಕ ಹಕ್ಕುಗಳ ಮೇಲಿನ ಹಲ್ಲೆ ಎಂದು ಹೇಳಿದೆ.

ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ಕಾರ್ಯಕರ್ತರ ಮೇಲಿನ ಈ ದೌಜನ್ಯವನ್ನು ಭಾರತ ವಿದ್ಯಾರ್ಥಿ ಫೆಡರೇಷನ್, (ಎಸ್. ಎಫ್.ಐ) ತೀವ್ರವಾಗಿ ಖಂಡಿಸಿದೆ. ಈ ಕೃತ್ಯಕ್ಕೆ ನೇತೃತ್ವ ನೀಡಿದ ಡಿ.ಸಿ.ಪಿ ಕೆಂಪಯ್ಯ, ಜಿಲ್ಲಾಧಿಕಾರಿ ಹಾಲಪ್ಪನವರನ್ನು ಸಸ್ಪೆಂಡ್ ಮಾಡಬೇಕು ಮತ್ತು ಭ್ರಷ್ಟ ಮಂತ್ರಿ ಕೃಷ್ಣಪ್ಪನವರನ್ನು ಸಂಪುಟದಿಂದ ಕೈ ಬಿಡಬೇಕೆಂದು ಮುಖ್ಯಮಂತ್ರಿಗಳನ್ನು ಎಸ್. ಎಫ್.ಐ. ಒತ್ತಾಯಿಸಿದೆ.

ಕಲ್ಕತ್ತಾ ಸ್ಫೋಟಗಳು: ನಿಜಸಂಗತಿ

ಮಾರ್ಚ್ 16 ರಂದು ಮಧ್ಯರಾತ್ರಿ ಕಲ್ಕತ್ತೆಯಲ್ಲಿ ನಡೆದ ಭಾರೀ ಸ್ಫೋಟ ಆ ಕಟ್ಟಡದಲ್ಲಿ ಸಂಗ್ರಹಿಸಿಟ್ಟ ಸ್ಫೋಟಕಗಳಿಂದಾಗಿ ನಡೆದಿರಬಹುದು ಎಂದು ಈ ಬಗ್ಗೆ ತನಿಖೆ ಮಾಡುತ್ತಿರುವ ವಿಶೇಷಜ್ಞರು ಅಭಿಪ್ರಾಯಪಟ್ಟಿದ್ದಾರೆಂದು ತಿಳಿದು ಬಂದಿದೆ.

ಒಂದು ಸ್ಪಷ್ಟ ನಿರ್ಣಯಕ್ಕೆ ಇನ್ನೂ ಬರಲಾಗದಿದ್ದರೂ ಆರ್.ಡಿ.ಎಕ್ಸ್, ಪ್ಲಾಸ್ಟಿಕ್ ಪಿ.ಇ.ಟಿ.ಎನ್. ಮುಂತಾದ ಅತ್ಯಾಧುನಿಕ, ಶಕ್ತಿಶಾಲೀ ಸ್ಫೋಟಕಗಳನ್ನು ಇಲ್ಲಿ ಬಳಸಿಲ್ಲ ಎಂದು ಕಂಡು ಬಂದಿದೆ. ಟಿ.ಎನ್.ಟಿ. ಅಥವಾ ನೈಟ್ರೋಗ್ಲಿಸರಿನ್ ನಂತಹ ಸ್ಫೋಟಗಳು ಇದ್ದವೇ ಇಲ್ಲವೇ ಎಂದು ಸ್ಪಷ್ಟವಾಗಿಲ್ಲ. 26 ಸಾಮಾನ್ಯಕ್ಕೆ ಬಾಂಬ್‌ಗಳ ಚೀಲ ಸಿಕ್ಕಿದ್ದು ಇದನ್ನು ಕಂಡರೆ ಬೇರೆ ಯಾವುದೋ ಉದ್ದೇಶಕ್ಕಾಗಿ ಈ ಕಟ್ಟಡದಲ್ಲಿ ಸಂಗ್ರಹಿಸಿಟ್ಟಿದ್ದ ಸ್ಫೋಟಕಗಳು ಆಕಸ್ಮಾತ್ತಾಗಿ ಸಿಡಿದು ಈ ಸ್ಫೋಟ ನಡೆದಿರಬೇಕೆಂದು ಕಾಣುತ್ತದೆ ಕಲ್ಕತ್ತಾ ಸ್ಫೋಟ ಹಾಗೂ ಮುಂಬೈ ಸ್ಫೋಟಗಳ ನಡುವೆ ಯಾವುದೇ ಸಂಬಂಧವಿಲ್ಲ ಎಂದು ಇದುವರೆಗೆ ದೊರೆತಿರುವ ಮಾಹಿತಿಗಳಿಂದ ಅನಿಸುತ್ತದೆ. ಈ ಘಟನೆಯ ಎಲ್ಲಾ ಅಂಶಗಳ ಬಗ್ಗೆ ಹಾಗೂ ಅದಕ್ಕೆ ಕಾರಣರಾದವರ ಬಗ್ಗೆ ಸಂಪೂರ್ಣ ತನಿಖೆ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಜ್ಯೋತಿ ಬಸು ಪಶ್ಚಿಮಬಂಗಾಳ ವಿಧಾನ ಸಭೆಗೆ ತಿಳಿಸಿದ್ದಾರೆ.

ಕಟ್ಟಡದ ಮಾಲಕ ರಶೀದ್ ಖಾನ್ ಹಾಗೂ ಆತನ ಒಬ್ಬ ಸಹೋದ್ಯೋಗಿಯನ್ನು ಬಂಧಿಸಲಾಗಿದೆ. ರಶೀದ್ ಖಾನ್ ಕಲ್ಕತ್ತಾ ನಗರದ ಸಟ್ಟಾ ದೊರೆಗಳಲ್ಲಿ ಪ್ರಮುಖನಾದವ. ಚಂಬಲ್ ಕಣಿವೆಯ ಪುತಲೀಬಾಯಿಯ ಮೊಮ್ಮಗನಾದ ಈತ ಕಲ್ಕತ್ತಾ ನಗರದಲ್ಲಿ ಹಲವು ಕಾನೂನು ಬಾಹಿರ ಹಾಗೂ ಅರೆ ಕಾನೂನು ಬದ್ಧ ವ್ಯವಹಾರಗಳನ್ನು ನಡೆಸುತ್ತಿದ್ದು ಕಳೆದ ವರ್ಷ ಕಲ್ಕತ್ತಾ ಪೋಲೀಸರು ಜೂಜುಕೋರರ ಮೇಲೆ ವ್ಯಾಪಕ ಧಾಳಿ ನಡೆಸಿದ್ದಾಗ ಬಂಧಿತನಾಗಿ, ನಂತರ ಜಾಮೀನಿನ ಮೇಲೆ ಬಿಡುಗಡೆ ಹೊಂದಿ ನಗರ ಬಿಟ್ಟು ಹೋಗಿದ್ದಾನೆಂದು ವರದಿಯಾಗಿದೆ. ತಮ್ಮ ಕಾನೂನು ಬಾಹಿರ ವ್ಯವಹಾರಗಳಿಂದಾಗಿ ರಶೀದ್ ಖಾನ್ ಗ್ಯಾಂಗ್ ಸ್ಫೋಟಕಗಳನ್ನು ಸಂಗ್ರಹಿಸಿಟ್ಟಿತ್ತು ಎಂದು ಭಾವಿಸಲಾಗಿದೆ.

ಕರ್ನಾಟಕದ ಕಾರ್ಮಿಕರಿಂದ

“ಭಾರತ ಬಂದ್”ಗೆ ಸ್ವಾಗತ

ಕೇಂದ್ರ ಸರಕಾರದ ಹೊಸ ಆರ್ಥಿಕ ನೀತಿಗಳ ವಿರುದ್ಧ ಬೆಂಗಳೂರಿನಲ್ಲಿ ನಡೆದ ಕಾರ್ಮಿಕ ಸಂಘಗಳ ಸಮಾವೇಶ 'ಭಾರತಬಂದ್'ಗೆ ಸಿದ್ಧತೆ ನಡೆಸಬೇಕೆಂದು ನಿರ್ಧರಿಸಿದೆ.

ಮಾರ್ಚ್ 27 ರಂದು ಕರ್ನಾಟಕ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿ ಎನ್. ಜಿ.ಓ ಸಭಾಂಗಣದಲ್ಲಿ ಈ ಸಮಾವೇಶ ನಡೆಯಿತು. ಸಿ.ಐ.ಟಿ.ಯು.ನ ಕಾಂ. ಎಸ್. ಸೂರ್ಯನಾರಾಯಣರಾವ್, ಎ.ಐ.ಟಿ.ಯು.ಸಿಯ ಎಂ.ಸಿ. ನರಸಿಂಹನ್, ಜೆ.ಎ.ಎಫ್.ನ ದೀಪಕ್ ಹಾಗೂ ವಿಮಾ ನೌಕರ ಸಂಘದ ಕೆ. ವಿ. ಶ್ರೀನಿವಾಸ್‌ರವರಿದ್ದ ಅಧ್ಯಕ್ಷ ಮಂಡಲಿ ಕಾರ್ಯಕಲಾಪಗಳನ್ನು ನಡೆಸಿ ಕೊಟ್ಟಿತು.

ಎಪ್ರಿಲ್ 14 ರಂದು ನವದೆಹಲಿಯಲ್ಲಿ ನಡೆಯಲಿರುವ ಕೋಮು ಸೌಹಾರ್ದ ರ‍್ಯಾಲಿಯಲ್ಲಿ ಭಾಗವಹಿಸಬೇಕೆಂದು ಭಾರತೀಯ ಕಾರ್ಮಿಕ ಸಂಘಗಳ ಪ್ರಾಯೋಜಕ ಸಮಿತಿಯ ನಿರ್ಣಯವನ್ನು ಸ್ವಾಗತಿಸುವ ಕಲಾಪವನ್ನು ಸಿ.ಐ.ಟಿ.ಯು ರಾಜ್ಯ ಕಾರ್ಯದರ್ಶಿ ವಿ.ಜೆ.ಕೆ. ನಾಯರ್ ಮಂಡಿಸಿದರು. ಎಪ್ರಿಲ್ 15 ರಂದು ಹೊಸ ಆರ್ಥಿಕ ನೀತಿಗಳ ವಿರುದ್ಧ ದೆಹಲಿಯ ರಾಷ್ಟ್ರೀಯ ಸಮಾವೇಶ ನಡೆಸುವ ನಿರ್ಣಯವನ್ನು ಬೆಂಗಳೂರಿನ ಸಮಾವೇಶ ಸ್ವಾಗತಿಸಿತು. 'ಭಾರತ ಬಂದ್'ನ ದಿನಾಂಕವನ್ನು ಈ ಸಮಾವೇಶ ಗೊತ್ತುಪಡಿಸಲಿದೆ ಎಂದು ಪ್ರಾಯೋಜಕ ಸಮಿತಿ ನೀಡಿದ ಪತ್ರಿಕಾ ಹೇಳಿಕೆ ತಿಳಿಸಿದೆ.

ಇನ್ನೊಂದು ನಿರ್ಣಯ ಅಂಗೀಕರಿಸಿದ ಸಮಾವೇಶ ಬದನವಾಳು ಗ್ರಾಮದಲ್ಲಿ ದಲಿತರ ಕೊಲೆಯನ್ನು ಖಂಡಿಸಿ ದಲಿತರ ರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ. ಇರಾಕ್‌ಗೆ ಸಿ.ಐ.ಟಿ.ಯು ಅಧ್ಯಕ್ಷ ಸೂರ್ಯನಾರಾಯಣರಾವ್‌ರವರ ನೇತೃತ್ವದಲ್ಲಿ ತೆರಳುತ್ತಿರುವ ಕಾರ್ಮಿಕ ಮುಖಂಡರ ನಿಯೋಗದ ಮೂಲಕ ಇರಾಕ್ ಜನತೆಗೆ ಕರ್ನಾಟಕ ಪ್ರಾಯೋಜಕ ಸಮಿತಿ ಶುಭಾಶಯ ಕಳಿಸಿದೆ.

ಕಾಂ. ಸೂರಿ ಇರಾಕಿಗೆ ಪ್ರಯಾಣ

ಸಿ.ಐ.ಟಿ.ಯು ಕರ್ನಾಟಕ ರಾಜ್ಯ ಸಮಿತಿಯ ಅಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್‌ರವರು ಮಾರ್ಚ್ 30,1993 ರಂದು ಸಿ.ಐ.ಟಿ.ಯುವಿನ ನಾಲ್ಕು ಜನರ ಅಖಿಲ ಭಾರತ ನಿಯೋಗದ ನಾಯಕರಾಗಿ ಇರಾಕಿಗೆ ಪ್ರಯಾಣ ಕೈಗೊಂಡಿದ್ದಾರೆ. ಅವರಿಗೆ ಸಿ.ಐ.ಟಿ.ಯು ರಾಜ್ಯ ಸಮಿತಿ ಶುಭ ಪ್ರಯಾಣ ಕೋರಿದೆ.

ವೋಲ್ಟಾಸ್ ನೌಕರರ ಸಮ್ಮೇಳನ

ಅಖಿಲ ಭಾರತ ವೋಲ್ಟಾಸ್ ಹಾಗೂ ವೋಲ್ಟಾರ್ ನೌಕರರ ಒಕ್ಕೂಟದ 35 ನೇ ವಾರ್ಷಿಕ ಸಮ್ಮೇಳನ ಬೆಂಗಳೂರಿನಲ್ಲಿ ಮಾರ್ಚ್ 8 ರಿಂದ 13 ರವರೆಗೆ ನಡೆಯಿತು.

ಸಿ.ಐ.ಟಿ.ಯು ಅಧ್ಯಕ್ಷ, ಕಾಂ. ಸೂರ್ಯನಾರಾಯಣರಾವ್ ಹಾಗೂ ಮತ್ತಿತರ ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರು ಈ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ಕೇಂದ್ರದ ಹೊಸ ಆರ್ಥಿಕ ನೀತಿಯನ್ನು ಚರ್ಚಿಸಿದ ಸಮ್ಮೇಳನ ಇದನ್ನು ವಿರೋಧಿಸುವಲ್ಲಿ ದೇಶದ ಕಾರ್ಮಿಕ ಆಂದೋಲನದೊಂದಿಗೆ ವೋಲ್ಟಾಸ್ ಹಾಗೂ ವೋಲ್ಟಾರ್ ನೌಕರರು ಸೇರಿಕೊಳ್ಳುತ್ತಾರೆ ಎಂದು ಘೋಷಿಸಿದೆ. ದೇಶದಲ್ಲಿ ಕೋಮುಸೌಹಾರ್ದ ಕಾಪಾಡಿಕೊಳ್ಳಲು ಶ್ರಮಿಸುವುದಾಗಿ ಸಮ್ಮೇಳನ ನಿರ್ಧರಿಸಿದೆ.

ಸಮ್ಮೇಳನದ ಕೊನೆಯಲ್ಲಿ ಕಾಂ. ಕೆ.ಎಸ್. ಸುಬ್ರಮಣ್ಯ ಅಧ್ಯಕ್ಷರಾಗಿರುವ ಹೊಸ ಮುಖಂಡತ್ವವನ್ನು ಸರ್ವಾನುಮತದಿಂದ ಚುನಾಯಿಸಿತು.

ಸಾದರ ಸ್ವೀಕಾರ

ಕಯ್ಯೂರಿನ ರೈತ ವೀರರು
-- ಫಕೀರ್ ಮಹಮ್ಮದ್ ಕಟ್ಪಾಡಿ — ರೂ.25

ಅಸ್ಪೃಶ್ಯರು
-- ವೈದೇಹಿ — ರೂ. 25

ಹಾನೂಶ್
-- ಭಿಷ್ಮಸಾಹನಿ — ರೂ. 25

ಸೃಜನಶೀಲತೆ
-- ಮಹಾಬಲೇಶ್ವರ್ ರಾವ್ — ರೂ. 25

ನೀಲಿ ಕಂದರ
-- ವಿರುಪಾಕ್ಷ ಕೆ. ಬಣಕಾರ್ — ರೂ. 25

ಇಂದ್ರಜಾಲ
-- ಉದಯ್ ಜಾದೂಗರ್ — ರೂ. 20

ವಿಶ್ವವಿಖ್ಯಾತ ನೈಸರ್ಗಿಕ ವಿಕೋಪಗಳು
-- ಟಿ. ಆರ್. ಅನಂತರಾಮು — ರೂ. 18

ವಿಶ್ವ ವಿಖ್ಯಾತ ನಗರಗಳು
-- ಸಿ.ಆರ್. ಕೃಷ್ಣರಾವ್ — ರೂ. 20

ಹೋರಾಟದ ಕಥೆ
-- ಎಸ್. ಶಂಕರಪ್ಪ — ರೂ. 25

ವಿಶ್ವವಿಖ್ಯಾತ ವೈದ್ಯ ವಿಜ್ಞಾನಿಗಳು
-- ಡಾ. ಎಚ್. ಡಿ ಚಂದ್ರಪ್ಪ ಗೌಡ — ರೂ. 22

ಸುಖದಾಂಪತ್ಯ
-- ಡಾ. ಸಿ.ಆರ್. ಚಂದ್ರಶೇಖರ್ — ರೂ. 10

'ಮನಸ್ಸು' ಇಲ್ಲದ ಮಾರ್ಗ
-- ಡಾ. ಮಾನ ಗುಂಡಿ ಸುಬ್ರಮಣ್ಯಂ — ರೂ. 65

ನೋವಿಗದ್ದಿದ ಕುಂಚ
-- ನೇಮಿಚಂದ್ರ — ರೂ.15

ಭಾರತೀಯ ವಿವಾಹ ಸಂಸ್ಥೆಯ ಇತಿಹಾಸ
-- ರಾಜವಾಡೆ — ರೂ. 28

ಈ ಎಲ್ಲಾ ಪುಸ್ತಕಗಳ ಪ್ರಕಾಶಕರು:
ನವಕರ್ನಾಟಕ ಪ್ರಕಾಶನ. ಎಂಬಾಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-560001

ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಪರವಾಗಿ ಮುದ್ರಕ ಮತ್ತು ಪ್ರಕಾಶಕ ಪಿ.ರಾಮಚಂದ್ರರಾವ್, ಸಂಪಾದಕೀಯ ಕಛೇರಿ: 12, 18ನೇ ಅಡ್ಡರಸ್ತೆ, ತಾವರೆ ಗಾರ್ಡನ್ಸ್, ಸಂಪಂಗಿರಾಮನಗರ, ಬೆಂಗಳೂರು - 560 027, ಫೋನ್: 236462 ಸಂಪಾದಕರು: ಪಿ.ರಾಮಚಂದ್ರರಾವ್